ಹೊಸ ಮನುಷ್ಯ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ನವೆಂಬರ್-೨೦೧೧ ಸಂಚಿಕೆ-೪



ಸ್ಥಿತ್ಯಂತರಗೊಳ್ಳುತ್ತಿರುವ ಅಧಿಕಾರಕೇಂದ್ರಗಳು ಮತ್ತು ಧ್ರುವತಾರೆ

ಜನಪದ ವಿಚಾರದಲ್ಲಿ

ನವೆಂಬರ್ – ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ - ೨೦೧೧
ಸಂಪುಟ - ೧೨
ಸಂಚಿಕೆ - ೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

e-mail : janapada@yahoo.com
web: janapada.net

ಪ್ರಿಯ ತರುಣರಿಗೆ

ತುಂಬಿಹುದು ಜೀವನ
ವಿಫಲತೆಗಳಿಂದ
ಸಫಲತೆ ಬಂದರೆ ಸನಿಹಕೆ
ತಳ್ಳಿದೆನು ದೂರ ಅವುಗಳನ್ನು
ನನ್ನ ದಾರಿಯಿಂದ!

ಅದು ಮೂರ್ಖತೆಯೋ?
ಅಲ್ಲ!...
ಸಫಲತೆ ವಿಫಲತೆಗಳ
ಪರಿಭಾಷೆಯೇ ಇದೆ ಬೇರೆ!
ಇತಿಹಾಸವನು ಕೇಳಿ
ವರ್ಷಗಳ ಹಿಂದೆ ಸಾಧ್ಯವಿದ್ದಿಲ್ಲವೇ
ಪ್ರಧಾನಮಂತ್ರಿಯಾಗಲು?

ಕ್ರಾಂತಿ ಶೋಧನೆಗಾಗಿ
ಬೇರೆಯೇ ಪಥ ಮಾನ್ಯವಾಗಿತ್ತು ನನಗೆ
ತ್ಯಾಗದಪಥ, ಸೇವಾಪಥ, ನಿರ್ಮಾಣಪಥ
ಸಂಘರ್ಷದಪಥ, ಸಂಪೂರ್ಣಕ್ರಾಂತಿಪಥ!
ವಿಫಲತೆಯೆಂದು ಸಾರಿತು ವಿಶ್ವ
ಅವು ಇದ್ದವು ಶೋದನೆಯ ಹಂತಗಳು
ಹಂತಗಳಿವೆ ಅಗಣಿತ
ದಾರಿಯೂ ಇದೆ ಬಹುದೂರ
ನಿಲ್ಲಲಾರೆ ಎಲ್ಲಿಯೂ
ದಾರಿ ಎಷ್ಟೇ ಇರಲಿ ದುರ್ಗಮ
ಆಸೆ ಸ್ವಂತದಾವುದಿಲ್ಲ ನನಗೆ
ಎಲ್ಲ ಈಶ ಅರ್ಪಿತ
ವಿಫಲತೆ ತಂದಿದೆ ಸಮಾಧಾನ
ಧನ್ಯವಾಗಲಿದೆ ವಿಫಲಗೊಂಡ ಜೀವನ
ನೂರು ನೂರು ಬಾರಿ
ಸಮಾನ ಧರ್ಮದ ಪ್ರಿಯ ತರುಣರಿಗೆ
ಸುಗಮವಾಗಲಿ ಕಷ್ಟದ ಈ ದಾರಿ.

(೧೯೭೫ ಚಂಡೀಗಢ ಜೈಲಿನಲ್ಲಿ ಬರೆದದ್ದು)

- ಮೂಲ : ಜೆ.ಪಿ; ಅನು: ಸು.ಕೌ

ವಿಚಾರ ದೀಪ್ತಿ

ಮಾರ್ಚ್ ೨೦೦೫ರ ನನ್ನ ವರ್ತಮಾನ ಪತ್ರಿಕೆಯಲ್ಲಿ ಎರಡು ವರದಿಗಳು ಪ್ರಕಟಗೊಂಡಿವೆ. ಅವುಗಳಿಂದ ನಾನು ವಿಭ್ರಮಿತನಾದೆ. ಮೊದಲನೆಯ ವರದಿ, ತಂದೆ-ತಾಯಿಗಳಿಂದ ಬಹುವಾಗಿ ವಿರೋಧ ಬಂದಿದ್ದರೂ ಕೂಡ ಕರ್ನಾಟಕ ಸರ್ಕಾರ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲೀಷ್ ಕಲಿಸಬಾರದೆಂಬ ನಿಷೇಧವನ್ನು ಹಿಂಪಡೆದಿಲ್ಲವೆಂಬುದು; ಎರಡನೆಯ ವರದಿ, ಕರ್ನಾಟಕದ ಓರ್ವ ಮಂತ್ರಿ ಚೀನಾಕ್ಕೆ ಗಡಿಬಿಡಿಯ ಭೇಟಿಯ ಸಮಯದಲ್ಲಿ ಜೆಹಾಂಗ್‌ಸೊ ಎಂಬ ಪ್ರಾದೇಶಿಕ ಜನತಾ ಕಾಂಗ್ರೆಸ್ಸಿನ ಸ್ಥಾಯಿ ಸಮಿತಿ ತನ್ನ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಕಲಿಸಲು ಕರ್ನಾಟಕ ಸರ್ಕಾರದ ನೆರವು ಬೇಕೆಂದು ಕೋರಿದೆ ಎಂಬುದಾಗಿತ್ತು. ೨೦೦೮ರಲ್ಲಿ ನಡೆಯಲಿದ್ದ ಒಲಂಪಿಕ್ಸ್ ವೇಳೆಗೆ ಪ್ರತಿಯೊಬ್ಬ ಚೀನಿಯನೂ ಇಂಗ್ಲಿಷ್ ಭಾಷಾ ಅಕ್ಷರಸ್ಥನನ್ನಾಗಿ ಮಾಡಬೇಕೆಂಬ ಉದ್ದೇಶ್ಯಕ್ಕನುಗುಣವಾಗಿ ಆ ವಿನಂತಿಯಿತ್ತು. ಭಾರತದ ಅನಿಶ್ಚತತೆ ಮತ್ತು ಚೀನಾದ ನಿಶ್ಚಿತತೆಗಳೆರಡೂ ಯಾವಾಗಲೂ ಬೋಧಕವಾಗಿರುತ್ತದೆ. ಯಾವ ರಾಜ್ಯದ ರಾಜಧಾನಿ ಭಾರತದ ಆರ್ಥಿಕ ಯಶಸ್ಸಿನ ಗುರುತಾಗಿರುವಂಥ ಬೆಂಗಳೂರು ಆಗಿದೆಯೋ ಮತ್ತು ಯಾವುದು ತನ್ನ ಸ್ಪರ್ಧಾತ್ಮಕ ಅನುಕೂಲತೆಯನ್ನು ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವದಿಂದ ಪಡೆದಿದೆಯೋ ಅಂಥ ಕರ್ನಾಟಕ ರಾಜ್ಯ ಪ್ರಾದೇಶಿಕ ಭಾಷಾ ದುರಭಿಮಾನಿಗಳ ಕೈವಶವಾಗಿರುವುದು ವಿಕಟ ಸಂಗತಿಯೆಂದೆನಿಸುತ್ತದೆ. ೧೯೮೦ರ ದಶಕಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮೊಟ್ಟ ಮೊದಲ ಬಾರಿಗೆ ಇಂಗ್ಲಿಷ್ ನಿಷೇಧಗೊಳಿಸಿದ ಹದಿನೈದು ವರ್ಷಗಳ ನಂತರದ ಸಂಗತಿಯಿದು. ಈ ಮಧ್ಯೆ ಬಂಗಾಲ ಮತ್ತು ಗುಜರಾತ್ ರಾಜ್ಯಗಳು ತಮ್ಮ ತಪ್ಪುಗಳನ್ನು ಅರಿತುಕೊಂಡು ಇಂಗ್ಲಿಷ್ ಬೋಧನೆಯತ್ತ ಹಿಂದಿರುಗಿವೆ. ಏಕೆಂದರೆ ಉದ್ಯೋಗಕ್ಕೆ ಅನರ್ಹವಾದ ತಲೆಮಾರನ್ನು ಹುಟ್ಟುಹಾಕಿರುವುದು ಅವುಗಳಿಗೆ ಅರಿವಾಯಿತು. ಈ ವಿವಾದ ಮುಗಿಯಿತು, ಇಂಗ್ಲಿಷ್ ಗೆದ್ದಿತು ಎಂದು ನಾನು ತಿಳಿದಿದ್ದೆ. ಆದರೆ ಕೇರಳ ಮತ್ತು ಕರ್ನಾಟಕವನ್ನೂ ಸೇರಿ ಇನ್ನೂ ಅನೇಕ ರಾಜ್ಯಗಳು ಪಾರ್ಶ್ವವಾಯು ಪೀಡನೆಯಿಂದ ನಿಷ್ಕ್ರಿಯವಾಗಿರುವುದು ಗೊತ್ತಾಯಿತು. ಒಟ್ಟು ಜನಸಂಖ್ಯೆಯ ಕಾಲು ಭಾಗದಷ್ಟು ಜನರು ಜಾಗತಿಕ ಭಾಷೆಯನ್ನು ಅರಿತವರಾಗಿದ್ದಾರೆ ಮತ್ತು ಇನ್ನೂ ಅರ್ಧದಷ್ಟು ಜನರು ಇನ್ನೊಂದು ತಲೆಮಾರು ಕಳೆಯುವುದರೊಳಗಾಗಿ ಇಂಗ್ಲಿಷ್ ಕಲಿಯಬೇಕು ಎಂಬುದಾಗಿ ಜ್ಞಾನಪ್ರಪಂಚದಲ್ಲಿ ಚರ್ಚೆನಡೆಯುತ್ತಿದೆ. ತಮ್ಮ ಇಂಗ್ಲಿಷ್ ಭಾಷಾ ಕಲಿಕೆಯಿಂದ ಯಾವ ಭಾರತೀಯರು ಅನೇಕ ದೇಶಗಳ ಈರ್ಷ್ಯೆಗೆ ಒಳಗಾಗಿದ್ದರೋ ಅಂಥ ಭಾರತೀಯರನ್ನು ಪ್ರಾದೇಶಿಕ ಭಾಷಾ ಸ್ಟಾಲಿನ್‌ವಾದಿಗಳು ತಮ್ಮ ನಿರರ್ಥಕವಾದಗಳಿಂದ "ನಿಮ್ಮ ಮಕ್ಕಳಿಗೆ ಯಾವುದು ಹಿತವೆಂದು ನಿಮಗೆ ಗೊತ್ತಿಲ್ಲ, ನಮಗೆ ಗೊತ್ತಿದೆ" ಎಂದು ಹೇಳುತ್ತಾ ಅವರು ಭಾರತೀಯರ ಮುನ್ನಡೆಯನ್ನು ತಡೆಯುತ್ತಿರುವುದು ದುಃಖದ ಸಂಗತಿ.

– ಗುರುಚರಣ್ ಸಿಂಗ್

ಸ್ಥಿತ್ಯಂತರಗೊಳ್ಳುತ್ತಿರುವ ಅಧಿಕಾರಕೇಂದ್ರಗಳು ಮತ್ತು ಧ್ರುವತಾರೆ

– ಸುರೇಂದ್ರ ಕೌಲಗಿ

ಸುಳಿದಿಲ್ಲವಾವ ಹೊಸ ದರುಶನದ ಹೊಳಪುಂ
ಪಳಗಿದ್ದ ಮನೆಬಿದ್ದ ಕುಂಟಕುರುಡನ ತೆರದಿ
ತಳಮಳಿಸುತಿದೆ ಲೋಕ - ಮಂಕುತಿಮ್ಮ

ಬೆಂಗಳೂರು ಮಹಾನಗರದಲ್ಲಿ ಮೆಟ್ರೋ ರೈಲು ಪ್ರಾರಂಭವಾಗುತ್ತಿದೆ. ಜಗತ್ತಿನ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತನ್ನನ್ನು ಸೇರಿಸಿಕೊಳ್ಳುತ್ತಿದೆ. ಆದರೆ ಇದೇ ಸಮಯದಲ್ಲಿ ಜಗತ್ತಿನ ಆರ್ಥಿಕಶಕ್ತಿ ಕೇಂದ್ರವಾದ ನ್ಯೂಯಾರ್ಕ್ ನಗರದ ವಾಲ್‌ಸ್ಟ್ರೀಟ್‌ಗೆ ಮುತ್ತಿಗೆ ಹಾಕಿ ೨೧ನೇ ಶತಮಾನದ ಬಂಡವಾಳಶಾಹಿತ್ವ, ಅಸಮಾನತೆ, ಆರ್ಥಿಕ ಬಿಕ್ಕಟ್ಟು ಮತ್ತು ಬೆಳೆಯುತ್ತಿರುವ ನಿರುದ್ಯೋಗ ಮತ್ತು ಧನಪಿಪಾಸೆಯ ವಿರುದ್ಧ ಪ್ರತಿಭಟನೆ ನಡೆಯುತ್ತಿತ್ತು. ಈ ಪ್ರತಿಭಟನೆಯ ಅಲೆಯು ಯೂರೋಪಿನಿಂದ ಏಶಿಯಾ ಖಂಡದವರೆಗೆ ವ್ಯಾಪಿಸಿತ್ತು. ಪ್ರತಿಭಟನಕಾರರ ಕೋಪಕ್ಕೆ ತುತ್ತಾಗಿ ರೋಮನಗರ ಹೊತ್ತಿ ಉರಿಯಿತು. ಆ ನಗರಕ್ಕೆ ಉಂಟಾಗಿರುವ ನಷ್ಟವನ್ನು ಸರಿದೂಗಿಸಲು ೧.೪ ದಶಲಕ್ಷ ಡಾಲರ್ ಬೇಕು. ಈ ಪ್ರತಿಭಟನೆಯ ಅಲೆ ಇನ್ನು ಕೆಲವೇ ದಿನಗಳಲ್ಲಿ ಜಗತ್ತಿನ ಎಲ್ಲ ದೇಶಗಳ ಎಲ್ಲ ರಾಜಧಾನಿಗಳನ್ನು ಅಪ್ಪಳಿಸಲಿದೆ. ಅದೊಂದು ಜಾಗತಿಕ ಅರ್ಥವ್ಯವಸ್ಥೆಯ ದುರಂತದ ವಿರುದ್ಧ ಜಾಗತಿಕ ಸ್ತರದ ಸುನಾಮಿಯಾಲಿದೆ. ತನ್ನ ಅಲೆಯ ಹೊಡೆತದಲ್ಲಿ ಇಂದಿನ ಅಧಿಕಾರ ಕೇಂದ್ರಗಳ ಬಿಂದುಗಳಾದ ಒಬಾಮಾ, ಮನಮೊಹನ್‌ಸಿಂಗ್, ಜಪಾನ್ ಮತ್ತು ಚೀನಾದ ಪ್ರಧಾನ ಮಂತ್ರಿಗಳು, ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು, ಆರ್ಥಿಕ ನೀತಿ ನಿರೂಪಕರು ಕೊಚ್ಚಿಕೊಂಡು ಹೋಗಲಿದ್ದಾರೆ. ಇಲ್ಲವೆ ದೂರಗಾಮಿ ಪರಿಣಾಮವಾಗಿ ಅಧಿಕಾರದ ಶಕ್ತಿಕೇಂದ್ರಗಳ ಸ್ಥಿತ್ಯಂತರಗಳಾಗಲಿದೆ. ಅಂತೆಯೇ ಎಲ್ಲ ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಮರುಚಿಂತನೆಗೆ ಒಳಪಡಿಸಲಿದೆ. ಜಾಗತಿಕ ಅರ್ಥವ್ಯವಸ್ಥೆ, ಶಿಕ್ಷಣ ನೀತಿ, ರಾಜಕಾರಣ ಮುಂತಾದವುಗಳೆಲ್ಲ ತೀವ್ರತಮವಾದ ವಿಮರ್ಷೆಗೆ ಒಳಪಡಲಿವೆ. ತುಂಬ ಸನಿಹದ ವರ್ಷಗಳು ಅಗಾಧ ಪ್ರಮಾಣದ ಅಧಿಕಾರ ಕೇಂದ್ರಗಳ ಸ್ಥಿತ್ಯಂತರಗಳನ್ನು ಕಾಣಲಿವೆ. ಇಡೀ ಜಾಗತಿಕ ಮನುಕುಲವೇ ಮಹಾ ಪರಿವರ್ತನೆಯ ದೊಡ್ಡ ತುಯ್ದಾಟಕ್ಕೆ ಸಿಲುಕಲಿದೆ. ತಮಗರಿವಿಲ್ಲದಯೇ ಜ್ಞಾನ, ಐಶ್ವರ್ಯ, ಹಿಂಸೆ ಮುಂತಾದವುಗಳು ಜಗತ್ತಿನ ೨೧ನೇ ಶತಮಾನದ ನಿರ್ಣಾಯಕ ಚಾಲಕಶಕ್ತಿಗಳಾಗಲಿವೆ. ಪ್ರಜಾಸತ್ತಾತ್ಮಕ ದೇಶಗಳಲ್ಲಿಯ ಪ್ರಜಾಸತ್ತೆ

ಅಥವಾ ಪ್ರಭುತ್ವ ತುಂಬ ಬಲಿಷ್ಠವಾಗಲಿದೆ ಅಥವಾ ಆ ಪ್ರಭುತ್ವ ಅರಾಜಕತೆಗೂ ದಾರಿಮಾಡಿಕೊಡುವ ಸಾಧ್ಯತೆಯಿದೆ. ಅಲ್ಲದೆ, ಸರ್ವಾಧಿಕಾರವಿರುವ ದೇಶಗಳಲ್ಲಿ ಆ ಅಧಿಕಾರ ನಿರ್ನಾಮಗೊಂಡು ಹೊಸ ರಾಜಕೀಯ ವ್ಯವಸ್ಥೆ ಸ್ಥಾಪನೆಯಾಗಲಿದೆ. ತಂತ್ರಜ್ಞಾನದ ಮತಿಹೀನ ಮತ್ತು ಪ್ರಶ್ನಾತೀತ ಬಳಕೆ ತೀಕ್ಷ್ಣ ಒರೆಗಲ್ಲಿನ ಪರೀಕ್ಷೆಗೆ ಒಳಪಡಲಿದೆ. ವೈದ್ಯಕೀಯಶಾಸ್ತ್ರ ಮುಂದುವರೆದಂತೆಲ್ಲ ಅದು ಹೆಚ್ಚು ಹೆಚ್ಚು ವಾಣಿಜ್ಯಕರಣಗೊಳ್ಳಲಿದೆ; ಜನಸಾಮಾನ್ಯರ ಕೈಗೆಟುಕದ ಕ್ಷೇತ್ರವಾಗಲಿದೆ. ಅಧಿಕಾರ ಸ್ಥಾನದಲ್ಲಿರುವವರೆಲ್ಲರೂ, ಖಾಸಗಿ ಸೇವಾ ಸಂಸ್ಥೆಯ ಪದಾಧಿಕಾರಿಗಳದಾಗಿರಬಹುದು, ಮಠಮಾನ್ಯಗಳಲ್ಲಿರುವವರದಾಗಿರಬಹುದು, ಇವರೆಲ್ಲರೂ ಸಾಮಾನ್ಯ ಪ್ರಜೆಯ ಪ್ರಶ್ನೆಗೂ ಉತ್ತರ ಕೊಡಬೇಕಾಗುವುದು. ಚುನಾಯಿತ ಪ್ರತಿನಿಧಿಗಳು ಸಾಮಾನ್ಯ ಗ್ರಾಮಪಂಚಾಯಿತಿ ಸದಸ್ಯನಿಂದ ಹಿಡಿದು ರಾಷ್ಟ್ರಪತಿಯವರೆಗಿನ ಎಲ್ಲ ಪ್ರತಿನಿಧಿಗಳ ಮಾತು-ಕೃತಿ-ಖಾಸಗಿ ಜೀವನ ಇತ್ಯಾದಿಗಳೆಲ್ಲ ಸಮಾಜದ ದೃಷ್ಟಿಯ ಕ್ಷ ಕಿರಣಕ್ಕೆ ಒಳಪಡಲಿವೆ. ಇಷ್ಟೇ ಏಕೆ ಬೀದಿಯಲ್ಲಿರುವ ಸಾಮಾನ್ಯ ಪ್ರಜೆ ನಾಗರಿಕ ಶಿಸ್ತು, ಕಾನೂನುಪರಿಪಾಲನೆ ಮುಂತಾದವುಗಳ ಕಾರಣದಿಂದ ನಿರ್ಬಂಧಿತ ಸ್ವಾತಂತ್ರ್ಯವನ್ನು ಮಾತ್ರ ಅನುಭವಿಸಲಿರುವನು. ಚುನಾಯಿತ ಸರ್ಕಾರಗಳು ತಮ್ಮ ಪೂರ್ಣಾವಧಿ ಪೂರೈಸಿಕೊಳ್ಳಲು ಹರಸಾಹಸ ಪಡಬೇಕಾಗುವುದು. ಈ ಸಾಹಸದ ಓಘದಲ್ಲಿ ಅದು ಪ್ರಜೆಗಳಿಗಾಗಿ ರಾಜ್ಯಭಾರ ಮಾಡುವುದಕ್ಕಿಂತ ತನಗಾಗಿ, ತನ್ನಧಿಕಾರದ ಉಳಿವಿಗಾಗಿ ರಾಜ್ಯಭಾರಮಾಡುವುದು. ಅದಕ್ಕಾಗಿ ಸಂವಿಧಾನಾತ್ಮಕವಾಗಿಯೋ, ವಾಮಮಾರ್ಗದ ಮೂಲಕವೋ ಅದಕ್ಕೆ ದತ್ತವಾಗಿರುವ ಸೈನ್ಯಬಲವನ್ನೋ, ಹಣಬಲವನ್ನೋ ಉಪಯೋಗಿಸುವುದು. ಇದಕ್ಕೆ ಉದಾಹರಣೆಯಾಗಿ ದೇಶದಲ್ಲಿ ಸ್ಥಾಪಿತಗೊಳ್ಳಲಿರುವ ಅಣುಸ್ಥಾವರಗಳ ವಿಷಯ. ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಜೈತಾಪುರದಲ್ಲಿ ಮತ್ತು ತಮಿಳುನಾಡಿನ ಕುಂದನಕುಲಂ, ಕರ್ನಾಟಕದ ಗದಗದಲ್ಲಿ. ಇಲ್ಲಿಯ ಜನ ತಮ್ಮ ಪ್ರದೇಶದಲ್ಲಿ ಅಣುಸ್ಥಾವರ ಬೇಡವೆಂದು ಹೋರಾಟಮಾಡುತ್ತಿದ್ದರೂ ಸರ್ಕಾರ ಯಾವ ರೀತಿಯಲ್ಲಾದರೂ ತನ್ನ ವಿಚಾರದಂತೆ ಅಲ್ಲಿ ಅಣುಸ್ಥಾವರಗಳು ನಿರ್ಮಾಣಗೊಳ್ಳುವಂತೆ ಮಾಡುತ್ತದೆ. ಪ್ರಜಾಭಿಪ್ರಾಯಕ್ಕಿಂತ ರಾಜ್ಯಾಭಿಪ್ರಾಯವೇ ಮುಖ್ಯವಾಗಿ ಪ್ರಜೆಗಳಲ್ಲಿಯೇ ತತ್ವಶಃ ಅಡಗಿರುವ ಪ್ರಭುತ್ವ ನಿರ್ಮಾಣದ ಶಕ್ತಿಯನ್ನು ಶೂನ್ಯಗೊಳಿಸುತ್ತದೆ. ಅಧಿಕಾರದಬಿಂದು ಪ್ರಜೆಗಳಿಂದ ಸರ್ಕಾರಕ್ಕೆ ಸ್ಥಿತ್ಯಂತರಗೊಳ್ಳುತ್ತದೆ. ಈ ಪ್ರಕಾರದ ಸ್ಥಿತ್ಯಂತರದ ಪರಿಣಾಮ ತತ್ಕಾಲದಲ್ಲಿ ಅನುಭವಕ್ಕೆ ಬರುವುದಿಲ್ಲ; ಇದರ ಪರಿಣಾಮ ಕೆಲಕಾಲದ ನಂತರ ಅನುಭವಕ್ಕೆ ಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಬೃಹತ್ ಅಣೆಕಟ್ಟುಗಳು ನಮ್ಮ ಮುಂದೆ ಇವೆ. ಪರಿಸರದ ಉಳಿಯುವಿಕೆಗಾಗಿ ದೊಡ್ಡ ಅಣೆಕಟ್ಟುಗಳು ಬೇಡ; ಚಿಕ್ಕ-ಚಿಕ್ಕ ಅಣೆಕಟ್ಟುಗಳ ನಿರ್ಮಾಣದಿಂದ ಪರಿಸರದ ರಕ್ಷಣೆಯ ಜೊತೆಗೆ ನೀರಾವರಿಯ ಉದ್ದೇಶ್ಯವೂ ನೆರವೇರುತ್ತದೆಂದು ಪರಿಸರವಾದಿಗಳು ಅನೇಕ ವರ್ಷಗಳಿಂದ ಹೇಳಿದರೂ, ಪ್ರತಿಭಟನೆ ಮಾಡಿದರೂ ಸರಕಾರ ಯಾವುದಕ್ಕೂ ಕವಡೆಕಿಮ್ಮತ್ತೂ ಕೊಡದೆ ಕಳೆದ ಐವತ್ತು ವರ್ಷಗಳಲ್ಲಿ ೮೭,೦೦೦ ಕೋಟಿ ರುಪಾಯಿಗಳಿಗೂ ಹೆಚ್ಚು ಹಣವನ್ನು ನೀರಾವರಿಗಾಗಿ ಖರ್ಚುಮಾಡಿದೆ. ಆದರೆ ಈ ಅಣೆಕಟ್ಟುಗಳೇ

ಪ್ರವಾಹಕ್ಕೂ, ಭೂಮಿಯ ಸತ್ವಹೀನತೆಗೂ, ವಿಮುಖ ಇಳುವರಿಗೂ, ಸಾರರಹಿತ ಭೂಮಿಗೂ ಕಾರಣವಾಗಿವೆ. ಬೃಹತ್ ಕಟ್ಟೆಗಳ ನಿರ್ಮಾಣದಿಂದ ಲಕ್ಷಾವಧಿ ಎಕರೆ ಕಾಡು ಶಾಶ್ವತವಾಗಿ ಮುಳುಗಿದೆ. ಸಂತ್ರಸ್ತರ ಬವಣೆ ಇನ್ನೂ ಮುಗಿದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತ ಕೇಂದ್ರೀಕೃತವಾಗಿತ್ತು. ಕೇಂದ್ರೀಕೃತ ಆಡಳಿತದಲ್ಲಿ ಅಧಿಕಾರಶಾಹಿ ಉಕ್ಕಿನ ಚೌಕಟ್ಟಾಗಿತ್ತು. ಕೇವಲ ಹತ್ತುಸಾವಿರ ಅಧಿಕಾರಿಗಳು ಮೂವತ್ತು ಮೂರು ಕೋಟಿ ಪ್ರಜಾ ಸಂಖ್ಯೆಯ ದೇಶದ ಆಡಳಿತವನ್ನು ನಿರ್ವಹಿಸುತ್ತಿತ್ತು. ಸ್ವಾತಂತ್ರ್ಯ ಬಂದಮೇಲೆ ಆಡಳಿತ ವಿಕೇಂದ್ರಿತಗೊಳ್ಳುವುದು, ಅಧಿಕಾರಶಾಹಿ ಜನಪರವಾಗುವುದು, ಗ್ರಾಮಗಳು ಸ್ವರಾಜ್ಯ ಪಡೆಯುವುವು, ಗ್ರಾಮೋದ್ಯೋಗಗಳು ಅಭಿವೃದ್ಧಿಹೊಂದಿ ಹಳ್ಳಿಗರ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾಗುವುದು, ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಗಳಿಗೆ ಉತ್ತೇಜನ ಸಿಗುವುದು, ಗ್ರಾಮಗಳ ಸ್ವಾವಲಂಬನೆಯ ಮೂಲಕ ದೇಶ ಸ್ವಾವಲಂಬನೆ ಸ್ಥಾಪಿತವಾಗುವುದೆಂದೆಲ್ಲ ಯೋಚಿಸಲಾಗಿತ್ತು. ಆದರೆ ಸ್ವಾತಂತ್ರ್ಯ ನಂತರ ಈ ಯೋಚನೆಗಳೆಲ್ಲ ತಿರುವುಮುರುವಾದವು. ಸ್ವತಂತ್ರ ಭಾರತದ ಆಡಳಿತ ಹೆಚ್ಚು ಕೇಂದ್ರೀಕೃತವಾಯಿತು, ಅಧಿಕಾರಶಾಹಿ ಜನಹಿತವಿರೋಧಿಯಾಯಿತು, ಗ್ರಾಮಗಳು ದುರ್ಬಲವಾದವು, ಗ್ರಾಮೋದ್ಯೋಗಗಳೂ, ಕೃಷಿಯೂ ತಮ್ಮ ಆರ್ಥಿಕ ಬಲವನ್ನು ಕಳೆದುಕೊಂಡವು. ದೇಶಿ ಭಾಷೆ ಮತ್ತು ಸಂಸ್ಕೃತಿ ಪಾಶ್ಚಿಮಾತ್ಯ ಭಾಷೆಗಳಿಗೆ ಮತ್ತು ಸಂಸ್ಕೃತಿಗೆ ದಾರಿಮಾಡಿಕೊಟ್ಟವು. ಗ್ರಾಮಗಳು ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕಾರಣದಿಂದಾಗಿ ಹೇರಳವಾದ ಹಣವನ್ನು ಪಡೆದು ತಮ್ಮ ಆತ್ಮಾಭಿಮಾನವನ್ನೂ, ಆತ್ಮಸಾಕ್ಷಿಯನ್ನೂ ಕಳೆದುಕೊಂಡವು. ಪೂರ್ಣತಃ ಸರ್ಕಾರವಲಂಬಿಗಳಾದವು. ಸರ್ಕಾರದ ಆರ್ಥಿಕ ಸಹಾಯವಿಲ್ಲದೆ ಹಳ್ಳಿಯ ಜನರು ಒಂದು ಹುಲ್ಲುಕಡ್ಡಿಯನ್ನೂ ಎತ್ತಿ ಇಡದಷ್ಟು ಸರ್ಕಾರವಂಲಬಿತರಾದರು. ಆದ್ದರಿಂದಲೇ ಅಭಿವೃದ್ಧಿಯ ನಿಮಿತ್ತವಾಗಿ ಭಾರತ ದೇಶ ಬಹುದೊಡ್ಡ ಮೊತ್ತದ ಸಾಲವನ್ನು ಮಾಡಿದೆ. ಈ ಸಾಲದ ಹೊರೆಯಷ್ಟಿದೆಯೆಂದರೆ ಇಂದು ಹುಟ್ಟಿರುವ ಮಗುವಿನ ತಲೆಯ ಮೇಲೂ ಒಂದು ಲಕ್ಷ ರುಪಾಯಿಗಳಷ್ಟು ಸಾಲವಿದೆ. ಇದಕ್ಕೆ ಕಾರಣ ದೇಶದ ಎಲ್ಲ ಆಗುಹೋಗುಗಳ ಅಧಿಕಾರಕೇಂದ್ರ ಜನತೆಯಲ್ಲಿರಬೇಕಾದದ್ದು ಸರ್ಕಾರದಲ್ಲಿ ವರ್ಗವಾಗಿದ್ದು.

೧೯೯೦ರಲ್ಲಿ ಜಾಗತಿಕರಣದ ಅಲೆ ಪ್ರಾರಂಭವಾಯಿತು. ಜಾಗತಿಕರಣ ಎಲ್ಲ ದೇಶಗಳಲ್ಲಿಯೂ ವಿವಿಧ ರೀತಿಯಲ್ಲಿ ಅಧಿಕಾರಕೇಂದ್ರಗಳ ಸ್ಥಿತ್ಯಂತರಕ್ಕೆ ಕಾರಣವಾಯಿತು. ಸಾಮ್ಯವಾದದ ಬಲಿಷ್ಠ ಕೇಂದ್ರವಾಗಿದ್ದ ರಶಿಯಾ ದುರ್ಬಲಗೊಂಡಿತು. ಅಮೇರಿಕಾ ಬಲಶಾಲಿಯಾಗಲಾರಂಭಿಸಿತು. ಇಂಗ್ಲೆಂಡ್, ಫ್ರಾನ್ಸ್ ಮುಂತಾದ ದೇಶಗಳು ಅಮೇರಿಕಾದ ಹಿಂಬಾಲಕವಾದವು. ರಶಿಯಾ ಮತ್ತು ಅಮೇರಿಕಾದ ವಸಾಹತುಶಾಹಿ ನೀತಿಗೆ ಅಫಘಾನಿಸ್ಥಾನ ಬಲಿಪಶುವಾಯಿತು. ಸೆಪ್ಟಂಬರ್ ೧೧, ೨೦೦೧ರಂದು ವಾಣಿಜ್ಯ ಕೇಂದ್ರದ ಮೇಲೆ ತಾಲಿಬಾನ್ ಉಗ್ರರಿಂದ ದಾಳಿ ನಡೆದಾಗ ಅಮೇರಿಕಾ ಆಘಾತಕ್ಕೊಳಗಾಯಿತು. ಅದಕ್ಕೆ ತನ್ನ ಶಕ್ತಿಯ ದೌರ್ಬಲ್ಯದ ಅರಿವಾಯಿತು. ಒಮ್ಮಲೆ ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಅಧಿಕಾರಕೇಂದ್ರಗಳ ತೀವ್ರ ಸ್ಥಿತ್ಯಂತರಗಳಾದವು. ಭಾರತದಂಥ ಅಭಿವೃದ್ಧಿಶೀಲ

ದೇಶವು ಅಫಘಾನಿಸ್ಥಾನದ ಮರುನಿರ್ಮಾಣಕ್ಕೆ ಸಾವಿರಾರು ಕೋಟಿ ರುಪಾಯಿಗಳ ಧನಸಹಾಯ ಮಾಡುವ ವಿದೇಶಾಂಗ ನೀತಿಯ ಕಟ್ಟಿಗೆ ಒಳಗಾಗಿ ಜಗತ್ತಿನಲ್ಲಿ ವಿಶೇಷ ಶಕ್ತಿ ಕೇಂದ್ರವಾಗಿ ಹೊರಹೊಮ್ಮಿತು. ತತ್ಪರಿಣಾಮವಾಗಿ ಪಾಕಿಸ್ತಾನದ ಕೆಂಗಣ್ಣಿಗೆ ಗುರಿಯಾಗಬೇಕಾಯಿತು.

ಜಾಗತಿಕರಣದ ಪರಿಣಾಮ ಭಾರತದ ಆಂತರಿಕ ಆರ್ಥಿಕ-ಸಾಮಾಜಿಕ-ಶೈಕ್ಷಣಿಕ ಇತ್ಯಾದಿ ಕ್ಷೇತ್ರಗಳಲ್ಲಿ ಅಗಾಧವಾದ ಅಧಿಕಾರಕೇಂದ್ರಗಳ ಸ್ಥಿತ್ಯಂತರಗಳು ಪ್ರಾರಂಭವಾದವು. ಮುಖ್ಯವಾದುದು ದೇಶವನ್ನು ಗ್ರಾಮೀಣತೆಯಿಂದ ನಗರೀಕರಣದತ್ತ ಒಯ್ಯುವ ಕೆಲಸ. ಸ್ವಾತಂತ್ರ್ಯದ ಮೊದಲು ದೇಶದ ಶೇಕಡಾ ೮೦ರಷ್ಟು ಜನರು ಹಳ್ಳಿಗಳಲ್ಲಿ ವಾಸವಾಗಿದ್ದಾರೆಂದು ಹೇಳಲಾಗುತ್ತಿತ್ತು. ಆದರೆ ೨೦೩೦ರ ವೇಳೆಗೆ ಈ ಚಿತ್ರವೇ ದೂರಗಾಮಿ ಪರಿಣಾಮ ಬೀರುವ ಸ್ಥಿತ್ಯಂತರಕ್ಕೆ ಒಳಗಾಗಲಿದೆ. ಯೋಜನಾ ಆಯೋಗದ ಪ್ರಕಾರ ಗ್ರಾಮಗಳಲ್ಲಿ ಶೇಕಡಾ ೪೦ರಷ್ಟು ಜನರು ಮಾತ್ರ ಉಳಿದು ಶೇಕಡಾ ೬೦ರಷ್ಟು ಜನರು ನಗರಗಳಿಗೆ ವಲಸೆ ಹೋಗಲಿದ್ದಾರೆ. ಅಂದರೆ ದೇಶದ ಜನಸಂಖ್ಯೆಯಲ್ಲಿ ಅರವತ್ತೈದು ಕೋಟಿ ಜನರು ನಗರವಾಸಿಗಳಾಗಲಿದ್ದಾರೆ. ಕ್ರಮೇಣ ಈ ಪ್ರಮಾಣ ಹೆಚ್ಚಲಿದೆಯೇ ಹೊರತು ಕಡಿಮೆಯಾಗುವುದಿಲ್ಲ. ಆಗ ದೇಶದ ಆರ್ಥಿಕ ಮತ್ತು ರಾಜಕೀಯ ಅಧಿಕಾರ ಕೇಂದ್ರಗಳು ನಗರಗಳಿಗೆ ಸ್ಥಿತ್ಯಂತರಗೊಳ್ಳುತ್ತವೆ. ದೇಶದ ಬಜೆಟ್‌ನ ಸಿಂಹಪಾಲು ನಗರಗಳ ಅಭಿವೃದ್ಧಿಗಾಗಿಯೇ ಖರ್ಚಾಗುವುದು. ಶಿಕ್ಷಣದ ನೀತಿಯೂ ಬದಲಾಗವುದು. ಮಕ್ಕಳೆಲ್ಲ ಪ್ರಕೃತಿಯಿಂದ ಹೆಚ್ಚು ದೂರಾಗುತ್ತಾ ಹೋಗುವರು. ಜ್ಞಾನ-ಹಣ-ಹಿಂಸೆ ಇವೆಲ್ಲ ನಗರಗಳಲ್ಲಿ ಕೇಂದ್ರಿತವಾಗುವವು. ಮಹಾಯುದ್ಧ ನಡೆದಲ್ಲಿ ಈ ನಗರಗಳ ಹಣೆಬರಹ ಹಿರೋಶಿಮಾ ಮತ್ತು ನಾಗಸಾಕಿಗಳಂತಾಗುವುದು. ಈಗಾಗಲೇ ಐವತ್ತು ಕಿಲೋ ಮೀಟರ್ ದೂರದಿಂದ ಹಿಡಿದು ಐದು ಸಾವಿರ ಕಿಲೋಮೀಟರ್ ದೂರದವರೆಗೆ ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ಕ್ಷಿಪಣಿಗಳು ಎಲ್ಲ ದೇಶಗಳಲ್ಲಿವೆ. ಹೈಡ್ರೋಜನ್ ಬಾಂಬ್, ಅಣುಬಾಂಬ್‌ಗಳು ಇದ್ದೇ ಇವೆ.

ಜಗತ್ತಿನ ಆರ್ಥಿಕ ಶಕ್ತಿ ಕೇಂದ್ರಗಳೆಂದು ತಿಳಿಯಲಾಗಿರುವ ಅಂತರಾಷ್ಟ್ರೀಯ ನಿಧಿ ಸಂಸ್ಥೆ, ವಿಶ್ವ ಬ್ಯಾಂಕ್ ಸ್ವತಃ ಅನೇಕ ಪ್ರಕಾರದ ಹಣಕಾಸು ಅಶಿಸ್ತು ನೀತಿಗಳಿಂದಾಗಿ ವಿಶ್ವ ವಿತ್ತೀಯ ಬೆಳವಣಿಗೆಗಳ ಮೇಲೆ ಹಿಡಿತವಿಲ್ಲದವಾಗಿವೆ. ಜಾಗತಿಕ ಶಾಂತಿ-ಸುವ್ಯವಸ್ಥೆಯ ಜವಾಬ್ದಾರಿ ಹೊಂದಿರುವ ವಿಶ್ವರಾಷ್ಟ್ರ ಸಂಸ್ಥೆಯಂತೂ ಕೇವಲ ಐದು ಬಲಾಢ್ಯ ರಾಷ್ಟ್ರಗಳ ವಿಟೋ ಮತ ಚಲಾವಣೆಗೆ ಒಳಪಟ್ಟು ತನ್ನ ಪ್ರಮುಖ ಧ್ಯೇಯೋದ್ದೇಶ್ಯಗಳನ್ನು ಬಲಿಷ್ಠ ಮತ್ತು ಶ್ರೀಮಂತ ರಾಷ್ಟ್ರಗಳ ಇಚ್ಛೆಗೆ ಅಡವಿಟ್ಟಂತಾಗಿದೆ. ಬಹುರಾಷ್ಟ್ರಗಳ ಮತ್ತು ವಿಶ್ವದ ಹಿತಾಕಾಂಕ್ಷೆಯ ಅಧಿಕಾರಕೇಂದ್ರ ಕೇವಲ ಐದು ರಾಷ್ಟ್ರಗಳ ಅಲ್ಪ ಸಂಖ್ಯೆಗೆ ಸ್ಥಿತ್ಯಂತರಗೊಂಡಿದೆ. ಈ ಸ್ಥಿತ್ಯಂತರದ ಘೋರ ಪರಿಣಾಮಗಳನ್ನು ಜಗತ್ತಿನ ಮೂರನೇ ಒಂದು ಭಾಗದಷ್ಟು ಜನಸಂಖ್ಯೆ ಅನುಭವಿಸುತ್ತಿದೆ. ಎರಡು ಮಹಾಯುದ್ಧಗಳ ಅವಿಸ್ಮರಣೀಯ ಕಷ್ಟ-ನಷ್ಟ-ದುಃಖಗಳ ನಂತರವೂ ಇಂದು ಜಗತ್ತಿನಲ್ಲಿ ಒಂದಲ್ಲ ಒಮದು ಕಡೆ ಅಘೋಷಿತ ಯುದ್ಧ ಸ್ವರೂಪದ ಕದನಗಳು ನಡೆಯುತ್ತಲೇ ಇವೆ; ಸಾವಿರಾರು ಜನರು ಪ್ರಾಣಕಳೆದುಕೊಳ್ಳುತ್ತಲೇ ಇದ್ದಾರೆ.

ಯುದ್ಧರಹಿತ ವಿಶ್ವದ ಕಲ್ಪನೆ ಸಾಕಾರಗೊಳ್ಳದೇ ಉಳಿದಿದೆ. ಭವಿಷ್ಯದಲ್ಲಿ ಕೂಡ ವಿಶ್ವರಾಷ್ಟ್ರ ಸಂಸ್ಥೆ ಬಲವಾಗುವು ಯಾವ ಲಕ್ಷಣಗಳೂ ಕಂಡು ಬರುತ್ತಿಲ್ಲ. ವಿಶ್ವಸಂಸ್ಥೆ ಎಷ್ಟು ದುರ್ಬಲವಾಗಿದೆಯೆಂದರೆ- ಒಂದು ವೇಳೆ ಮೂರನೇ ಮಹಾಯುದ್ಧ ನಡೆದಲ್ಲಿ, ಇಂಥ ಯುದ್ಧದ ಎಲ್ಲ ಲಕ್ಷಣಗಳು ಕ್ಷಿತಿಜದಲ್ಲಿ ಕಾಣಿಸಿಕೊಳ್ಳುತ್ತಿವೆ- ವಿಶ್ವಸಂಸ್ಥೆ ಈ ಮೊದಲಿನ ಲೀಗ್ ಆಫ್ ನೇಷನ್ಸ್‌ನ ದಾರಿಯನ್ನೇ ಹಿಡಿಯಬೇಕಾಗುತ್ತದೆ.

ಎರಡನೇ ಮಹಾಯುದ್ಧದ ತರುವಾಯ ಜಗತ್ತು ಸಾಮ್ಯವಾದ ಮತ್ತು ಬಂಡವಾಳವಾದ, ಉತ್ತರ ಮತ್ತು ದಕ್ಷಿಣ ಮುಂತಾಗಿ ಒಡೆದಿತ್ತು. ಆದರೆ ಕಾಲ ಉರುಳಿದ ಪರಿಣಾಮವಾಗಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ ಮತ್ತು ಉಪಯೋಗದಿಂದಾಗಿ ಆ ಒಡಕುಗಳು ಮಸುಕಾಗಿ ಹೋಗಿವೆ. ಒಡಕುತನ ಅಥವಾ ವಿಭಜನೆ ಪ್ರಕೃತಿ ನಿಯಮವೋ ಎಂಬಂತೆ ಜಗತ್ತು ಒಡೆಯುವ ಪ್ರಕ್ರಿಯೆ ನಿಂತಿಲ್ಲ. ಆ ಪ್ರಕ್ರಿಯೆಯ ಮುಂದುವರೆದ ಭಾಗವಾಗಿ ವೇಗದ ಜಗತ್ತು ಮತ್ತು ನಿಧಾನಗತಿಯ ಜಗತ್ತು ಎಂಬರ್ಥದಲ್ಲಿ ಜಗತ್ತು ಒಡೆದಿದೆ. ೨೧ನೇ ಶತಮಾನವಂತೂ ವೇಗದ ಯುಗವೆಂದೇ ರೂಪುಗಳ್ಳುತ್ತಿದೆ. ಈ ಶತಮಾನ ಅಂತ್ಯಕಾಣುವ ವೇಳೆಗೆ ವೇಗದ ಮಿತಿ ಎಷ್ಟು ಆಗಿರುತ್ತದೆಂದು ಊಹಿಸಲಾಗದು. ಭೌತಿಕ ವೇಗದ ಅಧಿಕಾರಕೇಂದ್ರ ಆವೇಗಕ್ಕೆ ಸ್ಥಿತ್ಯಂತರಗೊಂಡರೆ ಜಗತ್ತಿನಲ್ಲಿ ಎಲ್ಲ ಕಡೆಗೂ ಹುಚ್ಚಾಸ್ಪತ್ರೆಗಳು ಹುಟ್ಟಬಹುದು. ವೇಗದ ಜಗತ್ತಲ್ಲದೆ ಇನ್ನೊಂದು ಅಧಿಕಾರಕೇಂದ್ರ ತುಂಬ ಬಲವಾದದ್ದು, ಇದುವರೆಗೆ ನಾವು ನೋಡಿದ ಎಲ್ಲ ಅಧಿಕಾರಕೇಂದ್ರಗಳ ಸ್ಥಿತ್ಯಂತರಕ್ಕೆ ಇಂಜಿನಿನಂತಿರುವ ಅಧಿಕಾರಕೇಂದ್ರ ಹಣ ದುರಾಸೆಯ ಅಧಿಕಾರ ಕೇಂದ್ರ. ಇಂಗ್ಲಿಷ್‌ನಲ್ಲಿ ಸ್ಪೀಡ್ ಮತ್ತು ಗ್ರೀಡ್ ಶಬ್ದಗಳು ಒಂದೇ ನಾಣ್ಯದ ಎರಡು ಮುಖಗಳಿಂತಿವೆ. ಸ್ಪೀಡ್-ವೇಗದ ಹಿಂದೆ ಗ್ರೀಡ್-ದುರಾಸೆಯಿದ್ದರೆ, ಗ್ರೀಡ್-ದುರಾಸೆಯ ಹಿಂದೆ-ಸ್ಪೀಡ್ ವೇಗವಿದೆ. ತಂತ್ರಜ್ಞಾನ ಮತ್ತು ವಿಜ್ಞಾನ ವೇಗದ ಅಧಿಕಾರಕೇಂದ್ರಕ್ಕಿರುವ ಎರಡು ರೆಕ್ಕೆಗಳಂತಿವೆ. ಈ ವೇಗ ಮತ್ತು ದುರಾಸೆಯ ಕಾರಣದಿಂದಾಗಿ ಮೂರನೆಯ ಅಧಿಕಾರಕೇಂದ್ರದ ಸ್ಥಿತ್ಯಂತರ ನಡೆದಿದೆ. ಅದುವೆ, ಭೂ ಮೇಲಿನ ವ್ಯವಹಾರಗಳ ಅಧಿಕಾರಕೇಂದ್ರ ಆಕಾಶಕ್ಕೆ ಸ್ಥಿತ್ಯಂತರಗೊಂಡಿದೆ. ಗಗನನೌಕೆಗಳು ಆಕಾಶಕ್ಕೆ ಚಿಮ್ಮಿದವು. ನಂತರ ಚಂದ್ರಯಾನದಿಂದ ಪ್ರಾರಂಭವಾಗಿ ಈಗ ಶುಕ್ರಯಾನ ಮತ್ತು ಅದಕ್ಕೂ ಮುಂದಿನ ಯಾನಗಳ ಸಿದ್ಧತೆ ನಡೆದಿದೆ. ಇದರ ಫಲವಾಗಿ ಭೂಮಿಯ ಮೇಲೆ ನಡೆಯುವ ವ್ಯವಹಾರಗಳಿಗಿಂತ- ಅದು ರಾಜಕೀಯವಾಗಿರಬಹುದು, ಹಣಕಾಸಿನ ವ್ಯವಹಾರವಾಗಿರಬಹುದು, ಯುದ್ಧದ ಸಿದ್ಧತೆಯಾಗಿರಬಹುದು- ಮುಂತಾದ ಎಲ್ಲ ವ್ಯವಹಾರಗಳಿಗಳು ಆಕಾಶದಲ್ಲೆ ನಡೆಯುತ್ತಿವೆ. ಈ ಮೊದಲು ಮಾನವ ತನ್ನ ಭೂ ಜೀವನದ ಮೇಲೆ ಗ್ರಹಗತಿಗಳ ಪ್ರಭಾವ ಇದೆಯೆಂದು ನಂಬಿದ್ದ. ಈಗ ಅದರೊಂದಿಗೆ ಆಕಾಶದಲ್ಲಿಯ ಮಾನವನ ಚಲನವಲನಗಳ ಪ್ರಭಾವವೂ ಉಂಟಾಗುತ್ತಿದೆ.

೧೪೯೨ರಲ್ಲಿ ಈಗ್ಗೆ ೫೧೯ವರ್ಷಗಳ ಹಿಂದೆ ಕ್ರಿಸ್ಟೋಫರ್ ಕೊಲಂಬಸ್ ಸಮುದ್ರ ಯಾನ ಹೊರಟು ಮುಗಿಸಿಬಂದ ಮೇಲೆ ಭೂಮಿ ಚಪ್ಪಟೆಯಾಗಿಲ್ಲ, ದುಂಡಗಿದೆ ಎಂದು ಹೇಳಿದ. ಆಗ ಅಧಿಕಾರಬಿಂದುವಾದ ಜ್ಞಾನದ ಹರಹೂ ತುಂಬ ಕಿರಿದಾಗಿತ್ತು. ಅದಕ್ಕನುಗುಣವಾಗಿ ಮಾನವನ ಎಲ್ಲ ಚಟುವಟಿಕೆಗಳ ಹರಹೂ ಕೂಡ

ಕಿರಿದಾಗಿಯೇ ಇತ್ತು. ಆದರೆ ಮಾಹಿತಿ ತಂತ್ರಜ್ಞಾನ ಅಧಿಕಾರಕೇಂದ್ರವಾಗುತ್ತ ಹೋದ ಹಾಗೆ, ಭೂಮಿ ದುಂಡಗಿಲ್ಲ ಚಪ್ಪಟೆಯಾಗಿದೆಯೆಂಬ ಅನುಭವವಾಗಲಾರಂಭಿಸಿತು. ಈ ಸಂಗತಿಯನ್ನು ತನ್ನ ಅಧ್ಯಯನ ಮತ್ತು ಪ್ರವಾಸಾನುಭವಗಳಿಂದ ಅಮೇರಿಕದ ಲೇಖಕ ಥಾಮಸ್ ಎಸ್.ಫ್ರೆಡರ್ಮ್ರ್ ತನ್ನ 'ದಿ ವರ್ಲ್ಡ್ ಈಸ್ ಫ್ಲ್ಯಾಟ್' ಎಂಬ ಪುಸ್ತಕದ ಮೂಲಕ ಪ್ರಚುರಪಡಿಸಿದ. ಈ ಮಾತನ್ನು ಮೊದಲಬಾರಿಗೆ ಆತ ತನ್ನ ಹೆಂಡತಿಗೆ ಕಿವಿಯಲ್ಲಿ ಪಿಸುಮಾತಿನಲ್ಲಿ ಹೇಳಿದ. ಆದರೆ ಆ ಮಾತು ಈಗ ಗಟ್ಟಿ ಧ್ವನಿಯಲ್ಲಿ ಜಗತ್ತಿನಾದ್ಯಂತ ಪ್ರತಿಧ್ವನಿಗೊಂಡಿದೆ. ಇದು ಜಾಗತಿಕರಣದ ಧ್ವನಿಯೂ ಹೌದು. ಜಾಗತಿಕರಣದ ಪರಿಣಾಮದ ಅಲೆಗಳು ಜಗತ್ತಿನಾದ್ಯಂತ ವಿವಿಧ ಶಕ್ತಿಗಳ ರೂಪದಲ್ಲಿ ಎದ್ದೇಳುತ್ತಿವೆ. ಇಂದು ಪ್ರತಿಯೊಬ್ಬ ಶ್ರೀಸಾಮಾನ್ಯನೂ ತನ್ನ ಸುತ್ತಲಿನ ವ್ಯವಹಾರಿಕ ಜಗತ್ತನ್ನು ನಿಯಂತ್ರಿಸುವ ಅಧಿಕಾರಕೇಂದ್ರವಾಗಿದ್ದಾನೆ. ಜಗತ್ತಿನಲ್ಲಿ ಎಷ್ಟು ಜನಸಂಖ್ಯೆಯಿದೆಯೋ ಅಷ್ಟು ಅಧಿಕಾರಕೇಂದ್ರಗಳಿವೆ. ಈ ಅಧಿಕಾರಕೇಂದ್ರಗಳು ಒಮ್ಮೆ ಸ್ವಜಾತಿ ಆಕರ್ಷಣೆಯೊಂದಿಗೆ ಸೇರಿದರೆ, ಇನ್ನೊಮ್ಮೆ ವಿಜಾತಿ ಆಕರ್ಷಣೆಯೊಂದಿಗೆ ಸೇರುತ್ತವೆ. ಹಾಗೆ ಅವು ಸೇರಿದಾಗಲೆಲ್ಲ ಅವು ತಮ್ಮ ಸುತ್ತಲಿನ ಪ್ರಪಂಚದ ಮೇಲೆ ತಮ್ಮದೇ ಆದ ರೀತಿಯಲ್ಲಿ ನಿಯಂತ್ರಣ ಸಾಧಿಸುತ್ತವೆ.

ಬಗೆಬಗೆಯಾಗಿ, ವಿವಿಧ ಕಾಲಘಟ್ಟಗಳಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ ಅಧಿಕಾರಕೇಂದ್ರಗಳ ನಿರ್ಮಾಣವಾಗುತ್ತಿರುವುದರಿಂದ ಪ್ರಸ್ತುತ ಶತಮಾನದ ಮಾನವಕುಲ ತರಾವರಿ ಆಘಾತಕ್ಕೊಳಗಾಗುತ್ತಿದೆ. ಸುಂಟರಗಾಳಿಯಲ್ಲಿ ಸಿಕ್ಕ ನೌಕೆಯಂತೆ ಹೊಯ್ದಾಡುತ್ತಿದೆ. ನಾವಿಕರಿಗೆ ಸ್ಥಿತ್ಯಂತರಗಳ ಮಹಾ ಸಮುದ್ರದಲ್ಲಿ ದಿಕ್ಕು ತೋರಿಸುವ ಧ್ರುವತಾರೆ ಕಾಣದಾಗಿದೆ. ಸತ್ಯ ಅಸತ್ಯಕ್ಕೂ, ಅಹಿಂಸೆ ಹಿಂಸೆಗೂ, ದಯೆ ನಿರ್ದಯೆಗೂ ಸ್ಥಿತ್ಯಂತರಗೊಂಡಿವೆ. ಬೇರೆಲ್ಲ ಪ್ರಕಾರದ ಶಕ್ತಿ ಸ್ಥಿತ್ಯಂತರಗಳಿಗಿಂತ ಸನಾತನ ಮೌಲ್ಯಗಳಲ್ಲಿಯ ಈ ಸ್ಥಿತ್ಯಂತರ ತುಂಬ ಭಯಾವಹಕವಾಗಿದೆ. ಸುದೈವದಿಂದ ಮಾನವನಲ್ಲಿಯ ವಿವೇಚನಾಶಕ್ತಿ ಇನ್ನೂ ಜೀವಂತವಾಗಿದೆ, ಪ್ರಬಲವಾಗಿದೆ. ಇದುವರೆಗೂ ಎಷ್ಟೋ ಅಂಧಕಾರ ಮತ್ತು ತುಮುಲಗಳಿಂದ ಹಾಯ್ದು ಹೊರಬಂದ ಮಾನವಕುಲ ತನ್ನ ಎಂದಿನ ನಿಸರ್ಗ ಪ್ರಣೀತ ಮೌಲ್ಯಗಳಿಗೆ ಸ್ಥಿತ್ಯಂತರಗೊಳ್ಳುವುದರ ಮೂಲಕ ಸರ್ವೇಜನಾಃ ಸುಖಿನೋ ಭವಂತು ಎಂಬ ಆಶಯದ ಸರ್ವೋದಯದ ಧ್ರುವತಾರೆಯನ್ನು ಗುರುತಿಸಿಕೊಳ್ಳಲಿ.

* * *

ನನ್ನ ಕನಸಿನ ವಿಶ್ವವಿದ್ಯಾಲಯ ಹೇಗಿರಬೇಕು?

(ಜನಪದ ವಿಚಾರದ ಸೆಪ್ಟಂಬರ್ ಸಂಚಿಕೆಯ ಶೈಕ್ಷಣಿಕ ಲೇಖನಗಳಿಗೆ ಪೂರಕವಾದ ಪ್ರತಿಕ್ರಿಯೆ. -ಸಂ)

– ಡಾ.ಟಿ.ಎಸ್.ಚನ್ನೇಶ್

ಜನಪದ ವಿಶ್ವವಿದ್ಯಾಲಯದ ಸಮಾಲೋಚನಾ ಸಭೆಗೆ ಆಹ್ವಾನವಿತ್ತು. ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಲು ಒಮ್ಮೆ ಅವಕಾಶ ದೊರೆತಿತ್ತು. ಆಗ ಹಂಚಿಕೊಂಡವುಗಳನ್ನು ಹಾಗೆಯೇ ಮತ್ತೆ ಹೇಳಬೇಕೆನಿಸಿದ ಕೆಲವನ್ನು ಸೇರಿಸಿ ನನ್ನ ಕನಸಿನ ವಿಶ್ವವಿದ್ಯಾಲಯವನ್ನು ಓದುಗ ಮಿತ್ರರಲ್ಲಿ ಹಂಚಿಕೊಳ್ಳುತ್ತಿದ್ದೇನೆ. ವಿಶ್ವವಿದ್ಯಾಲಯಗಳು ಹೇಗಿರಬೇಕು ಎನ್ನುವ ಪ್ರಶ್ನೆಯನ್ನು ಉತ್ತರಿಸುವಾಗ ನನಗೆ ಕೆಲವು ಸಂಗತಿಗಳು ನೆನಪಾಗುತ್ತಿವೆ. ಆ ಸಂಗತಿಗಳ ಮೂಲಕ ವಿಶ್ವವಿದ್ಯಾಲಯಗಳ ಕುರಿತ ನನ್ನ ಕಲ್ಪನೆಯ ಉತ್ತರಗಳನ್ನು ಹೇಳಲು ಪ್ರಯತ್ನಿಸುತ್ತೇನೆ.

ಸಂಗತಿ ೧ :

ಬಹಳ ವರ್ಷಗಳ ಹಿಂದೆ ಅಮೇರಿಕಾದ ಕ್ಯಾಲಿಫೋರ್ನಿಯ ರಾಜ್ಯದಲ್ಲಿ ಹಲವು ಪ್ರಾಜ್ಞರು ಗೋಲ್ಡ್ ರಷ್ ಮಾದರಿಯಲ್ಲಿ ಜನ ಮುಗಿಬಿದ್ದು ಬಂದು ಸೇರುವಂತಹದ್ದನ್ನು ಏನಾದರು ಮಾಡಲು ಸಾಧ್ಯವೇ ಎಂದುಕೊಳ್ಳುವಾಗ ಒಂದು ಅದ್ಭುತವಾದ ವಿಶ್ವವಿದ್ಯಾಲಯ ಮಾಡಲು ಬಯಸಿದರು. ಅದರಂತೆ ನಡೆದುಕೊಂಡರು ಕೂಡ. ಒಂದು ವಿಶ್ವವಿದ್ಯಾಲಯವನ್ನು ಆರಂಭಿಸಿದರು. ಅದೇ ಇಂದಿನ ಪ್ರಪಂಚದ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಕ್ಯಾಲ್‌ಟೆಕ್ (ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯುಟ್ ಆಫ್ ಟೆಕ್ನಾಲಜಿ). ಕ್ಯಾಲ್‌ಟೆಕ್ ನಿಜಕ್ಕೂ ಒಂದು ಅದ್ಭುತ ವಿದ್ಯಾಲಯ. ಜಗತ್ತಿನಾದ್ಯಂತ ಪ್ರತಿಭಾವಂತ ವಿದ್ಯಾರ್ಥಿಗಳು ಮುಗಿಬಿದ್ದು ಹೋಗಬಯಸುವ ತಾಣ. ಅಲ್ಲಿನ ಶ್ರೇಷ್ಠತೆಯ ಪರಂಪರೆ ಎಂತಹದ್ದೆಂದರೆ ಭೌತಶಾಸ್ತ್ರದಲ್ಲಿ ಮಾಂತ್ರಿಕ ವಿಜ್ಞಾನಿಯೆಂದೂ, ಇಂದು ಬೆಳೆಯುತ್ತಿರುವ ಭೌತವಿಜ್ಞಾನದ ಪರಂಪರೆಗೆ ಮಹತ್ವದ ದಾರಿ ತೋರಿದ, ಮಾಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ರನ್ನೂ ಅಚ್ಚರಿಗೊಳಿಸಿದ ನೋಬೆಲ್ ವಿಜೇತ ರಿಚರ್ಡ್ ಫೈನ್‌ಮನ್ ಇದ್ದ ವಿದ್ಯಾಲಯ. ಆತನ ಎಲ್ಲ ಚಟುವಟಿಕೆಗಳ ತಾಣ. ಅಲ್ಲಿ ಆತನೆತ್ತಿದ ಪ್ರಶ್ನೆಗಳು ವಿಜ್ಞಾನದಲ್ಲಿ ಹೊಸತೊಂದು ಕ್ರಾಂತಿಯನ್ನೇ ಮೊಳಗಿದವು. ಇವು ಕೇವಲ ಭೌತಶಾಸ್ತ್ರಕ್ಕೆ ಮಾತ್ರ ಸೀಮಿತವಾಗಿರದೆ ವಿಜ್ಞಾನ ಜಗತ್ತನ್ನು ಕುರಿತಾಗಿದ್ದವು. ಅಷ್ಟೇ ಅಲ್ಲದೆ, ವಿಜ್ಞಾನದ ಪಾಠಹೇಳುವ ರೀತಿಯನ್ನು ಅತ್ಯಂತ ಸರಳವಾಗಿ ವಿದ್ಯಾರ್ಥಿಸ್ನೇಹಿಯಾಗಿ ರೂಪಿಸಿದಾತ.

ಫೈನ್‌ಮನ್ ಲೆಕ್ಚರ್ಸ್ ಎಂದೇ ಜಗತ್ ಪ್ರಸಿದ್ಧವಾದ ಭೌತವಿಜ್ಞಾನದ ಪುಸ್ತಕಗಳು ಅಲ್ಲಿನ ಕೊಡಿಗೆ. ವಿಶ್ವವಿದ್ಯಾಲಯ ಆರಂಭಿಸುವ ಹಂತದಲ್ಲಿ ಪ್ರಾಜ್ಞರು ಕಂಡ ಕನಸು ನಿಜಕ್ಕೂ ನನಸಾಗಿದೆ.

ಸಂಗತಿ ೨ :

ಈಗ್ಗೇ ಸುಮಾರು ೭-೮ ವರ್ಷಗಳ ಹಿಂದೆ ಜಗತ್ತಿನ ಅತ್ಯಂತ ಶ್ರೇಷ್ಠ ೫೦೦ ವಿಶ್ವವಿದ್ಯಾಲಯಗಳ ಒಂದು ಪಟ್ಟಿಯನ್ನು ತಯಾರಿಸಲಾಯಿತು. ಅದಕ್ಕೆ ಅತ್ಯಂತ ವೈಜ್ಞಾನಿಕವಾದ ನಿಯಮಾವಳಿಗಳನ್ನು ಅಣಿಗೊಳಿಸಿ ಪಟ್ಟಿಮಾಡಿ ಪ್ರಕಟಿಸಲಾಯಿತು. ಮೊದಲ ೧೦೦ ವಿವಿಗಳನ್ನು ಕ್ರಮವಾಗಿ ರ್‍ಯಾಂಕ್ ಮಾಡಿದರೆ, ನಂತರದ ಪಟ್ಟಿಯನ್ನು ೧೦೧-೨೦೦, ೨೦೧-೩೦೦, ೩೦೧-೪೦೦ ಹಾಗೂ ೪೦೧-೫೦೦ ಎಂದಷ್ಟೇ ಸಿದ್ಧಪಡಿಸಲಾಯಿತು. ನಿರಾಶಾದಾಯಕ ಸಂಗತಿ ಎಂದರೆ ಮೊದಲ ೧೦೦ರ ಪಟ್ಟಿಯಲ್ಲಿ ನಮ್ಮ ದೇಶದ ಒಂದೂ ವಿಶ್ವವಿದ್ಯಾಲಯವೂ ಇರಲಿಲ್ಲ. ನಂತರದ ೨೦೦ ರೊಳಗೂ ನಾವಿಲ್ಲ! ೨೦೧-೩೦೦ರ ಪಟ್ಟಿಯಲ್ಲಿ ನಮ್ಮ ದೇಶದ ಶ್ರೇಷ್ಠವೆಂದು ಕರೆಯುತ್ತಿರುವ ಭಾರತೀಯ ವಿಜ್ಞಾನ ಸಂಸ್ಥೆಯಿತ್ತು. ನಾನಾಗ ಅಲ್ಲೇ ಕೆಲಸ ನಿರ್ವಹಿಸುತ್ತಿದ್ದು, ಏನೋ ಅಹಂ ಇದ್ದದ್ದು ಒಮ್ಮೆಲೆ ಟುಸ್ ಎಂದಿತ್ತು. ೫೦೦ರ ಒಳಗಿನ ಪಟ್ಟಿಯಲ್ಲಿ ನಮ್ಮ ದೇಶದ, ಇತರ ಮೂರು ವಿಶ್ವವಿದ್ಯಾಲಯಗಳಿರುವುದಕ್ಕೆ ಖುಷಿಪಟ್ಟುಕೊಳ್ಳಬೇಕಾಯಿತು. ಐಐಟಿ ಖರಗ್‌ಪುರ, ಹಾಗೂ ಕೊಲ್ಕತ್ತಾ ವಿಶ್ವವಿದ್ಯಾಲಯ. ಅದನ್ನ ರೂಪಿಸದ ಚೀನಾದ ಶಿಕ್ಷಣ ತಜ್ಞರ ಪ್ರಾಮಾಣಿಕತೆ ಎಷ್ಟೆಂದರೆ ತಪ್ಪಿಯೂ ಮೊದಲ ೨೫ ರ ಒಳಗೆ ತಮ್ಮದೇ ವಿಶ್ವವಿದ್ಯಾಲಯವು ಬರುವಂತೆ ನಿಯಮಾವಳಿಯನ್ನು ರೂಪಿಸಿರಲಿಲ್ಲ. ಮೊದಲ ೧೫ರಲ್ಲಿ ೧೧ ಅಮೇರಿಕಾದಲ್ಲೂ ಮತ್ತು ೪ ಬ್ರಿಟನ್ನಿನಲ್ಲೂ ಸ್ಥಾನ ಪಡೆದುಕೊಂಡಿದ್ದವು. ಸಿಂಗಪೂರ್, ಕೋರಿಯಾದಂತಹ ಪುಟ್ಟ ರಾಷ್ಟ್ರಗಳ ಜತೆಯಲ್ಲೂ ನಾವು ಸಾಟಿಯಾಗದಿದ್ದದು ಅತ್ಯಂತ ನಿರಾಸೆಯ ವಿಚಾರ.

ಸಂಗತಿ ೩ :

ಕೆಲವೊಂದು ತಂತ್ರಜ್ಞಾನಿ ಕ್ರಾಂತಿಕಾರರ ಪ್ರಕಾರ ಮುಂದೆ ವಿಶ್ವವಿದ್ಯಾಲಯಗಳ ಅಗತ್ಯವೇ ಇರದು. ಏಕೆಂದರೆ ವಿಶ್ವವಿದ್ಯಾಲಗಳ ಕೆಲಸ ಪದವಿ ನೀಡಿಕೆ. ಕಲಿಕೆಯನ್ನು ಪರೀಕ್ಷಿಸಿ ಪದವಿ ಪ್ರದಾನ ಮಾಡುವುದು. ಆದರೆ ಕಲಿಕೆಯೆನ್ನುವುದು ಇನ್ನು ಮುಂದೆ ವಿಶ್ವವಿದ್ಯಾಲಯಗಳಿಲ್ಲದೆಯೂ ಸಾಧ್ಯಮಾಡುವ ವರ್ಚ್ಯವಲ್ ಮಾದರಿಗಳು ಲಭ್ಯ. ಯಾವುದೇ ಸಮಯದಲ್ಲಿ ಕೇವಲ ಪರೀಕ್ಷೆಯನ್ನಷ್ಟೆ ತೆಗೆದುಕೊಂಡು ಪಾಸ್ ಮಾಡುವುದಕ್ಕೆ ಅವಕಾಶವನ್ನು ವಿಶ್ವವಿದ್ಯಾಲಯಗಳು ಒದಗಿಸಿದರೆ ಸಾಕು. ಈಗಾಗಲೇ Any time exam conceptಗಳು ಸಾಧ್ಯವಾಗಿವೆ. Tofel and GRE ಪರೀಕ್ಷೆಗಳು ೩೬೫ದಿನಗಳಲೂ ಸಾಧ್ಯವಾಗಿವೆ. ಇನ್ನು ಕಲಿಕೆಗೆ ಯಾವಾಗಲೂ ತರೆದ ಬಾಗಿಲು. ಇದಕ್ಕೆ ಪೂರಕವೆನ್ನುವಂತೆ ಜಗತ್ತಿನ ಅತ್ಯಂತ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಒಂದಾದ (೧೦ರಲ್ಲಿ ೧) ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MIT) ತನ್ನ ೮೦೦ ಕೋರ್ಸ್‌ಗಳ ಪೂರ್ಣ ಪಠ್ಯವನ್ನು ಅಂತರ್ ಜಾಲದಲ್ಲಿ ಉಚಿತವಾಗಿ ದೊರಕುವಂತೆ

ಮಾಡಿದೆ. ಅದರಲ್ಲಿ ಪಾಠಗಳ ಲೈವ್ ಮಾದರಿಗಳೂ (ವಿಡಿಯೋಗಳು) ಸಾಕಷ್ಟಿವೆ. ಅನೇಕ ಪ್ರಯೋಗದ ವೀಡಿಯೋಗಳೂ ಇವೆ. ಇಡೀ ವಿಶ್ವವಿದ್ಯಾಲಯವೇ ತೆರೆದುಕೊಳ್ಳುವ ಹಾಗೆ (ನಿಜವಾದ ಅರ್ಥದಲ್ಲಿ ಜನಪರ) ಪಾಠಗಳು ಸಿಗುತ್ತವೆ. ಸಾಲದ್ದಕ್ಕೆ ಇಂಟೆರ್‍ಯಾಕ್ಟಿವ್ ಕಲಿಕೆಯೂ ಸಾಧ್ಯವಿದೆ. ಮೊನ್ನೆ ತಾನೆ ಓರ್ವ ಹೈಸ್ಕೂಲ್ ವಿದ್ಯಾರ್ಥಿಯೊಬ್ಬ ಭೌತಶಾಸ್ತ್ರದಲ್ಲಿ ಅತಂತ್ಯ ಹೆಚ್ಚಿನ ಆಸಕ್ತಿ ಇದ್ದವನು MITಯ ಪ್ರಸಿದ್ಧ ಭೌತಶಾಸ್ತ್ರ ಪ್ರಾಧ್ಯಾಪಕರೂ, ಜಗತ್ತಿನ ಜನಪ್ರಿಯ ಭೌತಶಾಸ್ತ್ರ ಶಿಕ್ಷಕರೂ ಆದ ಪ್ರೊ. ಅಲೆನ್ ವಾಲ್ಟೆರ್ ಅವರಿಗೆ ಇ-ಮೇಲ್ ಮಾಡಿ ಕುತೂಹಲ ವ್ಯಕ್ತ ಪಡಿಸಿದ್ದಕ್ಕೆ ತಮ್ಮ ೧೦೦ ಕ್ಕೂ ಹೆಚ್ಚಿನ ಪಾಠಗಳ ವಿಡಿಯೋಗಳ ಅಂತರ್‌ಜಾಲ ಲಿಂಕ್‌ಗಳನ್ನು ಅದರ ಪಠ್ಯದ ವಿವರಗಳನ್ನೂ, ಆಸಕ್ತಿಯ ಮುಂದುವರಿಕೆಗೆ ಹಾರೈಕೆ ಹಾಗೂ ಶುಭಾಷಯಗಳನ್ನೂ ಕಳುಹಿಸಿದ್ದರು. ಆ ಪತ್ರವನ್ನು ಕಂಡು ಬೌದ್ಧಿಕ ಪರಂಪರೆಯನ್ನು ಹಂಚುವ ಅವರ ಮಾದರಿಯನ್ನು ಕೇಳಿ ಕಣ್ಣಲ್ಲಿ ತೇವ ಒಸರಿಸಿತು.

ಸಂಗತಿ ೪. :

ಪದವಿಗಳು ಮಾಡುವ ವೈಪರೀತ್ಯಗಳ ಕುರಿತು ಒಂದು ಸಂಗತಿ ನೆನಪಾಗುತ್ತದೆ. ಈ ಪದವಿಗಳು ಎಂದರೆ ಎಂತಹವರಿಗೂ ಅಹಂ ತಂದೊಡ್ಡುವ ಸಂಗತಿಗಳೇ? ದೇವೇಂದ್ರನೇ ಪದವಿಗೆ ಅಹಂಕಾರ ಪಟ್ಟಿರುವಾಗ ಸಾಮಾನ್ಯ ಮಾನವರ ಪಾಡೇನು? ಮೊನ್ನೆ ಸಾವಿನ ಕ್ಷಣಗಳನ್ನೆದುರಿಸುತ್ತಿರುವ ಸಂದರ್ಭದಲ್ಲಿದ್ದ ಒಬ್ಬ ತಾಯಿಯ – ವೈದ್ಯ ಮಕ್ಕಳು ತಮ್ಮ ಪದವಿಗಳ ಅಹಂ ಹಿಡಿದು ಪ್ರತಿಷ್ಠೆಯಿಂದ ಜಗಳವಾಡಿದ್ದು ಕಾಣಬೇಕಾಯಿತು. ಸಾವು-ಬದುಕಿನ ವೈಜ್ಞಾನಿಕ ಅರಿವುಳ್ಳ ಅವರು ಸ್ವಂತ ತಾಯಿಯ ಅಂತಿಮ ಕ್ಷಣಗಳಲ್ಲೂ ತಮ್ಮ ಪದವಿ, ಪ್ರತಿಷ್ಠೆಯ ಪರವಾಗಿದ್ದರೆಂಬುದು ಸೋಜಿಗ. ಪದವಿ ನೀಡಿಕೆ ವಿಶ್ವವಿದ್ಯಾಲಯಗಳು ಸ್ಥಾನಗಳಷ್ಟೇ ಆದರೆ ಅವು ಪ್ರತಿಷ್ಠೆಯಿಂದ ಮಾನವತೆಯ ಮರೆವನ್ನೂ ಸಹಾ ಹಂಚುತ್ತವೆಯೋ ಎಂಬ ಆತಂಕ.

ಸಂಗತಿ ೫. :

ಮೊನ್ನೆ ಕೆಲವೇ ದಿನಗಳ ಹಿಂದೆ ನಡೆದ ಸಂಗತಿ ಇದು. ಒಂದು ವಿಚಾರಕ್ಕೆ ಕುರಿತಂತೆ ಸಾಮಾನ್ಯವಾಗಿ ನನಗೆ ಉಪನ್ಯಾಸ ಕೊಡಲು ಸಾಕಷ್ಟು ಸಮಯಕೊಟ್ಟು ಕರೆ ಬರುತ್ತದೆ. ಆದರೆ ಒಮ್ಮೆ ಹೀಗಾಯಿತು. ಸುಮ್ಮನೆ ಅಚಾತುರ್ಯವಾಗಿ ಒಂದು ಸೆಮಿನಾರು ನಡೆಯುವ ಕಡೆ ಹೋದಾಗ ಅದೇ ವಿಚಾರವನ್ನು ಕುರಿತಂತೆ ಉಪನ್ಯಾಸ ಕೊಡಲು ಕೇವಲ ಕೆಲವೇ ನಿಮಿಷಗಳ ಕಾಲವನ್ನು ಮುಂದಿಟ್ಟು ಕೇಳಿದರು. ಇಲ್ಲ, ಸ್ವಲ್ಪವಾದರೂ ತಯಾರಿ ಮತ್ತು ಮಾನಸಿಕ ಸಿದ್ಧತೆ ಬೇಕು, ಎಂದು ಮುಂದು ಹಾಕಲು ಪ್ರಯ್ನಸಿದೆ. ಹೇಗೋ ಮುಂದಕ್ಕೆ ಹೋಯಿತು. ಸ್ವಲ್ಪ ಸುಧಾರಿಸಿಕೊಂಡು ಮತ್ತೆ ಆ ಕಡೆ ಹೋದೆ. ಉಪನ್ಯಾಸ ಕೊಡುವಾಗ ನನಗೆ ಅಚ್ಚರಿ ಕಾದಿತ್ತು. ಅವರ ಉಪನ್ಯಾಸಕರ ಪಟ್ಟಿಯಲ್ಲಿ ನನ್ನ ಹೆಸರಿದ್ದುದು ಮಾತ್ರವಲ್ಲ. ಆ ವಿಚಾರಕ್ಕೆ ಸರಿ ಹೊಂದುವ ತಲೆಬರಹದಲ್ಲಿ ಒಂದು ಲೇಖನವು ನಾನೇ ಬರೆದಂತೆ

ಕೈಪಿಡಿಯಲ್ಲಿ ಅಚ್ಚಾಗಿತ್ತು. ನಾನೇನು ಬರೆದೂ ಕೊಟ್ಟಿರಲಿಲ್ಲ. ಹೋಗಲಿ ನನಗೆ ಆ ಉಪನ್ಯಾಸಗಳಿರುವ ಸಂಗತಿಯೂ ತಿಳಿದಿರಲಿಲ್ಲ. ಒಂದರ್ಥದಲ್ಲಿ ಆ ಬಗೆಯ ವಿಚಾರಗಳಿಗೇ ನಾನೇ ಹೊಣೆ ಎಂಬಂತೆ, ನಾನು ಇಲ್ಲದ್ದಿದ್ದರೂ ನಾನೇ ಕೊಟ್ಟಂತೆ ದಾಖಲೆಯಾಗಿತ್ತು. ಹೇಗೆಂದರೆ ಸಂತರು ಸತ್ತು ಸಮಾಧಿಯಾದ ಮೇಲೂ, ಅವರ ಹೆಸರಲ್ಲಿ ಪ್ರಸಾದ ಹಂಚುವ ಮೂಲಕ ಜನರ ಕಾರ್ಯಸಿದ್ಧಿಯನ್ನು ಪ್ರೇರೇಪಿಸುವಂತೆ ವಿಜ್ಞಾನದಲ್ಲೂ ಕೆಲಸ ನಡೆಯುತ್ತದೆ. ನಾವಿರಲೇ ಬೇಕೆಂದೇನೂ ಇಲ್ಲ. ಈ ಬಗೆಯ ಅನುಭಾವ ಪ್ರಕ್ರಿಯೆಗಳು ವಿಜ್ಞಾನಕ್ಕೆ ಸಾಧುವಲ್ಲ ಆದರೂ ನಡೆಯುತ್ತವೆ ಎಂದರೆ ಅಚ್ಚರಿಯಾಗುತ್ತದೆ. ಸಾಲದಕ್ಕೆ ಅದಕ್ಕೆ ಸಂಭಾವನೆಯೂ ಇತ್ತು! ಒಂದು ವೇಳೆ ನಾನಂದು ಅತ್ತ ಸುಳಿಯದೇ ಇದ್ದರೆ! ಇರಲಿ. ಸಂತರ ತರಹ ಸಮಾಧಿಯಿಂದಲೇ ಆಶೀರ್ವಚನ ನೀಡುವಂತೆ ಹೇಗೋ ನಡೆದೇ ಹೋಗುತ್ತದೆ. ವಿಶ್ವವಿದ್ಯಾಲಯಗಳು ಹೀಗಾಗಿವೆ ಎನ್ನುವುದೇ ದೊಡ್ಡ ವಿಸ್ಮಯ.

ಈ ಆತಂಕ ಹಾಗೂ ತಲ್ಲಣಗಳನ್ನು ಹೇಳಿಕೊಳ್ಳುತ್ತಿರುವುದಕ್ಕೆ, ಕಾರಣವಿದೆ. ಏನಾದರೂ ಪ್ರಾಮಾಣಿಕವಾಗಿ ಹಾಗೂ ಜನಪರವಾದ್ದನ್ನೇ ಮಾಡಬೇಕೆಂಬ ಹೋರಾಟವನ್ನು ನಿರಂತರವಾಗಿ ಮಾಡುತ್ತಾ, ಕೇವಲ ಹೋರಾಟವನ್ನಷ್ಟೇ ಮಾಡಲಾಗುತ್ತಿರುವ ಬಗ್ಗೆ ಬೇಸರ ಮತ್ತು ದುಃಖ. ಆತ್ಮವಂಚನೆಯಿಂದ ಕೆಲಸ ನಿರ್ವಹಿಸುವ ಬಗೆಗೆ ಕೋಪ, ಅಸಹನೆ ಮತ್ತು ಅತೃಪ್ತಿ. ಸಂಶೋಧನೆ ಹಾಗೂ ವಿಜ್ಞಾನದ ವಿಚಾರಗಳಲ್ಲಿ ಜನಪರವಾಗಿರುವ ನಿಲುವುಗಳ ಬಗೆಗೆ ಸಾರ್ವಜನಿಕವಾಗಿ ಚರ್ಚಿಸದಂತಹ ಪರಿಸ್ಥಿತಿಯೂ ಸೇರಿ ಮತ್ತಷ್ಟು ಬೇಸರಿಕೆ ತರಿಸುತ್ತದೆ.

ಎಷ್ಟೆಂದರೂ ನಮ್ಮದು, ಏನಾದರೂ ಮಾಡುವ ಹಂಬಲದ ಮನಸ್ಸು. ಮತ್ತೆ ಮತ್ತೆ ಸಾಧ್ಯತೆಗಳ ಕುರಿತು ನಂಬಿಕೆಗಳನ್ನು ಅರಸುತ್ತದೆ. ಇಂತಹ ತವಕಗಳಿಗೆ ಕ್ರಿಯಾಶೀಲತೆಯು ಕಡೆ ಅವಕಾಶಗಳನ್ನು ಹುಡುಕುವಂತಾಗುತ್ತದೆ.

ಹೀಗೆ ಮೇಲಿನ ಒಂದಷ್ಟು ಸಂಗತಿಗಳಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಹೇಗಿರಬೇಕು, ಹೇಗಿರಬಾರದು ಎಂಬುದನ್ನು ಹೇಳಿದ್ದರೂ ಮತ್ತೆ ಕೆಲವನ್ನು ಹೇಳಬೇಕಿದೆ. ನಮ್ಮ ವಿಶ್ವವಿದ್ಯಾಲಯ ಸಂಪೂರ್ಣ ಜನಪರವಾಗಿರಬೇಕು. ಒಂದು ವಿಶ್ವವಿದ್ಯಾಲಯದಿಂದ ಸಮಾಜ ಮತ್ತು ಜನತೆ ಏನನ್ನು ಬಯಸುತ್ತಾರೆ, ಹಾಗೂ ಬಯಸಬೇಕು? ಬಹಳ ಮುಖ್ಯವಾಗಿ ಆಯಾ ವಿಷಯಗಳ ಪರಿಮಿತಿಯಲ್ಲಿ ಮುಖ್ಯವಾಗಿ ಒಂದು ವಿಶ್ವವಿದ್ಯಾಲಯದಿಂದ ಶಿಕ್ಷಣ ಹಾಗೂ ಅಭಿವೃದ್ಧಿ ಕುರಿತಂತೆ ಪರಿಕಲ್ಪನೆಗಳನ್ನು ಸೃಷ್ಟಿಸಬೇಕು. ಶಿಕ್ಷಣ ಮತ್ತು ಅಭಿವೃದ್ಧಿ ವಿಚಾರಗಳಲ್ಲಿ ನಾವು ಸದಾ ಎರವಲಿನ ಮಾದರಿಯನ್ನೇ ನೆಚ್ಚಿಕೊಂಡಿದ್ದೇವೆ. ವಿಶ್ವವಿದ್ಯಾಲಯಕ್ಕೆ ಇದರಲ್ಲಿ ಹೆಚ್ಚಿನ ನಿರೀಕ್ಷೆಗಳಿವೆ. ಆಧುನಿಕ ಮಾದರಿಗಳು ಈ ಎರಡೂ ವಿಚಾರಗಳಲ್ಲಿ ಅನುಕರಣೆಗಳೇ. ಶಿಕ್ಷಣ ಮತ್ತು ಅಭಿವೃದ್ಧಿಯಲ್ಲಿ ನಮ್ಮವೇ ಆದ, ನಮ್ಮ ನೆಲವನ್ನು ಮತ್ತಷ್ಟು ನೆಲೆಗೊಳಿಸಬಲ್ಲ ಪರಿಕಲ್ಪನೆಗಳು ವಿಶ್ವವಿದ್ಯಾಲಯಗಳಿಂದ ಸಾಕಾರಗೊಳ್ಳಬೇಕಿದೆ. ಅದನ್ನು ವಿಶ್ವವಿದ್ಯಾಲಯಗಳು ಅತ್ಯಂತ ಸಮರ್ಥವಾಗಿ ನಿಭಾಯಿಸಬೇಕಾಗಿದೆ.

ಅಂತಹ ನೆಲೆಗಳಿಂದ ಜೀವನ ಸಾರ್ಥಕ್ಯವನ್ನು ಕಂಡು ಕೊಂಡ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವನ್ನು ಕಲ್ಪಿಸಿಕೊಳ್ಳಬೇಕಿದೆ.

ಶಿಕ್ಷಣ ಹಾಗೂ ಅಭಿವೃದ್ಧಿ ಪರಿಕಲ್ಪನೆಗಳು ಸಂಬಂಧಿಸಿದಂತೆ ಇಂದಿನ ಅಗತ್ಯಗಳಿಗೆ ಜನರ ಆಶಯ ಹಾಗೂ ಮೆರಗನ್ನು ಕೊಡುವಲ್ಲಿ ವಿಶ್ವವಿದ್ಯಾಲಯವು ಪ್ರಮುಖ ಪಾತ್ರ ವಹಿಸಬಹುದು. ಆಧುನಿಕ ವಿಶ್ವವಿದ್ಯಾಲಯಗಳೂ ಈ ಕುರಿತೇ ಆಲೋಚಿಸುತ್ತಾ ಕಾರ್ಯಪ್ರವೃತ್ತವಾಗಿರುವುದನ್ನು ಜಗತ್ತಿನಾದ್ಯಂತ ಕಾಣಬಹುದಾಗಿದೆ. ಸಾಲದಕ್ಕೆ ಈ ಬಗೆಯ ಆಲೋಚನೆಗಳಿಗೆ ಸುಸ್ಥಿರತೆಯ ಬೆಂಬಲವೂ ಇದೆ.

ಹಾಗೇನೇ ಜನಪದ ತಂತ್ರಜ್ಞಾನಗಳ ಕುರಿತಂತೆ ಆಧುನಿಕ ಜಗತ್ತಿಗೆ ಹೊಂದುವ ಹಿನ್ನೆಲೆಯಲ್ಲಿ ಪರಿಶೋಧಿಸುವ ಅಗತ್ಯವೂ ಇದೆ. ಇವುಗಳಲ್ಲಿರುವ ಜೀವಪರ ಕಾಳಜಿ ಹಾಗೂ ಸುಸ್ಥಿರತೆಯ ನಿಲುವುಗಳನ್ನು ಬಳಸುವ ಅವಕಾಶವು ದೊರೆಯಲಿದೆ. ತಂತ್ರಜ್ಞಾನಗಳು ಇಂದು ಜಗತ್ತಿನ ಆಳವ ಸಾಮರ್ಥ್ಯವನ್ನು ಹೆಚ್ಚಿಕೊಳ್ಳತ್ತಿರುವ ಸಂದರ್ಭದಲ್ಲಿ ಅವು ಜನಪರವಾಗುವಂತೆ ನೋಡಕೊಳ್ಳುವಲ್ಲಿ ಅನುಕೂಲಗಳಿವೆ. ಅನೇಕ ಜನಪದ ತಾಂತ್ರಿಕತೆಗಳಿಂದು ಹೊಸತೊಂದು ಬಾಗಿಲನ್ನು ತೆರಯಲು ಸಾಧ್ಯಮಾಡಿಕೊಡಲಿವೆ.

ಜನರಲ್ಲಿ ವೃತ್ತಿಯಾಗಿ ಕೃಷಿಗೆ ಅಗ್ರಸ್ಥಾನ. ಇಷ್ಟೆಲ್ಲಾ ವೈಜ್ಞಾನಿಕ ಬೆಳವಣಿಗೆಗಳಲ್ಲೂ ಕೃಷಿಯೊಂದು ಆಯ್ಕೆಯ ವೃತ್ತಿಯಾಗಿಲ್ಲ. ಅದೇನಿದ್ದರೂ ಅನಿವಾರ್ಯವಾದ ಆಯ್ಕೆಯಾಗಿದೆ. ಕೃಷಿಯನ್ನೇ ಜೀವನದ ಪ್ರಮುಖ ವೃತ್ತಿಯೆಂದು ಆಯ್ದುಕೊಳ್ಳುವ, ಹಾಗೂ ಆ ಬಗೆಯ ವೃತ್ತಿಯಾಗಿ ಕೃಷಿಗೆ ಒಂದು ಸಾಮಾಜಿಕ ಸ್ಥಾನ ದೊರೆಯುವ ಕನಸಿನ್ನೂ ಕನಸಾಗೇ ಇದೆ. ಇದಕ್ಕಷ್ಟು ನೆಲೆಯೊದಗಿಸುವ ಜವಾಬ್ದಾರಿ ನಮ್ಮ ಮುಂದಿನ ದಿನಗಳಲ್ಲಿ ಇವೆ. ಇದನ್ನು ವಿಶ್ವವಿದ್ಯಾಲಯಗಳು ತಮ್ಮ ಸಮಾಲೋಚನೆಯ ಒಳಗೆ ತರುವುದು ಆ ಕಸುಬಿಗೆ ಮಾಡಬಹುದಾದ ದೊಡ್ಡ ಉಪಕಾರ. ಕೃವಿಶ್ವವಿದ್ಯಾನಿಲಯಗಳಿವೆಯಲ್ಲಾ ಎನ್ನಿಸಬಹುದು. ಆದರೆ ಅವುಗಳೇನಿದ್ದರೂ ತಂತ್ರಜ್ಞಾನಗಳ ವಹಿವಾಟಿನಲ್ಲೇ ಮುಳುಗಿವೆ. ಸದ್ಯಕ್ಕಂತೂ ಜಗತ್ತಿನಲ್ಲಿ ಒಂದು ವೃತ್ತಿಯಾಗಿ ಕೃಷಿಯು ಆದ್ಯತಾ ಕ್ಷೇತ್ರವಾಗಿಲ್ಲ ಎಂಬುದು ನಿಜ. ಇದು ಕೃಷಿವಿಶ್ವವಿದ್ಯಾಲಯಗಳಿದ್ದೂ ಇರುವ ಪರಿಸ್ಥಿತಿ. ಒಂದು ವೃತ್ತಿಯಾಗಿ ಕೃಷಿಯನ್ನು ನೋಡುವ ದೃಷ್ಟಿಕೋನವೇ ಬೇರೆಯದು. ಈ ಜೀವಸೆಲೆಯ ಪ್ರೀತಿಯನ್ನು ವೃತ್ತಿಯಲ್ಲಿ ಉಳಿಸಿ ಬೆಳಸುವ ಹಾಗೆ ಮಾಡುವ ಎಲ್ಲ ಅವಕಾಶಗಳಿವೆ. ಜನರ ಜೀವಸೆಲೆಯ ಮೂಲ ವೃತ್ತಿಗಳನ್ನು ಪರಿಶೋಧಿಸುವ ಜರೂರೂ ಕೂಡ ಇದೆ.

* * *

ನೀವೆಲ್ಲರೂ ಇನ್ನು ಹೊರಡಬಹುದು: ಭೂಮಿಯ ಆದೇಶ

– ದ ಆನಿಯನ್ ಪತ್ರಿಕೆ

ಇತ್ತೀಚೆಗೆ 'ಭೂಮಿ' ಹೊರಡಿಸಿರುವ ಪತ್ರಿಕಾ ಪ್ರಕಟಣೆಯ ಪ್ರಕಾರ ಭೂಗ್ರಹವು ತನ್ನ ಮೇಲೆ ವಾಸಿಸುತ್ತಿರುವ ಸುಮಾರು ೭೦೦ ಕೋಟಿ ಜನರಿಗೆ ನೀವೆಲ್ಲ ಇನ್ನು ಹೊರಡಬೇಕು ಎಂದು ತಿಳಿಸುವ ವಿಧಾನಗಳು ಗೊತ್ತಾಗದೆ ಒದ್ದಾಡುತ್ತಿದೆ ಎಂದು ತಿಳಿಸಿದೆ.

ಮಿಸಿಸಿಪಿ ನದಿಯಲ್ಲಿ ಇತ್ತೀಚೆಗೆ ಬಂದ ಪ್ರವಾಹ ಮತ್ತು ಅಮೆರಿಕಾದ ಉದ್ದಗಲಕ್ಕೂ ಬಂದ ಬಿರುಗಾಳಿ ಜತೆಗೆ ಜಗತ್ತಿನ್ನಾದ್ಯಂತ ಘಟಿಸುತ್ತಿರುವ ಅನೇಕ ಪ್ರಾಕೃತಿಕ ವಿಕೋಪಗಳು ಇವುಗಳ ನಂತರ ತನ್ನ ಮೇಲೆ ಮಾನವರು ಇರಬಾರದೆಂದು ಯಾವ ರೀತಿಯಿಂದ ಹೇಳಿದರೂ ಅವರಿಗೆ ಅರ್ಥವಾಗುತ್ತಿಲ್ಲವೆಂದು ಹಲುಬಿದೆ.

"ಈ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಸ್ಪಷ್ಟವಾಗಿ ಹೇಳಿದ್ದೇನೆ." ಎಂದು ಈ ಪ್ರಕಟಣೆ ಮಾನವಕುಲಕ್ಕೆ ತಿಳಿಸಿದೆ. "ನಾನೇನೂ ಇದನ್ನು ಸೂಕ್ಷ್ಮವಾಗಿ, ಪಿಸುಮಾತಿನಲ್ಲಿ ಹೇಳಿಲ್ಲ. ನಿಮ್ಮನ್ನು ಅಕ್ಷರಶಃ ಮುಳುಗಿಸಿದ್ದೇನೆ, ತುಳಿದಿದ್ದೇನೆ, ಉಪವಾಸ ಹಾಕಿದ್ದೇನೆ, ರೋಗಗಳ ಮೂಟೆಯನ್ನೇ ನಿಮ್ಮ ಮೇಲೆಸೆದಿದ್ದೇನೆ, ನಿಮ್ಮನ್ನು ಹಾಗೂ ನಿಮ್ಮ ಕುಟುಂಬಗಳನ್ನು ಸಾವಿನಂಚಿಗೆ ದೂಡಿದ್ದೇನೆ. ನಿಮಗೆ ನನ್ನ ಸಂದೇಶವನ್ನು ಬೇರಾವ ರೀತಿಯಲ್ಲಿ ಹೇಳಲಿ?"

"ಎಲ್ಲವನ್ನೂ ಬಿಡಿಸಿ ಬಿಡಿಸಿ ಹೇಳಬೇಕೇನು? ನೀವಿದ್ದದ್ದು ಸಾಕು. ಈಗ ಹೊರಡಿ." ಎಂದಿದೆ.

ಈಗ ಮಾಡಬೇಕಾದದ್ದು ಇನ್ನೇನೂ ಉಳಿದಿಲ್ಲ. ಹೊಸಹೊಸ ವಿಕೋಪಗಳನ್ನು ಸೃಷ್ಟಿಸುತ್ತಾ ಹೋಗುವುದು ಮತ್ತು ಮಾನವರಿಗೆ ಇದು ಅರ್ಥವಾಗುವಂತೆ ಮಾಡುವುದು.

ಹೇಳಿಕೆ ಮುಂದುವರೆದು ೨೦೧೧ರೊಂದರಲ್ಲೇ ನಡೆದ ಸಾವಿರಾರು ಘಟನೆಗಳ ಪಟ್ಟಿ ಕೊಟ್ಟು ಇವೆಲ್ಲವೂ ಮಾನವರೆಲ್ಲರೂ ಭೂಮಿಯನ್ನು ಬಿಟ್ಟು ಹೊರಡಿ ಎಂದು ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ತಿಳಿಸುವ ಉದ್ದೇಶವನ್ನು ಹೊಂದಿದ್ದವು ಎಂದೂ ಅದು ಹೇಳಿದೆ. ಸಾವಿರಾರು ಜನರ ಸಾವಿಗೆ ಕಾರಣವಾದ ಜಪಾನಿನ ಸುನಾಮಿ, ೧೮೧ ಜನರ ಸಾವಿಗೆ ಕಾರಣವಾದ ನ್ಯೂಜಿಲೆಂಡಿನ ಭೂಕಂಪ, ಭೂಕುಸಿತದಿಂದ ಸಮುದಾಯಗಳೇ ಕಣ್ಮರೆಯಾದ ಘಟನೆಗಳಿಗೆ ಕಾರಣವಾದ ಕೊಲಂಬಿಯಾದ ಐತಿಹಾಸಿಕ ಮಳೆ ಇವೂ ಆ ಗುಂಪಿಗೇ ಸೇರುತ್ತವೆ.

"ಚೀನಾದಲ್ಲಿ ಬರದಿಂದಾಗಿ ೨೩ ಲಕ್ಷ ಜನರು ನೀರು ಸಿಗದೆ

ಪರದಾಡುತ್ತಿರುವ ಘಟನೆಯೂ ಇಂಥ ಸೂಚನೆಯನ್ನು ಕೊಡುವ ಉದ್ದೇಶದಿಂದಲೇ ಆದದ್ದು" ಎಂದೂ ಭೂಮಿ ಹೇಳಿದೆ.

ಚರಿತ್ರೆಯಲ್ಲೇ ಕೇಳರಿಯದ ಚಳಿಗಾಲದ ಬಿರುಗಾಳಿಯನ್ನು ಅನುಭವಿಸಿಯಾದರೂ ಮಾನವ ಬುದ್ಧಿಕಲಿಯಬಹುದೆಂದು ಭೂಮಿ ಭಾವಿಸಿತ್ತು. ಆದರೆ ಅದೆಲ್ಲವನ್ನೂ ಹಚ್ಚಿಕೊಳ್ಳದೆ ನಿರುಮ್ಮಳವಾಗಿ ಬದುಕುತ್ತಿರುವುದು ಅಚ್ಚರಿ ಮೂಡಿಸಿದೆ. ಆ ಘಟನೆಗಳಿಗೆ ಸಿಲುಕಿ ನೊಂದವರಿಗೆ ಆಗಾಗೆ ಕೊಂಚ ಸಮಾಧಾನ ಹೇಳುತ್ತಾರಾದರೂ ಈ ಭೂಮಿಬಿಟ್ಟು ವಿಶ್ವದ ಬೇರೆಡೆಗೆ ಹೊರಡುವ ತಯಾರಿಯನ್ನೇ ಮಾನವರು ಮಾಡಿಕೊಳ್ಳುತ್ತಿಲ್ಲ.

"ನನ್ನನ್ನು ಬಿಟ್ಟು ಹೋಗಲು ಬೇಕಾದ ತಂತ್ರಜ್ಞಾನವನ್ನು ನೀವು ಈಗಾಗಲೇ ಕಂಡುಹಿಡಿದಿದ್ದೀರಿ. ಅದನ್ನು ಹಿಂದೆ ಬಳಸಿದ್ದನ್ನೂ ನೋಡಿದ್ದೇನೆ. ಹಾಗಾಗಿ ನಾನು ಕೊಟ್ಟ ಸುಳಿವುಗಳನ್ನು ತಿಳಿದುಕೊಂಡು ಆದಷ್ಟು ಬೇಗ ಹೊರಡಿ" ಎಂದು ಪ್ರಕಟಣೆಯ ಇನ್ನೊಂದೆಡೆ ತಿಳಿಸಲಾಗಿದೆ. ಮನುಕುಲವು ಕೆಲಕಾಲ ಬೇರೆಡೆ ಹೋದರೆ ಸಂಬಂಧಿಸಿದ ಎಲ್ಲರಿಗೂ ಒಳ್ಳೆಯದಾಗುವುದೆಂಬ ಆಶಯವನ್ನು ವ್ಯಕ್ತಪಡಿಸಿದೆ. "ಈಗಿರುವ ಪರಿಸ್ಥಿತಿಯಲ್ಲಿ ನೀವಾದರೂ ಸಂತೋಷವಾಗಿಲ್ಲವಲ್ಲ! ಇಲ್ಲೇ ಮುಂದುವರಿಯುವುದಾದರೆ ನಿಮಗೆ ನೀವೇ ನೋವು ಸಂಕಟಗಳನ್ನು ಕೊಟ್ಟುಕೊಂಡು ಇರಲು ಇಷ್ಟಪಡುತ್ತಿದ್ದೀರೆಂದು ಅನಿಸುತ್ತದೆ.

ಈ ಪ್ರಕಟಣೆಯನ್ನು ಬಿಡುಗಡೆ ಮಾಡಿದ ತಕ್ಷಣವೇ 'ಭೂಮಿ'ಯು ಒಂದಷ್ಟು ಕಾಡ್ಗಿಚ್ಚುಗಳನ್ನು ಅನೇಕ ಸ್ಥಳಗಳಲ್ಲಿ ಹಬ್ಬಿಸಿದೆ.

ಕೆಲ ವಿಜ್ಞಾನಿಗಳು ಈ ಪ್ರಕಟಣೆಯನ್ನು ಓದಿದ ಬಳಿಕ 'ಭೂಮಿ'ಯು ಮಹತ್ವದ ಸಂದೇಶವೊಂದನ್ನು ಕೊಡಲು ಪ್ರಯತ್ನಿಸುತ್ತಿದೆಯೆಂದು ಇದನ್ನು ಗಂಭೀರವಾಗಿ ಪರಿಗಣಿಸಿದರು.. ಆದರೆ ಹೆಚ್ಚಿನವರು ಈ ಸಂದೇಶವನ್ನು ಅರ್ಥ ಮಾಡಿಕೊಳ್ಳಲು ಹೆಚ್ಚಿನ ಅಧ್ಯಯನ ಅಗತ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.

"ಹೌದು. ಭೂಮಿಯ ಹೇಳಿಕೆಗಳು ಕಟುವಾಗಿವೆ. ಆದರೆ ಇವು ದೂರಗಾಮಿ ಪರಿಣಾಮಗಳ ಬಗ್ಗೆ ಇದೆಯೋ ಇಲ್ಲ ಭೂರಾಸಾಯನಿಕ ಪ್ರವೃತ್ತಿಯೊಂದನ್ನು ಸೂಚಿಸುತ್ತದೆಯೋ ಎಂದು ತಿಳಿಯಬೇಕಾಗಿದೆ" ಎಂದು ಪ್ರಖ್ಯಾತ ಎಂ.ಐ.ಟಿ. ಸಂಸ್ಥೆಯ ಡಾ. ರೋಜರ್ ಸಮನ್ಸ್ ಹೇಳಿದ್ದಾರೆ. ಮಾನವರು ಹೊರಟುಹೋಗಬೇಕು ಮತ್ತು ಹಿಂತಿರುಗಿ ಬರಬಾರದು ಎಂದು ಭೂಮಿಹೇಳುತ್ತಿರುವುದು ನಿಜವೆಂದು ಮೇಲ್ನೋಟಕ್ಕೆ ತೋರಿದರೂ ಖಡಾಖಂಡಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಇದರ ಬಗ್ಗೆ ನಮ್ಮ ಅರಿವನ್ನು ಇನ್ನೂ ಹೆಚ್ಚಿಸಿಕೊಳ್ಳಬೇಕಾಗಿದೆ ಎಂದಿದ್ದಾರೆ.

ಬಹುಸಂಖ್ಯಾತ ವಿಜ್ಞಾನಿಗಳು ಹಾಗೂ 'ಭೂಮಿ'ಯ ಅನಿಸಿಕೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ರಾಜಕಾರಣಿಗಳು ಭೂಮಿಯ ಅಭಿಪ್ರಾಯಗಳೆಲ್ಲ ತೀರಾ ಪ್ರತಿಗಾಮಿ ಹಾಗೂ ಜನವಿರೋಧಿ" ಎಂದು ಹೇಳಿದ್ದಾರೆ.

"ಇದರಲ್ಲಿ ಹೊಸದೇನೂ ಇಲ್ಲ. ಭೂಮಿ ಇದನ್ನು ಕಾಲಾಂತರದಿಂದಲೂ

ಹೇಳುತ್ತಾ ಬಂದಿದೆ. ಮನುಕುಲಕ್ಕೆ ನೀಡಿದ ವಚನವನ್ನು ಪಾಲಿಸದೆ ನಮಗೆ ಬೇಕಾದ ಸಂಪತ್ತನ್ನು ನೀಡುವಲ್ಲಿ ಮತ್ತೆ ಮತ್ತೆ ಸೋತಿರುವ ಗ್ರಹವೊಂದು ನಮ್ಮನ್ನು ಬೆದರಿಸುವುದನ್ನು ನಾವು ಒಪ್ಪಲು ಸಾಧ್ಯವಿಲ್ಲ" ಎಂದು ಶಾಸಕ ಜಿಮ್ ಇನಾಫ್ ಹೇಳಿದ್ದಾರೆ.

ಇದನ್ನು ಕೇಳಿದ ಕೂಡಲೇ ನಿಟ್ಟುಸಿರಿಟ್ಟ ಭೂಮಿ ತನ್ನ ಮೇಲ್ಪದರವನ್ನು ಅಲ್ಲಾಡಿಸಿದಾಗ ನಾಲ್ಕೈದು ಖಂಡಗಳಲ್ಲಿ ಭೂಕಂಪ ಉಂಟಾಯಿತು!

* * *

ಸುಸ್ಥಿರತೆ ಸ್ಥಾಪಿಸಲು ಇನ್ನೂ ಕಾಲ ಮಿಂಚಿಲ್ಲ

– ಸ್ಟೀವ್ ಸಲ್ಮೋನಿ

ನಮ್ಮ ಅತಿ ಬಳಕೆ ಪ್ರವೃತ್ತಿ , ಭೋಗ ಜೀವನ, ಬೃಹತ್ ಉದ್ದಿಮೆಗಳಿಂದ ಮಿತಿಯಿಲ್ಲದ ಉತ್ಪಾದನೆ, ಏರುತ್ತಿರುವ ಜನಸಂಖ್ಯೆ ಇವುಗಳಿಂದ ಹೊರಬರಲು ಹೆಚ್ಚು ಸಮಯ ಉಳಿದಿರುವಂತೆ ತೋರುತ್ತಿಲ್ಲ – ಹೆಚ್ಚೆಂದರೆ ಹತ್ತಿಪ್ಪತ್ತು ವರ್ಷಗಳಿರಬಹುದು. ಈ ಲೇಖನ ಓದುತ್ತಿರುವವರು ಬದುಕಿರುವಷ್ಟು ದಿನಗಳು ಕೂಡ ಈ ಭೂಮಿಯ ಮೇಲೆ ಜೀವಿಗಳನ್ನು ಉಳಿಸಿಕೊಳ್ಳುವುದಾಗಲೀ ಭೂಮಿಯ ಸಮಗ್ರತೆಯನ್ನು ರಕ್ಷಿಸಿಕೊಳ್ಳುವುದಾಗಲೀ ಸಾಧ್ಯವೇ ಎಂಬುದರ ಬಗ್ಗೆ ಅನುಮಾನಗಳಿವೆ. ಕಡಿವಾಣವೇ ಇಲ್ಲದ ದುರ್ಬಳಕೆ / ಅನಗತ್ಯ ದಾಸ್ತಾನು ಮಾಡುವಿಕೆ , ತೀವ್ರಗತಿಯಲ್ಲಿ ಸಾಗುತ್ತಿರುವ ಆರ್ಥಿಕ ಜಾಗತೀಕರಣ, ಮತ್ತು ಪ್ರತಿ ವರ್ಷ ಹುಟ್ಟುತ್ತಿರುವ ೭–೮ ಕೋಟಿ ಮಕ್ಕಳು ಇವೆಲ್ಲದರ ನಡುವೆ ನಮ್ಮ ಭೂಮಿಗಿರುವ ಸಂಪನ್ಮೂಲಗಳು ಸುಸ್ಥಿರವಾಗಿರಲು ಹೇಗೆ ಸಾಧ್ಯವೆಂದು ಯಾರಾದರೂ ನನಗೆ ವಿವರಿಸುವಿರಾ? ನನ್ನ ಲೆಕ್ಕಾಚಾರದಂತೆ ಈಗಿರುವಂತೆಯೇ ಎಲ್ಲವೂ ನಡೆಯುತ್ತಿದ್ದರೆ, ಅಂದರೆ ಪ್ರಸ್ತುತ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿರುವಂತೆ – ಬಹಳ ದಿನ ಉಳಿಯಲು ಸಾಧ್ಯವೇ ಇಲ್ಲ. ಇನ್ನು ನಾಲ್ಕು ದಶಕಗಳಲ್ಲಿ ನಾವೆಲ್ಲಾ ಹೊಸ ಆರ್ಥಿಕತೆಯೆಡೆಗೆ ಸಾಗುತೇವೆ, 'ಹಿಂದುಳಿದ' ದೇಶಗಳು 'ಮುಂದುವರಿದ' ದೇಶಗಳು ಹಿಡಿದ ಹಾದಿಯನ್ನು ಹಿಡಿಯದೇ, ಅವುಗಳು ಮಾಡಿದ ತಪ್ಪನ್ನು ಮಾಡದೇ ಮುಂದಿನ ದಿನಗಳಲ್ಲಿ ಬರುವ ಸಂಕಷ್ಟಗಳ ಸರಮಾಲೆಗಳನ್ನು ಕೆಲಕಾಲ ಹೇಗೋ ಎದುರಿಸಿಬಿಡುತ್ತವೆ. ನಂತರ ಸುಮಾರು ೨೦೫೦ರ ಹೊತ್ತಿಗೆ ಜನಸಂಖ್ಯೆ ಹತೋಟಿಗೆ ಬರುತ್ತದೆ ಎಂಬ ಕನಸುಗಳು ಕೇವಲ ಕನಸುಗಳು ಮಾತ್ರ. ಈ ಕಾಣ್ಕೆಗೆ ಯಾವ ವೈಜ್ಞಾನಿಕ ತಳಹದಿಯಿದೆ? ಇಂಥ ಸಾಧ್ಯತೆ ಕೇವಲ ಒಂದು ಆಶಯವೇ ವಿನಹ ಅದು ವಸ್ತುಸ್ಥಿತಿಯನ್ನು ಪ್ರತಿನಿಧಿಸುತ್ತಿಲ್ಲ. ಇನ್ನೂ ಹೇಳಬೇಕೆಂದರೆ ಆ ಸಾಧ್ಯತೆ ಕೇವಲ ಹಗಲುಗನಸಾಗಿದೆ ಮತ್ತು ಸಂಶೋಧನೆಗಳ ಆಧಾರದ ಮೇಲೆ ನಿಂತಿಲ್ಲವೆಂಬುದು ಯಾರಿಗಾದರೂ ಗೋಚರಿಸಬೇಕಿತ್ತು. ಹೀಗಾಗಬಹುದು ಎಂದು ಹೇಳುತ್ತಿರುವವರು ಸಮರ್ಥನೆಯಾಗಿಟ್ಟುಕೊಂಡಿರುವ ಅಂಶಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಅನುಕೂಲಸಿಂಧುವಾಗಿದೆಯೇ ವಿನಃ ಸರಿಯಾಗಿವೆಯೆಂದಾಗಲೀ ಸೂಕ್ತವಾಗಿವೆಯೆಂದಾಗಲೀ ಹೇಳಲಾಗದು.

ದುರದೃಷ್ಟಕರ ಸಂಗತಿಯೆಂದರೆ ಇಂಥ ಸುಳ್ಳುಗಳನ್ನು ಬಯಲುಮಾಡಿ ಜನಸಾಮಾನ್ಯರಿಗೆ ತಿಳಿಸುವ ಗುರುತರ ಜವಾಬ್ದಾರಿಯುಳ್ಳ ಪ್ರತಿಭಾವಂತ ವಿಜ್ಞಾನಿಗಳು ಶ್ರೀಮಂತ ಹಾಗೂ ದುರಾಸೆಯುಳ್ಳವರ ಕೈಗೊಂಬೆಗಳಾಗಿ ಮೌನ ಧರಿಸಿದ್ದಾರೆ. ಜನರು ಏನು ತಿಳಿಯಬೇಕಾಗಿದೆಯೋ ಅದನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸುವ ಮಾರ್ಗಗಳನ್ನು ವಿಜ್ಞಾನಿಗಳು ಹುಡುಕಬೇಕಿದೆ. ಭೂಮಿಗಿರುವ ಸೀಮಿತ ಸಂಪನ್ಮೂಲಗಳು ನಾಶವಾಗುತ್ತಿರುವುದು, ನಮ್ಮ ಪರಿಸರ ತೀವ್ರವಾಗಿ ಕಲುಷಿತಗೊಳ್ಳುತ್ತಿರುವುದು ಮತ್ತು ಮಾನವರು ವಾಸಿಸಲು ಅಸಾಧ್ಯವಾಗುವಂತೆ ಮಾನವರೇ ಭೂಮಿಯನ್ನು ಹಾಳುಗೆಡವುತ್ತಿರುವುದು ಇವುಗಳು ನಮ್ಮ ಲೋಭ, ದುರ್ಬಳಕೆ, ಉತ್ಪಾದನೆಗಳಿಂದಾಗಿಯೇ ಆಗಿರುವುದು ಅಂಗೈಯ ಹುಣ್ಣಿನಂತೆ ಸ್ಪಷ್ಟವಾಗಿದೆ. ಒಟ್ಟಾರೆ ಹೇಳುವುದಾದರೆ ಮನುಕುಲದ 'ಪ್ರಗತಿ' ನಾಗಾಲೋಟದಲ್ಲಿ ಸಾಗುತ್ತಿದ್ದು ನಮ್ಮ ಪರಿಸರವು ರಿಪೇರಿ ಮಾಡಲಾಗದಷ್ಟು ಹದಗೆಟ್ಟಿದೆ, ಹದಗಡುತ್ತಿದೆ. ಅದರಿಂದಾಗುವ ದುಷ್ಪರಿಣಾಮಗಳನ್ನು ಊಹಿಸಲೂ ಭಯವಾಗುತ್ತಿದೆ. ಇದರಿಂದ ಹೊರಬರಬೇಕಾದರೆ ಈಗಿರುವ ಕೃತಕ, ಕೊನೆಯಿಲ್ಲದಂತೆ ಬೆಳೆಯುತ್ತಿರುವ ಬೃಹತ್ ಜಾಗತಿಕ ಆರ್ಥಿಕ ವ್ಯವಸ್ಥೆ ತಾನೇತಾನಾಗಿ ಅಸ್ತಿರತೆಯತ್ತ ಸಾಗುವುದನ್ನು ತಡೆಯಲೇಬೇಕಿದೆ. ಇಲ್ಲದಿದ್ದರೆ ನಮ್ಮನ್ನು ಸಲಹುತ್ತಿರುವ ಪರಿಸರ ಕುಸಿದು ಬೀಳುವುದಕ್ಕೂ ಮೊದಲು ನಮ್ಮ ಆರ್ಥಿಕ ವ್ಯವಸ್ಥೆ ಕುಸಿದು ಬೀಳುವುದು ಖಂಡಿತ.

ಮೇಲೆ ವಿವರಿಸಿದ ಪರಿಸ್ಥಿತಿ ಮತ್ತು ಅದರಿಂದುಂಟಾಗಿರುವ ಸಮಸ್ಯೆಗಳು ನೈಜವಾಗಿದ್ದರೆ ಈ ಅತೀ ಬೆಳವಣಿಗೆಯನ್ನು ನಿಧಾನಗೊಳಿಸಲು ಪ್ರಜ್ಞಾವಂತ ವ್ಯಕ್ತಿಗಳು ಜವಾಬ್ದಾರಿಯುತ ಮತ್ತು ಜೀವಪರ ಪ್ರಯತ್ನಗಳನ್ನು ಕೂಡಲೇ ಪ್ರಾರಂಭಿಸುವುದು ಸುಸ್ಥಿರತೆಯ ಹಾದಿಯಲ್ಲಿ ನಾವು ಹಾಕಬಹುದಾದ ಮೊದಲನೇ ಹೆಜ್ಜೆ. ಹೀಗಾಗಿ ಇನ್ನು ಸ್ವಲ್ಪವೇ ಕಾಲಾವಕಾಶವಿರುವಾಗ ಸುಸ್ಥಿರತೆಯ ಹಾದಿ ಹಿಡಿಯುವ ಇಲ್ಲವೇ ಅನತಿ ಕಾಲದಲ್ಲಿ ಬದುಕಲಸಾಧ್ಯವಾದ ಭೂಮಿಯಲ್ಲಿ ನಾಶವಾಗುವ ಅನೇಕ ಸಂತತಿಗಳ ಜತೆ ಸೇರಿಕೊಳ್ಳುವುದು ಮನುಕುಲದ ಆಯ್ಕೆಯಾಗಿದೆಯೆಂದೆನಿಸುತ್ತದೆ.

* * *

ಸರ್ವನಾಶ : ಎಲ್ಲರೂ ಕಿವುಡರಂತಿರುವುದೇಕೆ?

– ಪೀಟರ್ ಗುಡ್ ಚೈಲ್ಡ್

ನಾವಿರುವ ವ್ಯವಸ್ಥೆಯ ಕುಸಿತದ ಬಗ್ಗೆ ಎಷ್ಟೇ ಮಾಹಿತಿ ಬರುತ್ತಿದ್ದರೂ ಕೂಡ ಅದಕ್ಕೆ ಸರಿಯಾದ ಪ್ರತಿಸ್ಪಂದನೆ ಇಲ್ಲದಿರುವುದಕ್ಕೆ ಅನೇಕ ಕಾರಣಗಳಿವೆ. ಒಂದು ಕಾರಣವೆಂದರೆ "ಪಾರಾಗುವುದು ಹೇಗೆ?" ಎಂಬ ವಿಷಯದ ಬಗ್ಗೆ ಇರುವ ವೆಬ್ ಸೈಟ್‌ಗಳಿಗೆ ಈಗಲೂ ಬಹುಬೇಡಿಕೆ ಇರುವುದು. ತನ್ನ ಜೀವಿತಾವಧಿಗೆ ಸಾಲುವಷ್ಟು ಆಹಾರಸಾಮಗ್ರಿಗಳನ್ನು ಇಟ್ಟುಕೊಂಡು ಅದನ್ನು ಎಕೆ-೪೭ ರಿಂದ ರಕ್ಷಿಸಿಕೊಳ್ಳುತ್ತಿರುವ ಒಂಟಿಮನುಷ್ಯನ ರೂಪಕ ಸಮೂಹಮಾಧ್ಯಮಗಳಲ್ಲಿ

ಜನಪ್ರಿಯವಾಗಿರಬಹುದು. ಆದರದು ವಾಸ್ತವತೆಯಿಂದ ತುಂಬ ದೂರ. ಒಬ್ಬಂಟಿಯಾಗಿ ಅವನು ಗುಂಪೊಂದನ್ನು ಎದುರಿಸಲಾರ. ಅವನನ್ನು ಮುಗಿಸಲು ಒಂದು ಗುಂಡು ಸಾಕಲ್ಲವೇ? ಒಂದು ಸಮಸ್ಯೆಗೆ ಒಂದು ಪರಿಹಾರವಿದೆಯೆಂಬಂತೆ ತೋರುತ್ತದೆ. ಒಂದಕ್ಕೊಂದು ತಾಳಮೇಳ ಇಲ್ಲದಿದ್ದರೂ.

ಅರಾಜಕತೆ, ಅಸಹನೆ , ಕಾನೂನುಗಳನ್ನು ಮುರಿಯುವುದು ಈಗೀಗ ಮಾಮೂಲಾಗಿಬಿಟ್ಟಿದೆ. ಇತ್ತೀಚೆಗೆ ನಾನೊಬ್ಬ ಶಿಕ್ಷಕಿಯೊಂದಿಗೆ ಸಮ್ಮೇಳನವೊಂದರಲ್ಲಿ ಭಾಗವಹಿಸಿದ್ದೆ. ಅಕೆ ಗಳಿಗೆ ಗಳಿಗೆಗೂ ತೂಕಡಿಸುತ್ತ ನಿದ್ದೆ ಹೋಗುತ್ತಿದ್ದಳು. ಹಿಂದಿನ ರಾತ್ರಿ ಅವಳ ಪಕ್ಕದ ಮನೆಯಲ್ಲಿದ್ದ ಕೆಲವು ಯುವಕರು ಪಾರ್ಟಿ ಇಟ್ಟುಕೊಂಡಿದ್ದರಂತೆ. ಜೋರಾಗಿ ಸದ್ದುಮಾಡುತ್ತಿದ್ದರಂತೆ. ಯಾರಿಗೆ ದೂರು ಕೊಡುವುದು? ಪೋಲೀಸರಿಗೆ ಹೇಳಿದರೆ ಉಪಯೋಗವಾಗಬಹುದೆಂದು ಆಕೆಗೆ ಅನಿಸಿತ್ತಿಲ್ಲ. ಇದಕ್ಕೇನು ಪರಿಹಾರ? ಪ್ರತಿದಿನ ಈ ಭೂಮಿಗೆ ೨೧೪೦೦೦ ಜನರನ್ನು ಹೊಸದಾಗಿ ಸೇರಿಸುತ್ತಿದ್ದೇವೆ. ಅದರೊಟ್ಟಿಗೆ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಹೊರೆ ಸಹಜವಾಗಿಯೇ ಹೆಚ್ಚಾಗುತ್ತಿದೆ. ಮಾಸ್ಲೋವಿನ "ಅಗತ್ಯಗಳ ಶಿಖರ"ದ ಚಿತ್ರಣವನ್ನು ನೆನಪಿಸಿಕೊಂದು ಹೇಳುವುದಾದರೆ ಭೌತಿಕ ಹಾಗೂ ಆಡ್ಯಾತ್ಮಿಕ ಸಂಪನ್ಮೂಲಗಳ ಕೊರತೆ ಇಂದು ಕಾಡುತ್ತಿದೆ.

ಆದರೂ ಯಾಕೆ ಯಾರೊಬ್ಬರೂ ಕೇಳಿಸಿಕೊಳ್ಳುತ್ತಿಲ್ಲ? ಅದಕ್ಕೆ ಐದು ಕಾರಣಗಳಿವೆ. ಮೊದಲನೆಯದಾಗಿ, "ಯಾರೊಬ್ಬರೂ" ಎಂಬ ಪದಪ್ರಯೋಗ ಸರಿಯಲ್ಲವೇನೋ? ಜಗತ್ತು ಸರ್ವನಾಶದ ಕಡೆ ಹೋಗುತ್ತಿದೆಯೆಂದು ಅನೇಕರಿಗೆ ಗೊತ್ತಿದೆ. ನಿಖರವಾಗಿ ತಿಳಿಯದೆ ಇರಬಹುದು. ಆದರೂ ಗೊತ್ತು. ಅವರು ಮಾತನಾಡದೇ ಇರಬಹುದು. ಆದರೂ ಅವರಿಗೆ ಖಂಡಿತ ಗೊತ್ತು.

ಎರಡನೆಯದಾಗಿ, ಇಡೀ ಸಮಸ್ಯೆ ತೀರಾ ಸಂಕೀರ್ಣವಾಗಿದೆ. "ಗರಿಷ್ಠ ತೈಲ" ದಿಂದ ಹಿಡಿದು " ಗರಿಷ್ಠ ಗೊಂದಲ" ದವರೆಗಿನ ಎಲ್ಲಾ ಆಯಾಮಗಳನ್ನು ಹಿಡಿದಿಡುವುದು ಹಾಗೂ ಅವುಗಳಿಗಿರುವ ಅಂತರ್ ಸಂಬಂಧಗಳನ್ನು ದಾಖಲಿಸುವುದು ಅಷ್ಟು ಸುಲಭವಲ್ಲ. ಅಮೆರಿಕನ್ನರು ದಿನಕ್ಕೆ ಎರಡೂವರೆ ಗಂಟೆಗಳ ಕಾಲ ದೂರದರ್ಶನದ ಮುಂದೆ ಕುಳಿತಿರುವುದು ಸಮಸ್ಯೆಯನ್ನು ಇನ್ನೂ ಬಿಗಡಾಯಿಸಿದೆ. ಪ್ರಾಮಾಣಿಕ ಹುಡುಕುವಿಕೆಗೆ ಸಮಯವೆಲ್ಲಿದೆ?

ಮೂರನೆಯದಾಗಿ, ನಮ್ಮನ್ನು ದಾರಿ ತಪ್ಪಿಸುವ ಪ್ರಯತ್ನಗಳಿಗೂ ಕಡಿಮೆಯಿಲ್ಲ. "ಹವಾಮಾನ ಬದಲಾವಣೆ ಉದ್ದಿಮೆ" ಇಂದು ಸಾವಿರಾರು ಕೋಟಿ ರೂ. ಗಳ ವಹಿವಾಟು ಹೊಂದಿದೆ. (ಅಲ್ ಗೋರ್ ರವರು ಇದರಿಂದ ನಾಲ್ಕೈದು ಸಾವಿರ ಕೋಟಿ ರೂ. ಗಳಿಸಿರಬಹುದೆಂಬ ವದಂತಿಯಂತೂ ಇದೆ.). ಹಾಗಾಗಿ ಖಕಅಲ ಯ ಕೂಸಾದ ಇಂಥ ಇಂಥ ಚಿನ್ನದ ಕೋಳಿಯನ್ನು ಕೊಲ್ಲಲು ಯಾರು ತಾನೆ ಬಯಸುತ್ತಾರೆ? ಈ ಮಾತನ್ನೇ ಠಕ್ಕ ಸ್ವಯಂಸೇವಾ ಸಂಸ್ಥೆಗಳ ಬಗ್ಗೆಯೂ ಹೇಳಬಹುದು. ಈ ಸಂಸ್ಥೆಗಳು ಯಾವ ಸಮಸ್ಯೆಗಳ ಪರಿಹಾರಕ್ಕಾಗಿ ಯೋಜನೆಗಳನ್ನು ರೂಪಿಸುತ್ತಿವೆಯೋ ಆ ಸಮಸ್ಯೆಗಳನ್ನು ಹುಟ್ಟುಹಾಕಿದ ಉದ್ದಿಮೆಗಳಿಂದಲೇ ಇದಕ್ಕಾಗಿ ಹಣವನ್ನು ಪಡೆಯುತ್ತಿದ್ದವು. ಇಷ್ಟು ಸಾಲದೆಂಬಂತೆ ಕೋಟ್ಯಾಂತರ ಕಿ.ಮೀ. ದೂರದಲ್ಲಿರುವ ನಕ್ಷತ್ರಗಳನ್ನು ಆರ್ಥಿಕತೆಯ ಆಧಾರದ ಮೇಲೆ ಅರ್ಥ

ಮಾಡಿಕೊಳ್ಳಬಹುದು ಎಂದು ನಮ್ಮನ್ನು ನಂಬಿಸುವ ಅರ್ಥಶಾಸ್ತ್ರಜ್ಞರಿದ್ದಾರೆ. ಜತೆಗೆ "ಅಚ್ಚರಿ ಹುಟ್ಟಿಸುವ ಹೊಸ ಶಕ್ತಿಮೂಲಗಳ ಅವಿಷ್ಕಾರ!!" ಎಂಬ ಶೀರ್ಷಿಕೆಯ ಲೇಖನಗಳನ್ನು ಪ್ರತಿ ಆರು ತಿಂಗಲಿಗೊಮ್ಮೆ ಪ್ರಕಟಿಸುವ ಪತ್ರಿಕೆಗಳಿವೆ. ಹಿಂದಿನ "ಅಚ್ಚರಿ" ಎಲ್ಲಿ ಹೋಯಿತೆಂದು ಕೇಳಿದರೆ ಅದಕ್ಕೆ ಉತ್ತರವಿಲ್ಲ. ಜನಸಂಖ್ಯಾ ನಿಯಂತ್ರಣದ ಬಗ್ಗೆ ಬಾಯಿಬಿಟ್ಟರೆ ಸಾಕು, ಐದಾರು ಪ್ರಮುಖ ಧರ್ಮಗಳು ಒಮ್ಮೆಲೇ ಭುಗಿಲೆದ್ದು ನಿಮ್ಮ ಮೇಲೆ ಹರಿಹಾಯುತ್ತವೆ. ನಮಗೀಗ ಮಾಹಿತಿಯ ಕೊರತೆ ಇಲ್ಲ. ಬದಲಾಗಿ ಅತಿ ಮಾಹಿತಿಯ ಸಮಸ್ಯೆ ಇದೆ. ಆದರೆ ಶುದ್ಧ ತಿಳುವಳಿಕೆ ನಮಗೆ ಎಲ್ಲಿಂದಲೂ ಸಿಗುತ್ತಿಲ್ಲ.

ನಾಲ್ಕನೆಯದಾಗಿ, ಎಲ್ಲ ಉತ್ತರಗಳು ತಿಳಿದಿದೆಯೆಂದು ಹೇಳಿಕೊಳ್ಳುವ ಸರ್ವಜ್ಞರ ಬಳಿ ನಿಜಕ್ಕೂ ಉತ್ತರಗಳಿಲ್ಲ. ನಾನೂ ಇಂಥ ತಪ್ಪುಗಳನ್ನು ಮಾಡಿದ್ದುಂಟು. ಹತ್ತು ಲಕ್ಷ ಜನರಿಗೆಂದು ವಿನ್ಯಾಸಗೊಳಿಸಿದ ಈ ಜಗತ್ತಿನಲ್ಲಿ ೭೦೦ ಕೋಟಿ ಜನರು ಹೇಗೆ ಇರಬಲ್ಲರು ಎಂದು ನನಗೆ ಗೊತ್ತಾಗುತ್ತಿಲ್ಲ. ಈ ಎರಡು ಸಂಖ್ಯೆಗಳ ನಡುವೆ ಹೊಂದಾಣಿಕೆ ಮಾಡಿಕೊಳ್ಳುವಷ್ಟರಲ್ಲಿ ಕೋಟ್ಯಾಂತರ ಜನರು ಸಾಯಬೇಕಾಗುತ್ತದೆಯೆ ನ್ನುವುದರಲ್ಲಿ ನನಗೆ ಯಾವುದೇ ಅನುಮಾನ ಉಳಿದಿಲ್ಲ. ಆದರೆ ನಮ್ಮ ಮುಂದಿರುವ ಸಮಸ್ಯೆಗೆ ಇದನ್ನು "ಪರಿಹಾರ"ವೆಂದು ಯಾರೂ ಒಪ್ಪಿಕೊಳ್ಳಲಾರರು. ಇದೂ ನನಗೆ ಗೊತ್ತಿದೆ.

ಇವೆಲ್ಲಕ್ಕಿಂತ ಮಹತ್ವದ ಕಾರಣವೊಂದಿದೆ. ಈ ಸಂಕಷ್ಟಗಳಿಂದ ಹೊರಬರುವ ಉಪಾಯಗಳನ್ನು ತಿಳಿದವರು ಅದನ್ನು ವ್ಯಕ್ತಪಡಿಸುವಲ್ಲಿ ಸೋತಿದ್ದಾರೆ. ಇಂಥ ವಿಚಾರಗಳನ್ನು ಹೇಳುವುದು ಹೇಗೆ? ಎಲ್ಲೆಲ್ಲೂ ಜಗಳ, ರಕ್ತಪಾತ, ಯುದ್ಧಗಳಾದಾವೆಂದು ಹೇಳಬೇಕು. ಆದರೆ ನಮ್ಮ ಶಿಷ್ಟತನ ಅದಕ್ಕೆ ಅಡ್ಡಿ ಬರುತ್ತದೆ. ಹೀಗೆ ಹೇಳಿದ್ದಕ್ಕಾಗಿ ಇಡೀ ಸಮಾಜವೇ ನಮ್ಮನ್ನು ಬಹಿಷ್ಕರಿಸಿದರೆ ಏನು ಗತಿಯೆಂಬ ಚಿಂತೆ ನಮ್ಮನ್ನು ಕಾಡುತ್ತಿದೆ.

ಅದರೂ ಇದರಿಂದ ಹೊರಬರಲೇಬೇಕಾಗಿದೆ–ಮುಂದಿನ ಜನಾಂಗದ ಒಳಿತಿಗಾಗಿಯಾದರೂ.

* * *

ಆರನೇ ಸರ್ವನಾಶ ಸನ್ನಿಹಿತ

– ರಾಜಕುಮಾರ ಚಾರ್ಲ್ಸ್

ವಿಶ್ವ ವನ್ಯಜೀವಿ ನಿಧಿ , ಯು.ಕೆ. ಯ ಅಧ್ಯಕ್ಷರಾದ ನಂತರ ಮಾಡಿದ ಮೊದಲನೇ ಭಾಷಣದಲ್ಲಿ ಬ್ರಿಟನ್ನಿನ ರಾಜಕುಮಾರ ಚಾರ್ಲ್ಸ್ ರವರು " ಮನುಕುಲದ ಉಳಿವು ನಮ್ಮೆಲ್ಲರ ಮೊದಲ ಆದ್ಯತೆಯಾಗಬೇಕು" ಎಂದು ಕರೆಕೊಟ್ಟಿದ್ದಾರೆ.

ತಾನೂ ಒಬ್ಬ "ವಿನಾಶದ ಅಂಚಿನಲ್ಲಿರುವ ಸಂತತಿ" ಎಂದು ತಮಾಷೆಯಾಗಿ ಹೇಳಿದ ಅವರು ನಾವೀಗಾಗಲೇ ಆರನೇ ಸರ್ವನಾಶದತ್ತ ಸಾಗುತ್ತಿದ್ದೇವೆ ಎಂದಿದ್ದಾರೆ. ೬೫ ದಶಲಕ್ಷ ವರ್ಷಗಳ ಹಿಂದೆ ಡಯನೋಸಾರಸ್‌ಗಳು ನಾಶವಾದದ್ದನ್ನು ಬಿಟ್ಟರೆ ಮತ್ಯಾವ ಕಾಲಘಟ್ಟದಲ್ಲಿಯೂ ಈಗಿನಷ್ಟು ಪ್ರಮಾಣದಲ್ಲಿ ಜೀವಸಂತತಿ ನಾಶವಾಗಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜಾಗತಿಕ ತಾಪಮಾನ ಏರಿಕೆಯ ಕುರಿತು ಅನೇಕ ವರ್ಷಗಳ ಕಾಲ ಕೆಲಸ ಮಾಡಿರುವ ಇವರು ಹವಾಮಾನ ಬದಲಾವಣೆಯು ಮಾತ್ರ ಸಮಸ್ಯೆಯಲ್ಲ ನಮಗೆ ಅಗತ್ಯವಿರುವ ನೀರು, ಭೂಮಿ ಹಾಗೂ ಆಹಾರ ಮುಂತಾದ ಪ್ರಾಕೃತಿಕ ಸಂಪನ್ಮೂಲಗಳನ್ನು ದುರಾಸೆಯಿಂದ ನಾಶಮಾಡುತ್ತಿರುವುದೂ ಸಮಸ್ಯೆಯೆಂದರು.

ನಮ್ಮ ಚಟುವಟಿಕೆಗಳು ಈಗಿರುವಂತೆಯೇ ಮುಂದುವರಿದರೆ ಮಾನವಕುಲವೇ ಸಂಪೂರ್ಣವಾಗಿ ನಾಶವಾಗುವ ಅಪಾಯವಿದೆಯೆಂದು ರಾಜಕುಮಾರ ಹೇಳಿದರು.

" ಕೆಲವರು ಹೇಳುವಂತೆ ನಾವೀಗ ಆರನೇ ಸರ್ವನಾಶವನ್ನು ಕಣ್ಣಾರೆ ಕಾಣುತ್ತಿದ್ದೇವೆ . ನೆಲಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಅವ್ಯಾಹತವಾಗಿ ಸಾಗಿರುವ ಸಂಪನ್ಮೂಲಗಳ ಹಾಗೂ ಜೀವ ವೈವಿಧ್ಯದ ನಾಶದ ಜತೆ ಪರಿಸರ ಮಾಲಿನ್ಯ ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸಿದೆ.

ತನಗೆ "ಪ್ರಕೃತಿಯೊಂದಿಗೆ ಆಧ್ಯಾತ್ಮಿಕ ಕೊಂಡಿ "ಇದೆಯೆಂಬುದನ್ನು ಒಪ್ಪಿದ ಅವರು ಮನುಕುಲವು ಉಳಿದ ಜೀವಪ್ರಬೇಧಗಳನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಬೇಕೆಂದು ಹೇಳಿದರು.

"ಪ್ರತಿವರ್ಷ ಬೇಸಗೆ ಬಂದಾಗ ಬರುತ್ತಿದ್ದ ಪುಟ್ಟ ಪುಟ್ಟ ಹಕ್ಕಿಗಳು ಬಾರದಿದ್ದರೆ ಆರ್ಥಿಕ ನಷ್ಟವಾಗುತ್ತದೆಂದು ನಾನು ಹೇಳುತ್ತಿಲ್ಲ. ಆದರೆ ಅವು ಬದುಕುತ್ತಿರುವ ನೆಲವೇ ಕರಗುತ್ತಿದ್ದು ಅದರಿಂದಾಗಿ ಅವು ಕಣ್ಮರೆಯಾಗುತ್ತಿರುವುದನ್ನು ಒಪ್ಪಿಕೊಂಡುಬಿಟ್ಟರೆ ಜೀವನಕ್ಕೇನು ಅರ್ಥವಿದೆ?" ಎಂದವರು ಪ್ರಶ್ನಿಸಿದರು.

ತನ್ನ ತಂದೆಯಂತೆ ರಾಜಕುಮಾರ ಚಾರ್ಲ್ಸ್ ಕೂಡ ಮೊದಲು ವಿಶ್ವ ವನ್ಯಜೀವಿ ನಿಧಿ ಸಂಸ್ಥೆಯ ಬ್ರಿಟನ್ನಿನ ಶಾಖೆಯ ಪ್ರಮುಖರಾಗಿದ್ದು ನಂತರ ಅದೇ ಸಂಸ್ಥೆಯ ಅಂತರರಾಷ್ಟ್ರೀಯ ವಿಭಾಗದ ಅಧ್ಯಕ್ಷರಾಗಿದ್ದಾರೆ.

"ನಾನೇ ಒಂದು ಅಳಿವಿನಲ್ಲಿರುವ ಸಂತತಿ" ಎಂದು ತನ್ನನ್ನು ತಾನೇ ತಮಾಷೆ ಮಾಡಿಕೊಳ್ಳುವ ಅವರು ವಿಶ್ವ ವನ್ಯಜೀವಿ ನಿಧಿ ಸಂಸ್ಥೆಯ ಕೆಲಸಗಳೊಂದಿಗೆ ತನ್ನನ್ನು ತಾನು ಗುರುತಿಸಿಕೊಂಡಿದ್ದೇನೆ ಎಂದಿದ್ದಾರೆ.

" ಅಳಿವಿನ ಅಂಚಿನಲ್ಲಿರುವ ಸಂತತಿಗಳನ್ನು ರಕ್ಷಿಸುವ ಕಾರ್ಯವನ್ನು ನೀವು ಮಾಡುತ್ತಿರುವುದರಿಂದ ಚಿಕ್ಕ ವಯಸ್ಸಿನಿಂದಲೂ ನಿಮ್ಮ ಕಾರ್ಯಕ್ರಮಗಳು ನನಗೆ ತುಂಬ ಇಷ್ಟ! ".

ಪಂಡ ಮತ್ತಿತರ ವಿನಾಶದಂಚಿನಲ್ಲಿರುವ ಸಂತತಿಗಳನ್ನು ಉಳಿಸಲು ೫೦ ವರ್ಷಗಳ ಹಿಂದೆ ವಿಶ್ವ ವನ್ಯಜೀವಿ ನಿಧಿ ಸಂಸ್ಥೆ ಸ್ಥಾಪನೆಯಾಯಿತು. ಆದರೆ ಈಗ ನಮ್ಮಮುಂದಿರುವ ಸವಾಲುಗಳು ಇನ್ನೂ ಗಂಭೀರವಾದವು ಎಂದು ರಾಜಕುಮಾರ ಚಾರ್ಲ್ಸ್ ನೆನಪಿಸುತ್ತಾರೆ.

ವನ್ಯಜೀವಿಗಳ ಮತ್ತು ಅಂತಿಮವಾಗಿ ಮನುಕುಲದ ರಕ್ಷಣೆಗಿರುವ ಒಂದೇ ಮಾರ್ಗವೆಂದರ ಪ್ರಕೃತಿಗೆ ಇನ್ನಷ್ಟು ಹಾನಿ ಮಾಡದ ಹಾಗೆ ಪ್ರಗತಿಯಾಗುವಂತೆ ಅರ್ಥವ್ಯವಸ್ಥೆಯನ್ನು ಬದಲಾಯಿಸುವುದು.

ಕಡಿಮೆ ಪೆಟ್ರೋಲ್, ಆಹಾರ ಹಾಗೂ ಇತರ ಸಂಪನ್ಮೂಲಗಳ ಬಳಕೆ ಮಾಡಲು ಅನುವು ಮಾಡಿಕೊಡುವಂತೆ ತಮ್ಮ ಜೀವನಶೈಲಿಯನ್ನು

ಬದಲಾಯಿಸಿಕೊಳ್ಳಲು ಜನರನ್ನು ಪ್ರೇರೇಪಿಸುವ "ಸುಸ್ಥಿರ ಕ್ರಾಂತಿ" ಯ ಅಗತ್ಯವಿದೆಯೆಂದು ಅವರು ಪ್ರತಿಪಾದಿಸಿದರು.

ನಾವು ಸಾಧಿಸಿದ ಆರ್ಥಿಕ ಪ್ರಗತಿಯಿಂದಾಗಲೀ, ಬಳಸಿದ ಸಂಪನ್ಮೂಲಗಳಿಂದಾಗಲೀ ಇತಿಹಾಸ ನಮ್ಮನ್ನು ಅಳೆಯುವುದಿಲ್ಲ. ಬದಲಾಗಿ ನಮ್ಮ ಮೊಮ್ಮಕ್ಕಳು ಮತ್ತು ಅವರ ಮೊಮ್ಮಕ್ಕಳ ಉಳಿವಿಗೆ ನಾವೇನು ಮಾಡಿದೆವೆಂಬುದರಿಂದ ಅಳೆಯುತ್ತದೆ. ನಾವು ಅವರ ಪಾಲಿನ ಸಂಪನ್ಮೂಲಗಳನ್ನು ಕಬಳಿಸುತ್ತಾ ಕ್ಷಣಿಕ ಸುಖಕ್ಕಾಗಿ ದೀರ್ಘಕಾಲಿಕ ಹಿತವನ್ನು ಬಲಿಕೊಡುತ್ತಿದ್ದೇವೆ. ಇದು ಜವಾಬ್ದಾರಿಯುಳ್ಳವರು ವರ್ತಿಸುವ ರೀತಿಯೇ? ಇಂದಿನ ತುರ್ತು ಎಂದರೆ ನಮಗೀಗ ಉಳಿದಿರುವ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ, ಪೋಷಿಸುವ ಪ್ರಯತ್ನಗಳನ್ನು ವಿಶೇಷವಾಗಿ ಮಾಡುವುದು. ಅಲ್ಲದೆ ಪ್ರಕೃತಿಯನ್ನೇ ಕೇಂದ್ರವನ್ನಾಗಿರಿಸಿಕೊಳ್ಳುವ ಆರ್ಥಿಕತೆಯತ್ತ ಸಾಗುವುದು.

ತನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದ್ದಕ್ಕೆ ವಿಶ್ವ ವನ್ಯಜೀವಿ ನಿಧಿ ಸಂಸ್ಥೆ ಪಶ್ಚಾತ್ತಾಪ ಪಡಬಹುದೇನೋ ಎಂಬ ಶಂಕೆಯನ್ನು ಅವರು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು. ಪರಿಸರಕ್ಕೆ ಸಂಬಂಧಿಸಿದ ಅವರ ಅನೇಕ ಅಭಿಪ್ರಾಯಗಳಿಗೆ ಈ ಹಿಂದೆ ಭಾರೀ ಟೀಕೆ ವ್ಯಕ್ತವಾಗಿದೆ. ಬಹುತೇಕ ಸರಕಾರಗಳು ಈ ಸಮಸ್ಯೆಯನ್ನು ನಿವಾರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿವೆಯಾದರೂ ನಾವೆಲ್ಲ ಒಂದುಗೂಡಿ ಕೆಲಸ ಮಾಡಿದರೆ ಮನುಕುಲವು ನೂತನ ಅವಿಷ್ಕರಗಳೊಂದಿಗೆ ಸುಸ್ಥಿರ ಪರಿಸರದೆಡೆಗೆ ಸಾಗಬಹುದಾಗಿದೆ.

ಅನೇಕ ವರ್ಷಗಳಿಂದ ನಾನು ಈ ಸವಾಲುಗಳ ಜತೆ ಹೋರಾಡುತ್ತಿದ್ದು ಅದರಿಂದಾಗಿಯೇ ನಾನು ಸಾಕಷ್ಟು ಟೀಕೆಗಳನ್ನು ಎದುರಿಸುತ್ತಿರುವುದು ನಿಮಗೇ ಗೊತ್ತಿದೆ. ಆದರೂ ನಾನೇಕೆ ಹಿಂಜರಿಯುತ್ತಿಲ್ಲವೆಂದರೆ ಇವು ನಮ್ಮ ಮುಂದಿರುವ ಅತಿ ಮುಖ್ಯ ಸಮಸ್ಯೆಗಳಾಗಿವೆ. ಇವನ್ನು ಎದುರಿಸುವಲ್ಲಿ ನಾವು ಯಾರೂ ಧೈರ್ಯಗೆಡಬಾರದು.

(ಈ ನಾಲ್ಕೂ ಲೇಖನಗಳ ಸಂಗ್ರಹಾನುವಾದ : ಡಾ|| ಎಸ್.ಎನ್.ಗಣನಾಥ್)

* * *

ಅಭಿನಂದನೆ...

ಶ್ರೀ ಚಂದ್ರಶೇಖರ ಕಂಬಾರರವರು ಕನ್ನಡಕ್ಕೆ ಎಂಟನೇ ಬಾರಿಗೆ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ದೊರೆಯಲು ಕಾರಣವಾದುದಕ್ಕೆ ಅವರನ್ನು 'ಜನಪದ ವಿಚಾರ' ಹಾರ್ದಿಕವಾಗಿ ಅಭಿನಂದಿಸುತ್ತದೆ ಮತ್ತು ಕನ್ನಡಿಗರೆಲ್ಲರ ಸಂತೋಷದಲ್ಲಿ ತಾನೂ ಭಾಗಿಯಾಗುತ್ತದೆ.

ವೇದದಲ್ಲಿಯ ಮುತ್ತುಗಳು

– ವಿನೋಬಾ

ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೆ

ಎಲ್ಲಿ ವಿನೋದವಿದೆಯೋ, ಮೋದವಿದೆಯೋ, ಪ್ರಮೋದವಿದೆಯೋ, ಅಲ್ಲಿ ಆನಂದವಿದೆ. ಎಲ್ಲಿ ರಾಗದ್ವೇಷವಿಲ್ಲವೋ, ಯಾವುದೇ ವಿಷಯದ ಭಾರವಿಲ್ಲವೋ, ಎಲ್ಲಿ ಕೇವಲ ಆನಂದವೇ ಆನಂದ ಇದೆಯೋ, ಎಲ್ಲಿಗೆ ಹೋಗುವುದರಿಂದ ಯಾರಿಗೇ ಆಗಲಿ ಪರಮ ಶಾಂತಿಯ ಅನುಭವವಾಗುತ್ತದೋ ಅಂಥ ಪುಟ್ಟದಾದ ಸ್ಥಳವನ್ನು ರಚಿಸಿಕೊಳ್ಳಬೇಕು.

* * *

ಪಥಾಂ ವಿಸರ್ಗೇ ಧರೂಣೇಷು ತಸ್ಥೌ

ಎಲ್ಲಿ ಎಲ್ಲ ಪಂಥಗಳ ವಿಸರ್ಜನೆಯಾಗುತ್ತದೋ ಅಂಥ ಶಾಶ್ವತ ಧರ್ಮತತ್ವಗಳ ಮೇಲೆ ಜೀವನದ ಆಧಾರವಿದೆ.

* * *

ಯೊ ವಃ ಶಿವತಮೊ ರಸಃ ತಸ್ಯ ಭಾಜಯತೇಹ ನಃ ಉಷತೀರಿವ ಮಾತರಃ

ನೀನು ತಾಯಿ. ಕೋಮಲ ತಾಯಿ. ಸರ್ವೋಚ್ಚ ಸ್ತನಪಾನ ಮಾಡಿಸುತ್ತಾಳೆ, ಅದೇ ರೀತಿ ಹೇ ದೇವ, ನೀನು ನನಗೂ ಶಿವತಮ ರಸ ಕೊಡು.

ನಮ್ಮ ದೇಶದಲ್ಲಿ ನದಿಯ ವಿಷಯವಾಗಿ ಮೊದಲಿನಿಂದಲು ಅತ್ಯಧಿಕ ಆದರವಿದೆ. ಪ್ರಾಚೀನ ಗ್ರಂಥಗಳಲ್ಲಿ ನದಿಯ ನೀರನ್ನು ಹೊಲಸು ಮಾಡಬಾರದು ಎಂಬ ಆಶಯದ ವಾಕ್ಯಗಳು ದೊರೆಯುತ್ತವೆ. ನದಿಯನ್ನು ಮಾತೆಯೆಂದು ತಿಳಿಯಲಾಗುತ್ತಿತ್ತು. *ಲೋಕಮಾತರಃ* – ಅತ್ಯಂತ ಪ್ರೇಮಾಸ್ಪದ ಮಾತೆಯರು ನದಿಗಳು! ನಿಮ್ಮ ಬಳಿ ಶಿವತಮ ರಸವಿದೆ. ಶಿವತಮವೆಂದರೆ ಅತ್ಯಂತ ಶಿವ. ಶಿವತಮ ರಸ ಈಶ್ವರನದೇ ರಸ. ಇಷ್ಟೊಂದು ದೊಡ್ಡ ಸಂಜ್ಞೆಯನ್ನು ನದಿಗಳ ನೀರಿಗೆ ಕೊಡಲಾಗಿದೆ.

* * *

ನ ವಾ ಉ ತೆ ತನ್ವಾ ತನ್ವಂ ಸಂ ಪಪೃಚ್ಯಾ್ಯಂ ಪಾಪಮಾಹುರ್ಯಃ ಸ್ವಸಾರಂ ನಿಗಚ್ಛಾತ್

ಪ್ರಾಚೀನ ಕಾಲದಲ್ಲಿ ಸಹೋದರ-ಸಹೋದರಿಯರಲ್ಲಿ ಮದುವೆಯಾಗುತ್ತಿತ್ತು. ಓರ್ವ ಅನಾದಿ ತಂದೆಯಿದ್ದಾನೆ, ಅವನಿಗೆ ಮಕ್ಕಳಾದರು. ಅವನ ತಂದೆ ಯಾರೆಂದು ಕೇಳಬೇಡ. ಈಗ ಆ ಸಹೋದರ-ಸಹೋದರಿಯರಲ್ಲಿ ವಿವಾಹವಾಗದಿದ್ದರೆ ಪ್ರಜೆ ಹೇಗೆ ಉತ್ಪನ್ನರಾಗುವರು? ಆದರೆ ಈಗ ಹೆಂಡತಿಯಲ್ಲದೆ ಉಳಿದವರೆಲ್ಲರೂ ಸಹೋದರಿಯರು ಎಂಬುದಾಗಿ ಈಗ ಯಮ ಹೇಳುತ್ತಿದ್ದಾನೆ. ಅವನು 'ಆಹುಃ' ಎಂದು ಹೇಳಿ ಪೂರ್ವ ಋಷಿಗಳ ಆಧಾರ ಕೊಡುತ್ತಿದ್ದಾನೆ. ಆದರೆ ನಮಗೆ ಅವನದೇ ಆಧಾರ. ಅವನಿಗೆ ಹಳೆಯ ಆಧಾರ! ಇಂದಿನ ವಿವಾಹ ಪದ್ಧತಿಗೆ ಪ್ರವರ್ತಕ ಯಮನೆಂದು ತಿಳಿಯುವುದರಲ್ಲೇನೂ ಅಭ್ಯಂತರವಿಲ್ಲ.

* * *

ಯಥಾ ನ ಪೂರ್ವಮಪರೊ ಜಹಾತಿ

ಭಗವಾನ್! ಮೊದಲನೆಯವರನ್ನು ಹಿಂದುಳಿಸು, ಹಿಂದಿರುವವರು ಮುಂದೆ ಹೋಗದಿರಲಿ ಎಂಬಂತೆ ಈ ಜನರಿಗೆ ಆಯುಕೊಡು. ಯಾರು ಮೊದಲು ಹೋಗಬಾರದೋ, ಅವರು ಮೊದಲು ಹೋದರೆ ಸ್ವಾಭಾವಿಕವಾಗಿಯೇ ಸರಿಯೆನಿಸುವುದಿಲ್ಲ.

* * *

ಮಾತಾ ಪುತ್ರಂ ಯಥಾ ಸಿಚಾ

ಯಾವ ರೀತಿ ತಾಯಿ ಮಗುವನ್ನು ಬಟ್ಟೆಯಿಂದ ಸುತ್ತುತ್ತಾಳೊ ಆದೇ ರೀತಿ ಅವರ ಸಂರಕ್ಷಣೆ ಮಾಡು. ಹೇ ಪ್ರಥ್ವೀ, ನೀನು ಅನುಕೂಲವಾಗು. ಯಾವ ರೀತಿ ತಾಯಿ ಮಗನಿಗೆ ಅನುಕೂಲವಾಗುತ್ತಾಳೊ ಅದೇ ರೀತಿ ನೀನು ಅನುಕೂಲವಾಗು.

* * *

ದಶಾನಾಮೇಕಂ ಕಪಿಲಂ ಸಮಾನಂ

ಸೃಷ್ಟಿಯ ಆದಿಕಾಲದ ಮಾತು. ಆಗ ಕಪಿಲ ಮಹಾ ಮುನಿ ಇದ್ದರು. ಅವರು ಕೊಟ್ಟ ದರ್ಶನ, ಬೋಧನೆ ಇತ್ಯಾದಿ ಎಲ್ಲವೂ ತಮ್ಮ ತಾಯಿಗೆ ಕೊಟ್ಟವಂತಾಗಿವೆ ಎಂಬುದೇ ಒಂದು ವಿಶೇಷ. ಮಗ ಗುರುವಾಗಿ ಮತ್ತು ತಾಯಿ ಶಿಷ್ಯಳಾಗಿರುವಂಥ ಗ್ರಂಥಗಳು ಬಹಳ ಕಡಿಮೆಯಿವೆ.

ಕಪಿಲ ಮಹಾಮುನಿ ಜನ್ಮತಃ ಸಿದ್ಧರು ಎಂದು ಹೇಳಲಾಗುತ್ತದೆ. ಅವರು ಜನ್ಮತಳೆದಾಗಲೆ ಸಿದ್ಧರಾಗಿ ಜನ್ಮ ತಳೆದರು. ಅವರು ಜನ್ಮತಃ ಜ್ಞಾನಿಯಾಗಿದ್ದರು. ಇಂಥ ಮೂರು ಉದಾಹರಣೆಗಳಿವೆ. ಕಪಿಲ, ವಾಮದೇವ ಮತ್ತು ಶುಕದೇವ.

ಕಪಿಲ ಮುನಿಯನ್ನು ಸಂಖ್ಯಾಶಾಸ್ತ್ರದ ಪ್ರವರ್ತಕನೆಂದು ಹೇಳಲಾಗುತ್ತದೆ. ವಕ್ತಾ ಎಂದರೆ ತತ್ವದ ವ್ಯಾಖ್ಯಾನ ಮಾಡುವವ. ಸಾಮಾನ್ಯ ವ್ಯಾಖ್ಯಾಯತ 'ಸ್ಪೀಕರ್' ಅಲ್ಲ.

ಗೀತೆಯಲ್ಲಿ ***ಸಿದ್ಧಾನಾಂ ಕಪಿಲೋ ಮುನಿಃ*** (ಸಿದ್ಧರಲ್ಲಿ ನಾನು ಕಪಿಲಮುನಿ) ಕಪಿಲ ಉದಾತ್ತ, ವಿಭೂತಿ. ಅವನಲ್ಲಿ ವೈರಾಗ್ಯ, ಜ್ಞಾನ, ಪ್ರಜ್ಞಾ ಇವೆ.

* * *

ಆದಿವಾಸಿ ಜನರು ಕಾಡನ್ನು ಕಡಿದು ಸ್ವಚ್ಛಮಾಡಿ ಮಾಡಿ ಪುನಃ ಆ ಸ್ಥಳದಲ್ಲಿ ವಾಸ ಮಾಡಿದರು. ಈ ಕುರಿತಾಗಿ ತುಂಬ ಸುಂದರ ವರ್ಣನೆ ಋಗ್ವೇದದಲ್ಲಿ ಬಂದಿದೆ.

ದೇವಾಸ ಆಯನ್ ಪರಶೂರಬಿಭ್ರನ್ ವನಾ ವೃಶ್ಚಂತೊ ಅಭಿ ವಿಡ್‌ಭಿರಾಯನ್

ದೇವ ಬಂದ, ಭಗವಂತ ಬಂದ ಮತ್ತು ಅವರು ಕೊಡಲಿ ತೆಗೆದುಕೊಂಡು ಕಾಡು ಕಡಿದರು. ಕಾಡು ಕಡಿದ ನಂತರ ಉಂಟಾದ ಬಿಡದಿಗೆ 'ಗ್ರಾಮ'ವೆಂದರು.

* * *

ಅನ್ನೆ ಸಮಸ್ಯ ಯದಸನ್ ಮನೀಷಾಃ

ನಾವು ಅನ್ನದ ಒಂದು ತುತ್ತು ಊಟಮಾಡಿದರೂ ಕೂಡ ಅದರೊಂದಿಗೆ ಎಲ್ಲರ ಆಸೆಗಳು ಅಂಟಿಕೊಂಡಿರುತ್ತದೆ. ಇದನ್ನು ನಾವು ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ಎಲ್ಲರಿಗೂ ಊಟಮಾಡಿಸಿ ತಿಂದಲ್ಲಿ ಅದು ಪಚಿಸುವುದು, ಅನ್ಯಥಾ ಇಲ್ಲ. ಸಾಮಾನ್ಯವಾಗಿ ಶ್ರೀಮಾನ್‌ರಿಗೆ ಊಟ ಪಚಿಸುವುದಿಲ್ಲ. ಅವರು ಅನಾರೋಗ್ಯದಿಂದ ಇರುತ್ತಾರೆ, ಅವರು ಏನನ್ನು ತಿನ್ನುತ್ತಾರೊ ಅದರ ಮೇಲೆ ಎಲ್ಲರ ಭಾವನೆ ಅಂಟಿಕೊಂಡಿರುತ್ತದೆ. ಒಂದು ವೇಳೆ ಅವರು ಎಲ್ಲರಿಗೂ ತಿನಿಸಿ ತಿಂದರೆ ಅನಾರೋಗ್ಯ ಉಳ್ಳವರಾಗುವುದಿಲ್ಲ.

* * *

ಗೋಭಿಷ್ಟರೇಮಾಮತಿಂ ದುರೇವಾಂ ಯವೇನ ಕ್ಷುಧಂ ಪುರೂಹೂತ ವಿಶ್ವಾಂ

'ಮನುಷ್ಯನ ಕೂಗನ್ನು ಕೇಳುವ ಹೇ ಭಗವಂತ! ಜಗತ್ತಿನ ಹಸಿವೆಯನ್ನಂತೂ ನಾವು ಕಾಳಿನ ಸಹಾಯದಿಂದ ಪೂರ್ಣ ಮಾಡಿಕೊಳ್ಳಬಲ್ಲೆವು. ಆದರೆ ದುರೇ ವಾ ಅಮತಿಂ ಅರ್ಥಾತ್ ದುರ್ಮಾರ್ಗದಲ್ಲಿ ಕರೆದುಕೊಂಡು ಹೋಗುವ ಅಬುದ್ಧಿ ಅಂದರೆ ಮಾಂಸಾಹಾರದತ್ತ ಪ್ರವೃತ್ತ ಮಾಡುವಂಥ ಅಬುದ್ಧಿಯನ್ನು ನಾವು ಹಸುವಿನ ಹಾಲಿನ ಮೂಲಕವೇ ದೂರ ಮಾಡಬಲ್ಲೆವು.

* * *

ಋಗ್ವೇದವು ಹತ್ತು ಸಾವಿರ ವರ್ಷಗಳ ಹಿಂದೆ ಸಂದೇಶ ಕೊಟ್ಟಿದೆ:-

ಆರ್ಯಾ ವ್ರತಾ ವಿಸೃಜಂತೊ ಅಧಿಕ್ಷಮಿ

ಇಡೀ ಪೃಥ್ವಿಯ ಮೇಲೆ ಆರ್ಯವ್ರತದ ಸಂದೇಶವನ್ನು ತಲುಪಿಸಬೇಕು, ಹರಡಬೇಕು. ಕ್ಷಮಿ ಅಂದರೆ ಪೃಥ್ವೀ ಮೇಲೆ. ಕ್ಷಮಿ ಕ್ಷಮಾ ಶಬ್ದದ ಸಪ್ತಮಿ ವಿಭಕ್ತಿ. ಆರ್ಯವ್ರತ ಎಂದರೆ ಯಾವ ವ್ರತ? ಅಹಿಂಸಾ, ಸತ್ಯ, ಅಸ್ತೇಯ ಇತ್ಯಾದಿ ವ್ರತಗಳು. ಅವುಗಳ ಪ್ರಸಾರವನ್ನು ಇಡೀ ಪೃಥ್ವಿಯ ಮೇಲೆ ಮಾಡಬೇಕು.

* * *

ವ್ಯವಸಾಯದೊಂದಿಗೆ, ಪ್ರಕೃತಿಯೊಂದಿಗೆ ಮನುಷ್ಯನ ಸಂಬಂಧ ಇರಬೇಕಾದುದು ಅತ್ಯಂತ ಅವಶ್ಯಕ. ಈ ಸಂಬಂಧವಾಗಿ ವೇದದಲ್ಲಿ ಒಂದು ವಚನವಿದೆ.

ವಾಮಂವಾಮಂ ವೊ ದಿವ್ಯಾಯ ಧಾಮ್ನೆ ವಸುವಸು ವಃ ಪಾರ್ಥಿವಾಯ ಸುನ್ವತೆ

ವಾಮಂ ಅಂದರೆ ಸೌಂದರ್ಯ, ದಿವ್ಯಧಾಮ ಅಂದರೆ ಸೃಷ್ಟಿ, ವಸು ಅಂದರೆ ಸೌಜನ್ಯ. (ಸೌಜನ್ಯ ಅಂದರೆ ಹೊಂದಿಕೊಂಡು ಹೋಗುವ ವೃತ್ತಿ). ಇದು 'ವಸ್' ಧಾತುವಿನ ಅರ್ಥ, ಸೌಜನ್ಯ ಭಾವಾರ್ಥ. ಸೌಜನ್ಯ ಮತ್ತು ಸೃಷ್ಟಿಯ ಸೌಂದರ್ಯ ಎರಡೂ ಸೇರಿ ಜೀವನ ಪರಿಪೂರ್ಣವಾಗುತ್ತದೆ.

* * *

ವಿಪ್ರಾಸೊ ನ ಮನ್ಮಭಿಃ ಸ್ವಾಧ್ಯಃ

.... ಕ್ಷೀತಿನಾಂ ನ ಮರ್ಯಾ ಅರೆಪಸಃ

ಬ್ರಾಹ್ಮಣರು ತಮ್ಮ ಮನಃಶಕ್ತಿಯ ಕಾರಣದಿಂದ ಧ್ಯಾನಯುಕ್ತರಾಗುತ್ತಾರೆ ಮತ್ತು ದೇವರಿಗೆ ಪ್ರೀತರಾಗುತ್ತಾರೆ. ಮತ್ತು ಹೊಲದಲ್ಲಿ ಕೆಲಸಮಾಡುವಂಥ ಕೆಲಸಗಾರರು ಯಾವಾಗಲೂ ನಿರ್ದೋಷರಾಗಿರುತ್ತಾರೆ.

ಹೀಗೆ ವ್ಯವಸಾಯದ ಮಹಿಮೆಯನ್ನು ಹಾಡಲಾಗಿದೆ. ವ್ಯವಸಾಯ ಮಾಡಬೇಕು, ಉತ್ಪಾದನೆ ಹೆಚ್ಚಿಸಬೇಕು. ಉಪಾಸನಾಪೂರ್ವಕವಾಗಿ ಕುಶಲತಾ ಪೂರ್ವಕವಾಗಿ ವಿಜ್ಞಾನದ ನೆರವು ಪಡೆದು ವ್ಯವಸಾಯ ಮಾಡಬೇಕು. ಶ್ರಮನಿಷ್ಠೆಯಿಂದ ಮನುಷ್ಯನಿಗೆ ಪರ್ಯಾಪ್ತ ಆನಂದ ಪ್ರಾಪ್ತವಾಗುತ್ತದೆ. ಸೃಷ್ಟಿ ಸೇವೆಯಿಂದ ಚಿತ್ತಶುದ್ಧಿ ಕೂಡ ಆಗುತ್ತದೆ.

* * *

ಜೋಳ ಜೋಳೇಶ್ವರಿ

– ವೆಂಕಟೇಶ ಮಾಚಕನೂರು

ಸಿರಿತನದಲ್ಲಿ ಹುಟ್ಟಿ ಬೆಳೆದವರನ್ನು ಬಾಯಲ್ಲಿ ಬೆಳ್ಳಿ ಚಮಚ ಇಟ್ಟುಕೊಂಡು ಬಂದವರು ಎಂದು ಕರೆಯುವ ರೂಢಿ ಉಂಟು. ಯಾವ ದೇಶ, ಪ್ರದೇಶದಲ್ಲಿ ಹುಟ್ಟಿದರೂ ಉಳ್ಳವರ ಮನೆತನದಲ್ಲಿ ಹುಟ್ಟಿದವರಿಗೆ ಈ ಅನ್ವರ್ಥನಾಮ ಉಂಟು. ಆದರೆ ಉತ್ತರ ಕರ್ನಾಟಕದಲ್ಲಿ ಇದ್ದವರು ಎಲ್ಲ ಹುಟ್ಟುವುದು ಮತ್ತು ಬೆಳೆಯುವುದು ಬಾಯಲ್ಲಿ ರೊಟ್ಟಿ ಇಟ್ಟುಕೊಂಡೆ. ಹುಟ್ಟುವಾಗ, ಇರುವಾಗ, ಹೋಗುವಾಗ ರೊಟ್ಟಿ, ಜೋಳದ ರೊಟ್ಟಿಯೊಂದಿಗೆ ಶಾಶ್ವತ ನಂಟು ಇವರದು. ಅತ್ತ ಕಲ್ಯಾಣ ಕರ್ನಾಟಕ, ಇತ್ತ ಕಿತ್ತೂರ ಕರ್ನಾಟಕ ಪ್ರದೇಶದಿಂದ ಹಿಡಿದು ದಕ್ಷಿಣದ ತುಂಗಭದ್ರಾ ನದಿಯ ಆಸುಪಾಸಿನವರೆಗೆ ಎಲ್ಲರಿಗೂ ಜೋಳ, ಜೋಳದ ರೊಟ್ಟಿ ಬದುಕಿನ ಪ್ರತಿ ದಿನವೂ ಬಿಡದ ಸಂಗಾತಿ. ಮಾತೃ ದೇವೋ ಭವ, ಪಿತೃ ದೇವೋ ಭವ, ಗುರು ದೇವೋ ಭವ, ಗುರುಸಾಕ್ಷಾತ್ ಪರಬ್ರಹ್ಮ ಇತ್ಯಾದಿ ದೊಡ್ಡ ದೊಡ್ಡ ಶಬ್ದಗಳು ಗುರು, ಮಾತಾ, ಪಿತೃಗಳನ್ನು ಸ್ತುತಿಸಲು ಬಳಸಲ್ಪಡುತ್ತವೆ. ಅದು ಒಂದು ಮಟ್ಟಿಗೆ ನಿಜವಿರಬಹುದಾದರೂ, ದೈನಂದಿನ ಇರುವಿಕೆ, ಜೀವಂತಿಕೆಗೆ ಕಾರಣವಾಗಿರುವ ಆಹಾರದ ಸ್ತುತಿ, ಪ್ರಶಂಸೆ ನಮ್ಮಲ್ಲಿ ನಡೆದಿರುವುದು ಕಡಿಮೆ. ಅನ್ನ ಬ್ರಹ್ಮ, ಅನ್ನ ದೇವರು ಎಂದು ಕರೆದು ಅನ್ನಪೂರ್ಣೇಶ್ವರಿ, ಅನ್ನಮ್ಮದೇವಿ ಎಂದು ಕೃತಜ್ಞತೆ ವ್ಯಕ್ತಪಡಿಸುವ ಪ್ರಯತ್ನ ಅಲ್ಪಮಟ್ಟಿಗೆ ನಡೆದಿದ್ದರೂ, ಆಹಾರಕ್ಕೆ ಸಲ್ಲಬೇಕಾದ ಸ್ಥಾನ, ಗೌರವ ಸಿಕ್ಕಿಲ್ಲವೆಂದೇ ನನ್ನ ಭಾವನೆ. ಅನ್ನ, ಅಂದರೆ ಅಕ್ಕಿ ಬೆಳೆಯುವ ಪ್ರದೇಶದವರು ಅನ್ನಪೂರ್ಣೇಶ್ವರಿಯನ್ನು ಆರಾಧಿಸುವುದನ್ನು, ಅದಕ್ಕಾಗಿ ದೊಡ್ಡ ದೇವಸ್ಥಾನ ಕಟ್ಟಿ ಗೌರವ ಸಲ್ಲಿಸುತ್ತಿರುವುದನ್ನು ನಾವು ನೋಡುತ್ತೇವೆ. ಅನ್ನಪೂರ್ಣೇಶ್ವರಿ, ಅನ್ನಮ್ಮ ದೇವಿಯರ ಬಗ್ಗೆ ಏನೇ ಪುರಾಣ, ಪುಣ್ಯಕಥೆ ಹೇಳಿದರೂ ಅದು ಮೂಲವಾಗಿ ಅನ್ನವನ್ನು ದೇವತೆಯಾಗಿ ಪರಿಗಣಿಸಿ ಪೂಜಿಸುವುದೇ ಆಗಿದೆ. ಆದರೆ ಜೋಳ ಬೆಳೆಯುವ ವಿಶಾಲ ಪ್ರದೇಶದ ಉತ್ತರ ಕರ್ನಾಟಕದ ಕನ್ನಡಿಗರು ಇದೇ ತರಹ ಜೋಳಜೋಳೇಶ್ವರಿ ಎಂದೋ, ಜೋಳಪೂಣೇಶ್ವರಿ ಎಂದೋ ಅಥವಾ ರೊಟ್ಟಿರೊಟ್ಟೇಶ್ವರಿ ಎಂದು ಒಂದು ಮಂದಿರವನ್ನು ಕಟ್ಟಿ ಆರಾಧಿಸಿದ್ದು ಇಲ್ಲ. ಯಾವುದರಿಂದಾಗಿ ನಮ್ಮ ಜೀವನ, ಬದುಕು, ಇಹಪರವು ಇದೆಯೋ ಅದನ್ನೇ ನಾವು ಮರೆತಿದ್ದೇವೆ. ಕೋಳಿ, ಕುರಿ, ಕೋಣ ಬಲಿ ಪಡೆವ ಅಥವಾ ಬಲಿ ಬೇಡುವ ದೇವ ದೇವತೆಯರ ಮಠ ಮಂದಿರ ನಿರ್ಮಿಸಿ ನಾವು ಪೂಜಿಸುತ್ತಿದ್ದೇವೆ. ಮಾರಿ, ದುರ್ಗೆ, ಚಂಡಿ ಚಾಮುಂಡಿಯರ ಆರಾಧನೆ ನಡೆಯುತ್ತಿದೆ. ಆದರೆ ಯಾವುದೇ ಫಲಾಪೇಕ್ಷೆ ಅಪೇಕ್ಷಿಸದ, ನಮ್ಮನ್ನು ದಿನನಿತ್ಯ ಸಲಹುವ ದೇವರ ಪೂಜೆ ನಡೆಯುತ್ತಿಲ್ಲ. ನಿಜವಾಗಿ ಜೋಳ ಬ್ರಹ್ಮ, ಜೋಳ ವಿಷ್ಣು, ಜೋಳ ಸಾಕ್ಷಾತ್‌ಪರಬ್ರಹ್ಮ ಎಂದು ಆರಾಧಿಸಬೇಕಿತ್ತು. ಆದರೆ ಈವರೆಗೂ ಅದು ಆಗಿಲ್ಲ, ನಡೆದಿಲ್ಲ.

ಇದೇ ಮಾತನ್ನು ರಾಗಿಗೂ ಅನ್ವಯಿಸಿ ಹೇಳಬಹುದು. ತುಂಗಭದ್ರೆಯ ದಕ್ಷಿಣಕ್ಕೆ, ಕಾವೇರಿಯಿಂದ ಕೋಲಾರದವರೆಗೆ ಹಬ್ಬಿದ ನಾಡಲಲ್ಲಿ ಜನರ ದೈನಂದಿನ ಆಹಾರವಾಗಿ ಬಳಕೆಯಲ್ಲಿರುವ ರಾಗಿ, ರಾಗಿಮುದ್ದೆ, ರೊಟ್ಟಿ ಬಡವ ಬಲ್ಲಿದರನ್ನು ಸಲಹುತ್ತ ಬಂದಿದೆ. ಆದರೆ ಆ ಪ್ರದೇಶದ ಜನ ಕೂಡ ರಾಗಿರಾಗೇಶ್ವರ ಎಂದೋ ಮುದ್ದೇಶ್ವರ ಎಂದೋ ರಾಗಿಯನ್ನು ಆರಾಧಿಸಿದ್ದಿಲ್ಲ. ಕರಾವಳಿ ಪ್ರದೇಶದವರು ಕೂಡ ತಮ್ಮ ದೈನಂದಿನ ಆಹಾರವಾದ ಮೀನ್ನು ಆರಾಧಿಸಿದ್ದಿಲ್ಲ. ಮೀನುಮೀನೇಶ್ವರಿ ಎಂದು ಗುಡಿ ಕಟ್ಟಿದ್ದಿಲ್ಲ. ಅವರು ಸಮುದ್ರವನ್ನು ಅದರ ರೌದ್ರತೆಗಾಗಿ ಪೂಜಿಸುತ್ತ ಬಂದಿದ್ದರೂ, ಅದರೊಳಗಿನ ಮೀನಿಗೆ ಸಲ್ಲಬೇಕಾದ ಗೌರವ ಸಲ್ಲಿಸಿದ್ದಿಲ್ಲ.

ನನ್ನ ಈ ಬರಹಕ್ಕೆ ಮೂಲ ಕಾರಣ ಜೋಳ ಮತ್ತು ಜೋಳದ ರೊಟ್ಟಿ ಇಂದು ಎದುರಿಸುತ್ತಿರುವ ಆತಂಕ. ಜೋಳ ಇಂದು ಕನ್ನಡ ಭಾಷೆಯಂತೆ ಅಳಿವಿನ ಅಂಚಿನಲ್ಲಿರದಿದ್ದರೂ ಅಪಾಯದ ಅಂಚಿನಲ್ಲಿದೆ. ಗೋಳೀಕರಣ, ಔದ್ಯೋಗಿಕರಣದ ಪರಿಣಾಮ ಜೋಳದ ಮೇಲೂ ಆಗುತ್ತಿದೆ. ಕೃಷಿ ಕ್ಷೇತ್ರದಲ್ಲಾಗಿರುವ ಕ್ರಾಂತಿಕಾರಕ ಬದಲಾವಣೆಗಳು ಜೋಳದ ಮೇಲೆ ಪ್ರಭಾವ ಬೀರುತ್ತಿವೆ. ಉತ್ತರ ಕರ್ನಾಟಕದ ಪ್ರಮುಖ ಜೋಳ ಬೆಳೆಯುವ ಪ್ರದೇಶವನ್ನು ಇಂದು ವಾಣಿಜ್ಯ ಬೆಳೆಗಳು ಆಕ್ರಮಿಸಿವೆ. ಇದರಲ್ಲಿ ಕಬ್ಬು ಬೆಳೆಯದು ಸಿಂಹಪಾಲು. ಹಲವಾರು ನೀರಾವರಿ ಯೋಜನೆಗಳಿಂದಾಗಿ ಜೋಳ ಬೆಳೆವ ಪ್ರದೇಶದಲ್ಲಿ ಇಂದು ಕಬ್ಬು ಪ್ರಮುಖ ಬೆಳೆಯಾಗಿ ಕಂಗೊಳಿಸುತ್ತಿದೆ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಸುಮಾರು ಇಪ್ಪತ್ತೈದು ಸಕ್ಕರೆ ಕಾರ್ಖಾನೆಗಲು ಈ ಪ್ರದೇಶದಲ್ಲಿ ತಲೆ ಎತ್ತಿವೆ. ನೆರೆಯ ಮಹಾರಾಷ್ಟ್ರದಲ್ಲಿ ಸುಮಾರು ಹತ್ತು ಕಾರ್ಖಾನೆಗಳು ಕರ್ನಾಟಕದ ಕಬ್ಬು ಅವಲಂಬಿಸಿ ನಡೆಯುತ್ತಿವೆ. ಕಬ್ಬಿನೊಂದಿಗೆ, ಅರಿಸಿನ, ಹತ್ತಿ, ಮೆಕ್ಕೆಜೋಳ, ದ್ರಾಕ್ಷಿ, ದಾಳಿಂಬರದಂತಹ ತೋಟದ, ಹಣ ಎಣಿಸುವ ಬೆಳೆಗಳು ಜೋಳದ ಮೇಲೆ ಆಕ್ರಮಣ ನಡೆಸಿವೆ.

ಕೆಲವೇ ವರ್ಷಗಳ ಹಿಂದೆ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಸಿರಿತನ, ಆರ್ಥಿಕ ಸ್ಥಿತಿಗತಿ ಅರಿಯಲು, ಹೆಣ್ಣು ಕೊಡುವಾಗ ಮನೆತನದ ಅಂತಸ್ತು ಅರಿಯಲು ಅವರು ಪ್ರತಿವರ್ಷ ಎಷ್ಟು ಚೀಲ ಜೋಳ ಬೆಳೆಯುತ್ತಾರೆ, ಎಷ್ಟು ಎತ್ತಿನ ಕಮತ (ಒಕ್ಕಲುತನ) ಇದೆ ಎಂದು ಕೇಳುವುದು ರೂಢಿಯಲ್ಲಿತ್ತು. ಹೋಳಿ ಹುಣ್ಣಿಮೆ, ಯುಗಾದಿ ಮುಗಿದ ಮೇಲೆ ಯಾವುದೇ ರೈತರು, ಬೀಗರು ಬಿಜ್ಜರು ಭೇಟಿ ಆದರೂ ರಾಶಿ ಎಲ್ಲ ಮುಗಿದುವಾ, ಜೋಳ ಎಷ್ಟು ಚೀಲ ಮಾಡಿದಿರಿ ಎಂದು ಕೇಳುವ ಪದ್ಧತಿ ಇತ್ತು. ಬೇರೆ ಬೆಳೆಗಳು ಲೆಕ್ಕಕ್ಕೆ ಇರುತ್ತಿರಲಿಲ್ಲ. ಕಲ್ಬುರ್ಗಿ ಭಾಗದ ಕಡೆಗಾದರೆ ಜೋಳದೊಂದಿಗೆ ತೊಗರಿ ಎಷ್ಟು ಚೀಲ ಆತು ಎಂದು ಕೇಳುವುದೂ ಇತ್ತು. ಧಾರವಾಡದ ಕಡೆಗಾದರೆ ಈರುಳ್ಳಿ, ಮೆಣಸಿನಕಾಯಿ ಎಷ್ಟು ಕ್ವಿಂಟಾಲ್ ಮಾಡಿದರಿ ಎಂದು ಕೇಳುವುದಿತ್ತು. ಇಂದು ಅದು ಬದಲಾಗಿ ಯಾರೇ ರೈತರು ಭೇಟಿ ಆದರೂ ಕಬ್ಬು ಎಷ್ಟು ಟನ್ ಆಯ್ತು ಅಂತ ಕೇಳುತ್ತಾರೆ. ಎಷ್ಟು ಎತ್ತುಗಳ ಒಕ್ಕಲುತನ ಇದೆ ಎಂದು ಕೇಳುವ ಕಾಲ ಹೋಗಿ ಟ್ರ್ಯಾಕ್ಟರ್ ಯಾವ ಕಂಪನಿಯದಿದೆ ಎಂದು ಕೇಳುವ ಕಾಲ ಬಂದಿದೆ. ರೈತರ ಕೈನಲ್ಲಿರುವ ದುಡ್ಡನ್ನು ಎಗರಿಸಲು ತರೆಹೆವಾರಿ ದಂಧೆಗಳು ಶುರುವಿಟ್ಟುಕೊಂಡಿವೆ. ಕಬ್ಬು ಮತ್ತು ಇತರ ವಾಣಿಜ್ಯ ಬೆಳೆಯೊಂದಿಗೆ ಹರಿದು ಬರುತ್ತಿರುವ ದೊಡ್ಡ ಪ್ರಮಾಣದ ದುಡ್ಡು,

ರೈತರ ಪ್ರಗತಿ ಮತ್ತು ಅವನತಿಗೆ ಏಕಕಾಲಕ್ಕೆ ಕಾರಣವಾಗುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಉತ್ತರ ಕರ್ನಾಟಕದ ಸಣ್ಣದೊಡ್ಡ ಪಟ್ಟಣಗಳಲ್ಲಿ ಇಂದು ನಾಯಿಕೊಡೆಗಳಂತೆ ಮದ್ಯ-ಮಾಂಸದ ಅಂಗಡಿಗಳು ಆರಂಭಗೊಂಡು ದಿನಾಲು ಲಕ್ಷಾಂತರ ರುಪಾಯಿಗಳ ವಹಿವಾಟು ನಡೆಸುತ್ತಿವೆ. ಇವರ ಗಿರಾಕಿಗಳು ನಮ್ಮ ರೈತರು ಮತ್ತು ರೈತ ಕಾರ್ಮಿಕರು.

ಬೆಳೆಯುವ ಬೆಳೆಗಳು ಬದಲಾಗತೊಡಗಿದಂತೆ ಸಾಮಾನ್ಯ ಜನರ ಆಹಾರಕ್ರಮದಲ್ಲೂ ಬದಲಾವಣೆ ಆಗಿಯೇ ಆಗುತ್ತದೆ. ಜೋಳದ ರೊಟ್ಟಿ, ನುಚ್ಚು ಪ್ರಧಾನ ಆಹಾರ ಕ್ರಮವಾಗಿದ್ದ ಮನೆಗಳಲ್ಲಿ ನಿಧಾನವಾಗಿ ಅವು ಹಿಂದೆ ಸರಿಯತೊಡಗಿವೆ. ಬಹಳಷ್ಟು ರೈತರು ಜೋಳ ಬೆಳೆಯುವಿದೆಂದರೆ ಜಮೀನನ್ನು ಹಾಳು ಬಿಟ್ಟಂತೆ ಎಂದು ಪರಿಗಣಿಸತೊಡಗಿದ್ದಾರೆ. ಜೋಳ, ಕಬ್ಬಿನೊಂದಿಗೆ ಹೇಗೆ ಸೆಣಸಬೇಕು? ತನ್ನನ್ನು ಸಾಕಿ ಸಲುಹಿದ ಜೋಳವನ್ನು ಬಿಟ್ಟು ರೈತ ಬೇರೆ ಬೆಳೆಗಳ ಕೈಹಿಡಿದ. ದೊಡ್ಡ ದೊಡ್ಡ ರೈತರೂ ಕೂಡ ಜೋಳ ಬೆಳೆಯುವುದನ್ನು ಬಿಟ್ಟು ಮನೆಗೆ ಬೇಕಾದಷ್ಟು ಜೋಳ ಕೊಂಡು ತರಲು ಪ್ರಾರಂಭಿಸಿದರು.

ಇಂದು ಜೋಳಕ್ಕೆ ಪರ್ಯಾಯ ಆಹಾರವಾಗಿ ಅಕ್ಕಿ ಮತ್ತು ಗೋಧಿ ಎಲ್ಲ ಉತ್ತರ ಕರ್ನಾಟಕದ ಜಿಲ್ಲೆಗಳನ್ನೂ ಆಕ್ರಮಿಸಿವೆ. ಇದಕ್ಕೆ ನಮ್ಮ ಘನ ಸರ್ಕಾರದ ರೀತಿ ನೀತಿಗಳೂ ಕಾರಣ. ವಿವಿಧ ಯೋಜನೆಗಳಡಿ ಉತ್ತರ ಭಾರತದಿಂದ ಅಪಾರ ಪ್ರಮಾಣದ ಅಕ್ಕಿ ಗೋಧಿ ಅಗ್ಗದ ದರದಲ್ಲಿ ಗ್ರಾಮಗಳನ್ನು ತುಂಬುತ್ತಿವೆ. ಒಂದೆಡೆ ರೈತ, ಕೃಷಿಕೆಲಸಗಳಿಗಾಗಿ ಆಳು ಕಾಳುಗಳಿಲ್ಲದೇ ಒದ್ದಾಡುತ್ತಿದ್ದರೆ, ಕೃಷಿ ಕಾರ್ಮಿಕರು ಸರಕಾರದಿಂದ ಸಿಕ್ಕುವ ಕೆಲಸ, ಕೆಲಸದಿಂದ ದೊರೆವ ಕೈತುಂಬ ಕಾಸು, ಸಲೀಸಾಗಿ ದೊರೆವ ಅಕ್ಕಿ ಗೋಧಿಗಳಿಂದಾಗಿ ಬೇರೆ ರೀತಿ ವರ್ತಿಸುತ್ತಾರೆ. ಇದರ ಒಟ್ಟಾರೆ ಪರಿಣಾಮ ಗ್ರಾಮಗಳಲ್ಲಿ ಜನರು ದಿನಾಲು ತಿನ್ನುಣ್ಣುವ ಕ್ರಮದಲ್ಲಾಗಿದೆ. ಮನೆಯಲ್ಲಿ ಮಹಿಳೆಯರ ಪಾಲಿಗೆ ಅಕ್ಕಿ, ಅನ್ನಪೂರ್ಣೇಶ್ವರಿಯಾಗಿ ಬಂದಿದ್ದಾಳೆ. ಹೆಚ್ಚು ಶ್ರಮ ಬೇಡೆ ಅಕ್ಕಿ ಅಡುಗೆ, ಜೋಳಕ್ಕೆ ಪ್ರತಿಸ್ಪರ್ಧಿ ಆಗಿದೆ. ಅದರಂತೆ ಗೋಧಿ ಕೂಡ. ಜೋಳವನ್ನು ಸ್ವಚ್ಛಮಾಡಿ, ಬೀಸಿ, ನಾದಿ, ತಟ್ಟಿ, ರೊಟ್ಟಿ ಮಾಡಿ ಅದಕ್ಕೆ ಒಂದರೆಡು ಪಲ್ಯ ಸೇರಿಸಿ ತಿನ್ನುವ ಶ್ರಮ ಯಾರಿಗೆ ಬೇಕು? ಅಕ್ಕಿ ಕುದಿಸಿ ಅನ್ನಿ ಮಾಡಿ, ಒಂದಿಷ್ಟು ಏನಾದರೂ ಸುರಿದುಕೊಂಡು ತಿಂದರೆ ಆಯಿತು. ಕುಕ್ಕರಿನಲ್ಲಿಟ್ಟು ಮೂರು ಸೀಟಿ ಹೊಡೆಸಿದರೆ ಅನ್ನ ರೆಡಿ. ರೊಟ್ಟಿ ತಟ್ಟುವ, ಕೈಸುಟ್ಟುಕೊಳ್ಳುವ, ಒಲೆ ಊದುವ ಶ್ರಮ ಯಾರಿಗೆ ಬೇಕು. ಅದರಂತೆ ಗೋಧಿ ರೊಟ್ಟಿ, ಚಪಾತಿ ಕೂಡ ಸುಲಭದ ದಾರಿ. ಕೆಲವೇ ವರ್ಷಗಳಲ್ಲಿ ಜೋಳದ ರೊಟ್ಟಿ ನಮ್ಮ ತಟ್ಟೆಯಿಂದ ಮಾಯವಾಗಬಹುದು. ಹೊಸ ಪೀಳಿಗೆಯ ಯುವಕ, ಯುವತಿಯರಿಗೆ ಆಗಲೇ ಜೋಳದ ರೊಟ್ಟಿಯೊಂದಿಗೆ ಸಂಬಂಧ ಹಳಸಿಬಿಟ್ಟಿದೆ.

ಮನೆಯಲ್ಲಿ ಯಾರಿಗಾದರೂ ಜಡ್ಡು ಆದಾಗ ಮಾತ್ರ ಅಕ್ಕಿ ಅನ್ನ ಮಾಡಿ ಉಣ್ಣುತ್ತಿದ್ದವರು ಉಳ್ಳವರು ಮಾತ್ರ. ನಮ್ಮ ಅಜ್ಜಿಯ ಊರಲ್ಲಿ ನಮ್ಮ ಸೋದರ ಮಾವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಆವರಿಗಾಗಿ ವಾರದಲ್ಲಿ ಒಂದೆರಡು ಸಾರೆ ನಮ್ಮ ಅಜ್ಜಿ ಸ್ವಲ್ಪ ಅನ್ನ ಮಾಡುವುದಿತ್ತು. ನಮ್ಮ ಮಾವ ಉಂಡ ಮೇಲೆ ಅನ್ನ ಉಳಿದಿದ್ದರೆ ಮೊಮ್ಮಕ್ಕಳ ಮಧ್ಯ ಆ ಉಳಿದ ಅನ್ನಕ್ಕಾಗಿ

ಅಜ್ಜಿಯೊಂದಿಗೆ ಕಿತ್ತಾಟ ನಡೆಯುತ್ತಿತ್ತು. ನಮ್ಮ ಅಜ್ಜಿ ಒಂದೊಂದು ದಿನ ಪಾಳಿ ಪ್ರಕಾರ ಒಬ್ಬೊಬ್ಬರಿಗೆ ಆ ಅನ್ನವನ್ನು ನೀಡುತ್ತಿದ್ದಳು. ಅಂಥ ಅಪರೂಪದ ಬಿಳಿ ಅನ್ನ ಇಂದು ಎಲ್ಲರ ಅಡುಗೆಮನೆ ಸೇರಿದೆ. ಜೋಳ ಮನುಷ್ಯರಿಗಷ್ಟೇ ಅಲ್ಲ, ಉತ್ತರ ಕರ್ನಾಟಕದ ದನಗಳಿಗೂ ಮುಖ್ಯ ಆಹಾರ. ಜೋಳದ ಮೇವಾಗಲಿ, ಕಣಿಕೆಯಾಗಲಿ, ಎತ್ತು, ದನ ಕರುಗಳಿಗೆ ವರ್ಷದುದ್ದಕ್ಕೂ ಮುಖ್ಯ ಆಹಾರವಾಗಿರುತ್ತದೆ. ಜೋಳದ ಬದಲು ಕಬ್ಬು, ಭತ್ತದ ಬೆಳೆಗಳ ಕಾರಣದಿಂದಾಗಿ ದನಗಳ ಆಹಾರ ಕ್ರಮದಲ್ಲೂ ಅನಿವಾರ್ಯವಾದ ಬದಲಾವಣೆ ಆಗಿದೆ. ಜೋಳದ ಕಣಿಕೆ ಹೊಟ್ಟಿನ ಸತ್ವಯುತ ಆಹಾರ ಎಲ್ಲಿ, ನಿಸ್ಸಾರ ಕಬ್ಬಿನ ಸೋಗೆ (ಕಬ್ಬಿನ ತುದಿ ಸೋಗೆ) ಎಲ್ಲಿ? ಒಣ ಭತ್ತದ ಹುಲ್ಲು ಎಲ್ಲಿ? ತನ್ನ ಸ್ವಾರ್ಥಕ್ಕೆ ಮನುಷ್ಯ, ದನ ಪಶುಪಕ್ಷಿಗಳ ಆಹಾರ ಕ್ರಮದಲ್ಲೂ ಏರುಪೇರು ಮಾಡಿದ್ದಾನೆ.

ಶತಶತಮಾನಗಳಿಂದ ಉತ್ತರ ಕರ್ನಾಟಕದೊಂದಿಗೆ ಜೋಳದ ಅವಿನಾಭಾವ ಸಂಬಂಧ ಇದೆ. ನಾಡಿನ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಜೀವನಾಡಿಯಾಗಿ ಜೋಳ ಈ ಜನರೊಂದಿಗೆ ಬೆರೆತುಕೊಂಡಿದೆ. ಮುಂಗಾರು ಮಳೆ ಹಿಮ್ಮೆಟ್ಟಿ, ಹಿಂಗಾರು ಮಳೆಗಳು ಆರಂಭವಾಗುವ ಮಹಾನವಮಿ–ದೀಪಾವಳಿ ಹಬ್ಬಗಳ ಕಾಲಾವಧಿ ಜೋಳ ಬಿತ್ತನೆ ಕಾಲ. ಮುಂಗಾರು ಅವಧಿಯಲ್ಲೂ ಬೆಳೆವ ಕೆಲವು ಜೋಳದ ತಳಿಗಳಿವೆ. ಕೆಂಪು, ಗಿಣಿಗೆಂಪು, ಗಂಗಾವತಿ, ಹೈಬ್ರೀಡ್ ಜೋಳಗಳ ಮುಂಗಾರಿ ಬೆಳೆಗಳನ್ನು ಇತ್ತೀಚಿನ ವರೆಗೆ ನಾವು ನೋಡಬಹುದಾಗಿತ್ತು. ಆದರೆ ಹಿಂಗಾರಿ ಹಂಗಾಮಿನ ಬಿಳಿಜೋಳ ಎಂದು ಕರೆಯಲ್ಪಡುವ ಮತ್ತು ಬಹುಪಾಲು ಜನ ತಿನ್ನುಣ್ಣುವ ಮಾನದಂಡಿ, ಗುಂಡುತೆನಿ ಜೋಳದ ತಳಿಗಳೇ ಜೋಳದ ಮುಖ್ಯ ತಳಿ.

ಭೂಮಿ ಸ್ವಲ್ಪ ಹಸಿ ಇದ್ದರೂ ಜೋಳದ ಬಿತ್ತಿಗೆಗೆ ಸಾಕು. ಬಿತ್ತಿಗೆ ನಂತರ ಒಂದಿಷ್ಟು ಮಳೆಯಾದರೆ ಉತ್ತಮ. ಮಳೆ ಇಲ್ಲದಿದ್ದರೂ ಉತ್ತಮ ಹವಾಮಾನ ಇದ್ದರೂ ಜೋಳದ ಬೆಳೆ ಖಾತ್ರಿ. ಉತ್ತರ ಕರ್ನಾಟಕದ ಕಪ್ಪು ಎರೆ ಭೂಮಿಗೂ ಜೋಳಕ್ಕೂ ಆತ್ಮೀಯ ಸಂಬಂಧ. ಅದರಲ್ಲೂ ಕೃಷ್ಣಾ, ಭೀಮಾ, ಡೋಣಿ ನದಿಗಳ ಪರಿಸರದ ಪೈರನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ಕಸಕಳೆಯ ಹಂಗಿಲ್ಲದೆ, ನೀರಿನ ದಾಹವಿಲ್ಲದೆ ಮೊಳಕೆಯೊಡೆಯುವ ಜೋಳ, ಒಂದೆರಡು ಸಾರೆ ಎಡಪಟ್ಟಿಯ ಅಂತರ ಉಳುಮೆ ಮಾಡಿದರೆ ಸಾಕು, ನೋಡನೋಡುವಷ್ಟರಲ್ಲಿ ಒಂದೆರಡು ತಿಂಗಳಲ್ಲಿ ಎದೆ ಎತ್ತರ ಬೆಳೆದು ನಿಂತು ಬಿಡುತ್ತದೆ. ಆಮೇಲೆ ಹೊಡೆ ಹಿರಿದು, ಕಾಳು ಕಟ್ಟುವ ಸಮಯ ಭೂಮಿಗೂ, ರೈತನಿಗೂ ನವೋಲ್ಲಾಸದ ದಿನಗಳು. ಹಸಿರು ಜೋಳದ ವಿಶಾಲ ಹೊಳಗಳಲ್ಲಿ ಎತ್ತುಕಟ್ಟುವ (ಬಾಟಿಕಟ್ಟುವ) ಸಂಭ್ರಮ, ತಾತ್ಕಾಲಿಕ ತಡಿಕೆ, ನೆರಳಿನ ಆಶ್ರಯಮಾಡಿ, ತನ್ನ ಪ್ರೀತಿಯ ಹೋರಿ, ಎತ್ತು ದನಕರುಗಳೊಂದಿಗೆ ಹಗಲು ರಾತ್ರಿ ಜಮೀನುಗಳಲ್ಲಿ ವಾಸ್ತವ್ಯ. ಹೋರಿ, ಎತ್ತುಗಳನ್ನು ಮೇಯಿಸುವ ಸ್ಪರ್ಧೆ, ನಳನಳಿಸುವ ಜೋಳದ ಮೇವು, ಹಾಲು ತುಂಬಿದ ತೆನೆಗಳೇ ದನಗಳಿಗೆ ಪ್ರೀತಿಯ ಆಹಾರ. ಅವುಗಳು ದುಂಡುದುಂಡಾಗಿ ಬೆಳೆದಷ್ಟು ರೈತನಿಗೆ ಖುಷಿ. ಆ ಒಂದೆರಡು ತಿಂಗಳು ದನಗಳಿಗೆ ಸಮೃದ್ಧಿಯ ಕಾಲ. ಜೋಳ ಕೊಯಿಲಿಗೆ ಬರುವ ವೇಳೆಗೆ ದನಕರುಗಳು ಮೈದುಂಬಿಕೊಂಡು ಸೊಕ್ಕಿನಿಂದ ಮುಸಾಡುತ್ತವೆ. ಅವುಗಳನ್ನು ಆಗ ನೋಡುವುದೇ ಒಂದು ಚಂದ.

ಇದೇ ಹಂಗಾಮಿನಲ್ಲಿ ಬರುವ ವಿಜಾಪುರದ ಸಿದ್ಧೇಶ್ವರ ಜಾತ್ರೆ, ಚಿಂಚಲಿ ಮಾಯಕ್ಕನ ಜಾತ್ರೆ, ಜಮಖಂಡಿಯ ಜಾತ್ರೆ, ಪ್ರತಿವಾರ ನಡೆವ ಮೂಡಲಗಿ, ಅಥಣಿ ಇನ್ನೂ ಅನೇಕ ದನಗಳ ಸಂತೆಗಳು, ಕೊಬ್ಬಿದ ಎತ್ತು, ಹೋರಿಗಳ ಪ್ರದರ್ಶನ ಮಾಡಲು, ಮಾರಾಟ ಮಾಡಲು, ಕೊಳ್ಳಲು ಪ್ರಶಸ್ತವಾದ ಕಾಲ. ಬಯಲು ಪ್ರದೇಶದ ಪ್ರಸಿದ್ಧ ಕಿಲಾರಿ ತಳಿಯ ಹೋರಿ, ಎತ್ತಗಳ ವ್ಯಾಪಾರ ಆಗ ಭರ್ಜರಿ!

ಜೋಳದ ಪೈರು ತೆನೆ ಹಿರಿದು, ಕಾಳು ಕಟ್ಟಿ, ಹಾಲುಗಳಾಗಿ, ಶೀತ್ನಿ (ಸಿಹಿತೆನೆ) ಆಗಿ ತೆನೆಯಲ್ಲಿ ಬಿಳಿ ಜೋಳಾಗಿ ಮಾರ್ಪಾಡುವ ಒಂದೆರಡು ತಿಂಗಳ ಕಾಲ ಪಕ್ಷಿ ಸಂಕುಲಕ್ಕೂ ಸಮೃದ್ಧಿಯ ಕಾಲ. ರೈತನ ಕಣ್ಣು ಕಾವಲು ತಪ್ಪಿಸಿ ಹಾಲು ಜೋಳವನ್ನು ತಿಂದು ತೇಗುವ ಪಕ್ಷಿಗಳ ಕಲರವವನ್ನು ಆಗ ನೋಡಬೇಕು. ಈ ಪಕ್ಷಿಗಳು ಆಗ ಎಲ್ಲಿಂದ ಬರುತ್ತವೋ ಆ ದೇವರಿಗೇ ಗೊತ್ತು. ಪ್ರತಿ ಬೆಳಿಗ್ಗೆ ಸಾಗರೋಪಾದಿಯಲ್ಲಿ ಪಶ್ಚಿಮದ ಕಡೆಯಿಂದ ಉದರಂಭರಣಕ್ಕಾಗಿ ಸಾಗಿ ಬರುವ ಸಾಲು ಸಾಲು ಹಕ್ಕಿಗಳ ಹಿಂಡಿಗೆ ದೇಶ, ನಾಡು, ಭಾಷೆಗಳ ಸೀಮೆಯೆಲ್ಲಿ? ನಾವು ಚಿಕ್ಕವರಾಗಿದ್ದಾಗ ವಿಶಾಲವಾದ ಜೋಳದ ಭೂ ಪ್ರದೇಶದ ಮೇಲೆ ಲಗ್ಗೆ ಇಡಲು ಬರುತ್ತಿದ್ದ ಹಕ್ಕಿಗಳನ್ನು ನೋಡುವುದೇ ಒಂದು ಹಬ್ಬವಾಗುತ್ತಿತ್ತು. ನಮ್ಮ ತಲೆಯ ಮೇಲೆ ಆ ಹಕ್ಕಿ ಹಿಂಡುಗಳು ಹಾರಿ ಮುಂದೆ ಸಾಗುವಾಗ ಅವುಗಳ ರೆಕ್ಕೆಯ ಸಪ್ಪಳ ನಮ್ಮ ಕಿವಿಗೆ ತಾಗುತ್ತಿತ್ತು. ಮೈಲುದ್ದ ಸಾಲುಗಳ ಹಕ್ಕಿಗಳು ಸೂರ್ಯೋದಯಕ್ಕೆ ಸರಿಯಾಗಿ ಪೂರ್ವಕ್ಕೆ ಹೋಗುವುದು, ಸಂಜೆಯವರೆಗೆ ತಿಂದು ತೇಗಿ, ಸೂರ್ಯನೊಂದಿಗೆ ಪಶ್ಚಿಮಕ್ಕೆ ಹಿಂದಿರುವುದು ಎರಡು ಮೂರು ತಿಂಗಳುಗಳ ಕಾಲ ನಡೆಯುವ ನಿತ್ಯೋತ್ಸವ. ಆ ಕೋಟಿ ಕೋಟಿ ಹಕ್ಕಿಗಳೆಲ್ಲಾ ಈಗ ಎಲ್ಲಿ ಹೋದವು, ಅವುಗಳ ಹೊಟ್ಟೆ ಪಾಡು ಏನಾಗಿದೆ ಎಂಬುದೇ ಈಗ ಯಕ್ಷಪ್ರಶ್ನೆ.

ಹಿಂಡು ಹಿಂಡು ಹಕ್ಕಿಗಳಿಂದ ಜೋಳದ ಬೆಳೆಯನ್ನು ರಕ್ಷಿಸಿಕೊಳ್ಳುವುದು ರೈತನಿಗೆ ಸವಾಲಿನ ಕೆಲಸ. ಆಗ ಬೆಳೆಗಾಗುತ್ತಿದ್ದಂತೆ ಮನೆಮಂದಿಯೆಲ್ಲಾ ಹೊಲದ ಕಾವಲಿಗೆ ನಿಲ್ಲಬೇಕು. ಸದ್ದು ಮಾಡುತ್ತಾ, ವಿವಿಧ ಪರಿಕರಗಳಿಂದ ಡಬ.. ಡಬ.. ಸಪ್ಪಳ ಮಾಡುತ್ತ, ಹಾ.. ಹೂ.. ಎಂದು ಚೀರುತ್ತಾ, ಕೂಗುತ್ತಾ, ಕವಣೆಕಲ್ಲು ಬೀಸುತ್ತಾ, ಬೆದುರು ಬೊಂಬೆಗಳನ್ನು ನಿಲ್ಲಿಸಿ ಹೆದರಿಸುತ್ತಾ, ಒಂದೇಎರಡೇ, ಸಕಲೋಪಾಯಗಳಿಂದ ಹಕ್ಕಿಗಳು ಜೋಳದ ಬೆಳೆಮೇಲೆ ಎರಗಿ, ಜೋಳ ಮುಕ್ಕುವುದನ್ನು ತಪ್ಪಿಸುವುದು ಹರಸಾಹಸದ ಕೆಲಸವಾಗುತ್ತಿತ್ತು. ವಿಶಾಲವಾದ ಜೋಳದ ಹೊಲಗಳು ಆಗ ಶಬ್ದಶಃ ಪ್ರತಿ ಬೆಳಿಗ್ಗೆ ಮತ್ತು ಸಂಜೆ ರಣರಂಗದಂತೆ ಕಂಡುಬರುತ್ತಿದ್ದವು. ಹಕ್ಕಿಗಳ ಮೇಲೆ ಬೈಗುಳದ ಸುರಿಮಳೆಯಾಗುತ್ತಿತ್ತು. ಅವುಗಳ ಜನ್ಮ ಜಾಲಾಡಿ, ಕುಲಗೋತ್ರ ಹಿಡಿದು ಎಲ್ಲ ಅಶ್ಲೀಲ ಅವಾಚ್ಯ ಶಬ್ದಗಳ ಪ್ರಯೋಗಮಾಡಿ ಅವುಗಳನ್ನು ಓಡಿಸಲು ಮಾಡುತ್ತಿದ್ದ ಪ್ರಯೋಗಗಳು ವಿಫಲವಾಗುತ್ತಿದ್ದವು. ಏಕೆಂದರೆ ಹಕ್ಕಿಗಳಿಗೆ ಬೈಗುಳ, ಭಾಷೆ ತಿಳಿಯಬೇಕಲ್ಲ! ಆ ಬೈಗುಳಗಳು ಮರ್ಯಾದೆ ಇರುವ ಯಾವುದೇ ಹಕ್ಕಿ ಜೋಳದ ತೆನೆ ಮೇಲೆ ಕೂಡ್ರಲು ನಾಚಿಕೆ ಪಡುವಂತಿರುತ್ತಿದ್ದವು! ಆ ಬೈಗುಳಗಳು, ಆ ಶಬ್ದ ಸಂಪತ್ತು ಈಗ ಎಲ್ಲಿ?

ಈ ಎಲ್ಲ ಬೆಳಗಿನ ಅವಾಂತರಗಳ ಮಧ್ಯ ರೈತನ ಕಣ್ಣು ತಪ್ಪಿಸಿ ಅಥವಾ ಸೋಮಾರಿ ರೈತರ ಹೊಲ ಆಯ್ದುಕೊಂಡು ಹಕ್ಕಿಗಳು ತಿಂದು ತೇಗಿ, ಮಧ್ಯಾಹ್ನನದ

ಬಿಸಿಲಲ್ಲಿ ಗಿಡಗಳಲ್ಲಿ ಕುಳಿತು ಚರ್ಚೆನಡೆಸುತ್ತಿದ್ದವು. ಹಕ್ಕಿಗಳು ಕೂಡ್ರದಂತೆ ಗಿಡಮರಗಳ ಟೊಂಗೆಗಳನ್ನು ಕಡಿದು ಬೋಳುಮಾಡುವ ಒಂದು ಕ್ರಮವು ರೈತನಿಂದ ನಡೆಯುತ್ತಿತ್ತು. ಹಾಗೆ ಕಡಿದ ಮರಗಳ ಮೇಲೆ ಮನುಷ್ಯರ ಬೆದುರು ಬೊಂಬೆಗಳನ್ನು ನಿಲ್ಲಿಸಿ ಹಕ್ಕಿಗಳನ್ನು ಹೆದರಿಸುವ ಕ್ರಮ ಅನುಸರಿಸುವುದಿತ್ತು. ಒಂದೆರಡು ದಿನ ಇದನ್ನು ಗಮನಿಸುತ್ತಿದ್ದ ಹಕ್ಕಿಗಳು ನಂತರ ಆ ಬೊಂಬೆಗಳ ಮೇಲೆ ಕುಳಿತು ಮಲವಿಸರ್ಜನೆ ಮಾಡಿ ಹಾರಿ ಹೋಗಿ ರೈತನನ್ನು ಅಣಕಿಸುತ್ತಿದ್ದವು. ರೈತ ತನ್ನ ಶಕ್ತ್ಯಾನುಸಾರ ಈ ಎಲ್ಲ ಪಕ್ಷಿ ಸಂಕುಲದಿಂದ ಜೋಳದ ಪೈರನ್ನು ರಕ್ಷಿಸಿಕೊಂಡು, ತನ್ನ ಬದುಕು ಕಟ್ಟಿಕೊಳ್ಳಲು ಹೆಣಗಾಡಬೇಕಾಗುತ್ತಿತ್ತು.

ಜೋಳ ಕೀಳುವುದು, ಮೆದೆ ಕಟ್ಟುವುದು, ಗೂಡು ಹಾಕುವುದು, ತೆನೆ ಕೋಯ್ದು ಕಣಕ್ಕೆ ತರುವುದು, ಹಂತಿ ಕಟ್ಟಿ ಕಾಳು ಬೇರ್ಪಡಿಸುವುದು ಇವೆಲ್ಲ ಕೆಲಸಗಳು ರೈತನ ವಾರ್ಷಿಕ ಒತ್ತಡದ ದಿನಗಳಾದರೂ ಖುಷಿಯ ದಿನಗಳು. ಆಗ ಪ್ರತಿಗ್ರಾಮದ ಸುತ್ತಲೂ ನೂರಾರು ಕಣಗಳು ತಲೆಯೆತ್ತುತ್ತಿದ್ದವು. ಎಲ್ಲ ರೈತರು ಊರ ಸುತ್ತಲೂ ಕಣ ಮಾಡಿ ಎಲ್ಲ ದವಸ ಧಾನ್ಯಗಳ ರಾಶಿ ಮಾಡಿ ಒಕ್ಕುವ ಕಾರ್ಯ ತಿಂಗಳೊಪ್ಪತ್ತು ನಡೆಯುತ್ತಿತ್ತು. ಈಗಿನಂತೆ ರಸ್ತೆಗಳು ಕಣಗಳಾಗಿರಲಿಲ್ಲ. ಎಲ್ಲ ಬೆಳೆಗಳಲ್ಲಿ ಜೋಳದ ರಾಶಿಗೆ ಇನ್ನಿಲ್ಲದ ಮಹತ್ವ, ಮುಖ್ಯ ಬೆಳೆ ಅದೇ. ರಾತ್ರಿಯೆಲ್ಲಾ ದನಕರುಗಳ, ಎತ್ತುಗಳ ಹಂತಿ ಕಟ್ಟಿ ಜೋಳದ ತೆನೆ ತುಳಿಸಿ ಕಾಳುಗಳನ್ನು ಬೇರ್ಪಡಿಸಿ, ನಂತರ ಗಾಳಿ ಬಿಟ್ಟಾಗ ತೂರಿಕೊಳ್ಳುವ ಕೆಲಸ. ಸಾಮಾನ್ಯವಾಗಿ ಸುಗ್ಗಿಯಲ್ಲಿ ಪಡುವಣ ಗಾಳಿ ಬೀಸುವ ಕಾಲ. ಜೋಳದ ರಾಶಿ ವಾರ, ಹದಿನೈದು ದಿನಗಳ ಕಾಲ ನಡೆಯುವಂಥದ್ದು. ಜೋಳ ತೂರಿ ಜೋಳದ ರಾಶಿ ಸಿದ್ಧವಾದ ಮೇಲೆ ಕಣದ ಸುತ್ತಲೂ ಕೂಡಿ ಹಾಕಿ, ರಾಶಿ ಬಾಣವೆಂದು ಜೋಳ ದೇವರಿಗೆ ನೈವೇದ್ಯ ಮಾಡಿ, ಪೂಜೆ ಸಲ್ಲಿಸಿ, ಇತರ ರೈತರಿಗೆ ಊಟ ಹಾಕಿ ಸಂಭ್ರಮಿಸಿ, ಕಣದಲ್ಲಿಯ ಜೋಳವನ್ನು ತುಂಬುವ ಕ್ರಮ ನಡೆಯುತ್ತಿತ್ತು. ಹಂತಿ ಕಟ್ಟಿದಾಗ, ರಾಶಿ ಮಾಡುವಾಗ ಹಂತಿ ಹಾಡು, ಸುಗ್ಗಿಯ ಹಾಡುಗಳ ಸುರಿಮಳೆಯಾಗುತ್ತಿತ್ತು. ಒಂದು ಕಣದ ವರೆಗೆ ಪ್ರತಿಯಾಗಿ ಇನ್ನೊಂದು ಕಣದವರು ಹಾಡುಗಳ ಸವಾಲು ಜವಾಬು ನಡೆಯುತ್ತಿತ್ತು. ಹೆಚ್ಚಿನ ಹಾಡುಗಳು ದೇವರ ಸ್ತುತಿ ಹಾಡುಗಳು, ಬಸವಣ್ಣನ (ಎತ್ತುಗಳ) ಪ್ರಶಂಸೆ ಹಾಡುಗಳು, ಕೆಲವು ಅಶ್ಲೀಲ ಹಾಡುಗಳು ಎಲ್ಲ ಸೇರಿ ಒಟ್ಟಾರೆ ಸುಗ್ಗಿ ಹಬ್ಬಕ್ಕೆ ಕಳೆ ಕಟ್ಟುತ್ತಿತ್ತು.

ಜೋಳದ ರಾಶಿಯ ನಂತರ, ಚೀಲಗಳಲ್ಲಿ ತುಂಬಿ ಇಂತಿಷ್ಟು ಚೀಲದ ರಾಶಿಯಾಯಿತೆಂದು ರೈತ ಹಿಗ್ಗುತ್ತಿದ್ದ. ಪ್ರತಿಹೊಲದ ಅಂದಾಜನ್ನು ಮೊದಲೇ ಕಟ್ಟಿ ನಂತರ ಇಷ್ಟು ಹೆಚ್ಚಾಯಿತು, ಕಡಿಮೆಯಾಯಿತೆಂದು ಲೆಕ್ಕ ನಡೆಯುತ್ತಿತ್ತು. ಒಂದಿಷ್ಟು ಪೀಕಿನಿಂದ ರೈತ ಖುಷಿಯಾಗಿರುತ್ತಿದ್ದ. ನಂತರ ರಾಶಿ ಮನೆಗೆ ತರುವುದು, ಊರ ಮುಂದಿನ ಹಗೇವುಗಳಿಗೆ ತುಂಬಿ ಸಂರಕ್ಷಿಸಿಡುವ ಕೆಲಸ ನಡೆಯುತ್ತಿತ್ತು. ಜೋಳ ಸಂರಕ್ಷಿಸುವ ಯಾವುದೇ ಆಧುನಿಕ ಸೌಲಭ್ಯಗಳಿಲ್ಲದ, ಕ್ರಿಮಿ ಕೀಟಗಳಿಂದ ಜೋಳದ ರಕ್ಷಣೆಗೆ ಔಷಧಿಗಳಿಲ್ಲದ ಆ ಕಾಲದಲ್ಲಿ, ಹಗೇವುಗಳಲ್ಲಿ ಕೇವಲ ಬೇವಿನ ತಪ್ಪಲು ಮುಂತಾದ ಸ್ಥಳೀಯ ಕ್ರಿಮಿಕೀಟ ನಿವಾರಕಗಳನ್ನು ಬೆರೆಸಿ, ಗಾಳಿಯಾಡದಂತೆ ವರ್ಷಗಟ್ಟಲೆ ನೆಲದಡಿ ಸಂರಕ್ಷಿಸಿಡುತ್ತಿದ್ದರು. ಹೀಗಾಗಿ ಪ್ರತಿ ಗ್ರಾಮದ ಸುತ್ತಲೂ ಹಗೇವುಗಳು, ಮನೆಯೊಳಗಡೆ ನೆಲದಡಿ ಅಂಬಾರಿಗಳು, ಜೋಳವನ್ನು ಸಂರಕ್ಷಿಸಿಡುವ

ಕಣಜಗಳಾಗಿ ಇತ್ತೀಚಿನ ವರೆಗೆ ಬಳಕೆಯಲ್ಲಿದ್ದವು. ಜೋಳದ ಬೆಳೆ ಕಡಿಮೆಯಾದಂತೆ ಹಗೇವುಗಳು ಹಾಳುಬಿದ್ದು, ಅಂಬಾರಿಗಳೂ ಮುಚ್ಚಲ್ಪಟ್ಟು ಒಟ್ಟಾರೆ ಗ್ರಾಮಗಳಲ್ಲಿ ಕಾಳು ಕಡಿ ಸಂಗ್ರಹವೇ ಮಾಯವಾಗಿ, ಪ್ರತಿತಿಂಗಳು ಬರುವ ಅಕ್ಕಿ, ಗೋಧಿಯ ರೇಷನ್ ಅಂಗಡಿಗಳು ಗ್ರಾಮದ ಮಾಸಿಕ ಗೋದಾಮುಗಳಾಗಿ, ಗ್ರಾಮಗಳಾಗಿ ರೇಷನ್ ರಾಜಕೀಯ ಆರಂಭವಾಗಿಬಿಟ್ಟಿತು.

ಜೋಳದ ಸುಗ್ಗಿಯ ಕಾಲ ಗ್ರಾಮಗಳ ಸಮೃದ್ಧಿಕಾಲವಾಗಿತ್ತು. ಕೂಲಿಕಾರರು, ವಿವಿಧ ಕಸುಬುಗಳ ಗ್ರಾಮದ ಆಯಗಾರರು ಸುಗ್ಗಿಯ ಕಾಲದಲ್ಲಿಯೇ ದುಡಿದು, ರೈತರ ಕಣಗಳಿಗೆ ರಾಶಿ ವೇಳೆ ಹೋಗಿ ದವಸ ಧಾನ್ಯ ಸಂಗ್ರಹಿಸುತ್ತಿದ್ದರು. ಕಾಳು, ಮೆದೆ, ತೆನೆ ಹೀಗೆ ಬೇರೆ ಬೇರೆ ರೂಪದಲ್ಲಿ ವಾರ್ಷಿಕ ಸೇವೆಯ ಪ್ರತಿಫಲ ವರ್ಷಕ್ಕೊಮ್ಮೆ ಸಂದಾಯವಾಗುತ್ತಿತ್ತು. ಕಳ್ಳಕಾಕರಿಗೂ ಕೂಡ ಸುಗ್ಗಿಯ ಕಾಲ ಸಮೃದ್ಧ ದುಡಿತದ ಕಾಲವೇ. ರೈತನ ಕಣ್ಣುತಪ್ಪಿಸಿ ಬೆಳೆ ಕೊಯ್ಯುವುದು, ರಾಶಿಕಣದಿಂದ ಚೀಲೆರಡು ಚೀಲ ಧಾನ್ಯ ಕದಿಯುವುದು ನಡೆಯುತ್ತಿದ್ದವು. ರೈತನ ಮಕ್ಕಳು ಪಾವು ಗಿರಪಾವು ಸೇರೆರಡು ಸೇರು ಜೋಳ ಕದ್ದು, ಸುಗ್ಗಿಯ ಕಾಲದಲ್ಲಿ ಅಂಗಡಿಗಳಲ್ಲಿ ವಿಶೇಷವಾಗಿ ತಯಾರಿಸಿ ಮಾರುತ್ತಿದ್ದ ಕರದಂಟು, ಉಂಡಿ, ಬಜಿ, ಕರ್ಜೂರಗಳನ್ನು ಕೊಂಡು ತಿನ್ನುವುದು ನಡೆಯುತ್ತಿತ್ತು.

ಹೋಳಿ ಹುಣ್ಣಿಮೆ, ಉಗಾದಿ ಸುತ್ತಮತ್ತು ಜೋಳದ ರಾಶಿ ಮುಗಿಯಿತೆಂದರೆ ರೈತನಿಗೆ ಸ್ವಲ್ಪ ನಿರಾಳ. ನಂತರ ಜೋಳದ ಕಣಿಕೆ, ಹೊಟ್ಟುಗಳನ್ನು ಸಂರಕ್ಷಿಸಿಡುವ ಕೆಲಸ. ಪ್ರತಿ ಗ್ರಾಮದ ಸುತ್ತಲೂ ದೊಡ್ಡ ದೊಡ್ಡ ಕಣಿಕೆ ಮತ್ತು ಹೊಟ್ಟಿನ ಬಣವೆಗಳು ಸುಗ್ಗಿಯ ನಂತರ ಮೈದಳೆದು ನಿಲ್ಲುತ್ತಿದ್ದವು. ಬಣವೆಗಳನ್ನು ಒಟ್ಟುವುದು, ಮಳೆ ನೀರು ಬಣವೆಗಳೊಳಗೆ ಇಳಿಯದಂತೆ ಕೆಸರಿನ ಮೇಲ್ಮುದ್ದಿ ಹಾಕಿ ಬಣವೆಗಳನ್ನು ವರ್ಷದುದ್ದಕ್ಕೂ ಸಂರಕ್ಷಿಸಬಹುದಿತ್ತು. ಈ ಬಣೆವೆಗಳು ರೈತನ ದನಕರುಗಳಿಗೆ ವರ್ಷದುದ್ದಕ್ಕೂ ಮೇವು ಪೂರೈಕೆ ಕಣಜಗಳು. ಆಗ ಪ್ರತಿ ಗ್ರಾಮಗಳ ಸುತ್ತಲೂ ಕಂಡು ಬರುತ್ತಿದ್ದ ಬೃಹತ್ ಗಾತ್ರದ ಬಣವೆಗಳು ಆಯಾ ಗ್ರಾಮದ ಸುಖ ಸಮೃದ್ಧಿಯನ್ನು ಸೂಚಿಸುವ ಕುರುಹುಗಳಾಗಿ ಕಾಣುತ್ತಿದ್ದವು. ಇವೆಲ್ಲಾ ಈಗ ಮಾಯವಾಗುತ್ತಾ ಬರುತ್ತಿವೆ.

ಉತ್ತರ ಕರ್ನಾಟಕದ ಜನ ಜೋಳವನ್ನು ಮುಖ್ಯವಾಗಿ ಬಳಸುತ್ತ ಬಂದುದು ರೊಟ್ಟಿ ರೂಪದಲ್ಲಿ. ಜೋಳದ ನುಚ್ಚು, ಗಂಜಿ (ಅಂಬಲಿ) ಕೂಡ ಬಳಕೆಯಲ್ಲಿದ್ದರೂ, ಕಡಿಮೆ. ಜೋಳ ಬೀಸಿ ಹಿಟ್ಟು ಮಾಡುವ ಕ್ರಮವೇ ಶತಮಾನಗಳಿಂದ ರೂಢಿಯಲ್ಲಿತ್ತು. ಜೋಳ ಬೀಸಲು ಪ್ರತಿ ಮನೆಯಲ್ಲಿ ಒಂದೆರಡು ಬೀಸುವ ಕಲ್ಲುಗಳಿರುತ್ತಿದ್ದವು. ಮಹಿಳೆಯರು ನಸುಕಿನಲ್ಲೆದ್ದು ಸುಶ್ರಾವ್ಯ ಹಾಡುಗಳೊಂದಿಗೆ ಜೋಳ ಬೀಸುವ ಕೆಲಸವನ್ನು ಸಂತೋಷದಿಂದ ಮಾಡುತ್ತಿದ್ದರು.

'ಆಗ್ಯಾವ ನಮ್ಮ ಜ್ವಾಳ ಉಳಿದಾವ ನಮ್ಮ ಹಾಡ
ಈಗ ಸಾಕವ್ವ ನಿನಕಲ್ಲ, ಕೈಯಾಗ ಹಾಕಿದುಂಗೂರ ಸವೆದಾವ'

ಕಳೆದ ಶತಮಾನದ ಮಧ್ಯಭಾಗದಲ್ಲಿ ಗ್ರಾಮಾಂತರ ಪ್ರದೇಶದ ಅಲ್ಲಲ್ಲಿ ಬೀಸುವ ಗಿರಣಿಗಳು ತಲೆ ಎತ್ತಿದವು. ನಂತರ ವಿದ್ಯುತ್ ಗಿರಣಿಗಳು ಬಂದ ಮೇಲೆ ಬೀಸುವ ಕಲ್ಲುಗಳು ಸ್ತಬ್ಧಗೊಂಡವು. ಈಗ ಬೀಡುವ ಕಲ್ಲು, ಒರಳು, ಒಣಿಕೆಗಳೇನಿದ್ದರೂ

ಸಾಂಪ್ರದಾಯಿಕ ಅಗತ್ಯ ಪೂರೈಕೆಗೆ ಮಾತ್ರ. ಈಗ ಎಲ್ಲರ ಮನೆಗಳಲ್ಲಿ ತಟ್ಟಿ ಮಾಡಿದ ಜೋಳದ ರೊಟ್ಟಿಗಳೆ. ಕೊಣಮಿಗಿಯಲ್ಲಿ ಜೋಳದ ಹಿಟ್ಟು ನಾದಿಕೊಂಡು ಕೈಯಲ್ಲಿಯೇ ರೊಟ್ಟಿಯನ್ನು ಮಾಡಿ, ಹಂಚಿನಲ್ಲಿ ಬೇಯಿಸಿ ನಂತರ ಒಂದಿಷ್ಟು ಒಲೆಯ ಮಗ್ಗುಲಿಗೆ ಇಟ್ಟು ಸುಟ್ಟು ತೆಗೆಯಲಾಗುತ್ತಿತ್ತು. ಆ ರೊಟ್ಟಿಯ ರುಚಿಯೇ ಬೇರೆ. ಕೈಮೇಲೆ ರೊಟ್ಟಿ ಮಾಡುವ ಕ್ರಮ ಸ್ವಲ್ಪ ತಾಂತ್ರಿಕ ನೈಪುಣ್ಯ ಬೇಡುವಂತದ್ದು. ಆನಂತರ ಬಂತು, ಬಡಿದು (ತಟ್ಟಿ) ರೊಟ್ಟಿ ಮಾಡುವ ಕ್ರಮ. ಈಗ ಬಹುಮಟ್ಟಿಗೆ ಪ್ರಚಲಿತವಿರುವ ಕ್ರಮ ಇದೊಂದೆ. ಆದರೆ ಕೈರೊಟ್ಟಿ ತಿನ್ನುತ್ತಿದ್ದ ಹಳೆಯ ತಲೆಮಾರಿನ ಮಂದಿಗೆ ತಟ್ಟಿದ ರೊಟ್ಟಿಗಳು ರುಚಿಸುತ್ತಿದ್ದಿಲ್ಲ. ಅಂಥವರಿಗೆ ಸೀಮತಿವಾಗಿ ಕೈರೊಟ್ಟಿ ಮಾಡುವ ಕ್ರಮ ಆ ಪೀಳಿಗೆಯ ಜನ ಇರುವವರೆಗೆ ಮುಂದುವರಿದು ಬಂದಿತ್ತು.

ರೊಟ್ಟಿಯೊಂದಿಗೆ ಪಲ್ಯ, ಚಟ್ನಿ, ಖಾರ, ಮೊಸರು ಸಾಮಾನ್ಯ ಪೂರಕ ವ್ಯಂಜನಗಳು. ರೊಟ್ಟಿಗೂ ಮತ್ತು ಬದನೆಕಾಯಿ ಪಲ್ಯಕ್ಕೂ ಜನ್ಮಾಂತರದ ಸಂಬಂಧ. ಅದೇ ರೀತಿ ರೊಟ್ಟಿಗೂ, ಮೊಸರಿಗೂ. ಅದರೊಂದಿಗೆ ಬೆಳ್ಳುಳ್ಳಿ ಖಾರ ಮತ್ತು ಸೇಂಗಾ ಚಟ್ನಿ ಇದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚುವುದೇ. ರೈತರ ಮನೆಗಳಲ್ಲಿ ರೊಟ್ಟಿ ಮಾಡುವುದೇ ಮಹಿಳೆಯರ ದೈನಂದಿನ ಮುಖ್ಯ ಅಡುಗೆ ಕಾರ್ಯಕ್ರಮ. ಅವಿಭಕ್ತ ಕುಟುಂಬಗಳಲ್ಲಿ ಮೂರ್ನಾಲ್ಕು ಮಹಿಳೆಯರು ಯಾವತ್ತೂ ರೊಟ್ಟಿ ಮಾಡುವುದರಲ್ಲೇ ತೊಡಗಿರುತ್ತಿದ್ದರು. ಬೇಸಿಗೆಯಲ್ಲಿ ರೊಟ್ಟಿಯೊಂದಿಗೆ, ಮಹಿಳೆಯರೂ ಬೆಂದು ಹೋಗುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿ ರೊಟ್ಟಿ ಜಾತ್ರೆಗಳು ನಡೆಯುತ್ತವೆ. ಮಠ ಮಂದಿರಗಳಲ್ಲಿ ದಾಸೋಹದ ಹೆಸರಿನಲ್ಲಿ ರೊಟ್ಟಿ ಪ್ರಸಾದ ನಡೆಯುತ್ತದೆ. ನಮ್ಮ ಖಾನಾವಳಿಗಳು ರೊಟ್ಟಿ ಮಹತ್ವವನ್ನು ಕಾಯ್ದುಕೊಂಡು ಬಂದಿವೆ. ಧಾರವಾಡದ ಬಸಪ್ಪನ ಖಾನಾವಳಿ ೧೯೩೦ರಿಂದ ನಡೆಯುತ್ತ ಬಂದಿದೆ. ಸಣ್ಣ ದೊಡ್ಡ ಪಟ್ಟಣ, ನಗರ ಪ್ರದೇಶಗಳಲ್ಲಿ ವೀರಶೈವ ಲಿಂಗಾಯತ ಹೆಸರಿನ ಬೋರ್ಡುಗಳು ಖಾನಾವಳಿಗಳು ರೊಟ್ಟಿ ಪರಂಬಪರೆಯನ್ನು ಕಾಯ್ದುಕೊಂಡು ಬಂದಿವೆ. ಬೆಂಗಳೂರಿನಲ್ಲಿ ಇತರರು ಇದನ್ನೇ ವಾಣಿಜ್ಯೀಕರಣ ಮಾಡಿ ರೊಟ್ಟಿಯನ್ನು ದುಬಾರಿಯಾಗಿಸಿದ್ದಾರೆ. ರೊಟ್ಟಿ ಉತ್ತರ ಕರ್ನಾಟಕದ ಮತ್ತು ಮಹಾರಾಷ್ಟ್ರದ ಬಹುಭಾಗ, ಗುಜರಾತ, ರಾಜಸ್ಥಾನಗಳಲ್ಲೂ ತಲತಲಾಂತರಗಳಿಂದ ಮುಖ್ಯ ಆಹಾರವಾಗಿದೆ. 'ಜೋಳವನು ತಿಂದವನು ತೋಳದಂತಾದಾನು' ಎಂಬ ಮಾತು ರೊಟ್ಟಿಯ ಗುಣವನ್ನು ತೋರಿಸುತ್ತದೆ. ರಾಗಿ ಮುದ್ದೆ ಅಥವಾ ರೊಟ್ಟಿ, ಜೋಳದ ರೊಟ್ಟಿ ಮತ್ತು ನುಚ್ಚು ಇಡೀ ಕರ್ನಾಟಕವನ್ನು ಪಾಲಿಸಿ ಪೋಷಿಸುತ್ತ ಬಂದ ಸಂಜೀವಿನಿಗಳು. ಆದರೆ ಅದಕ್ಕೆ ಕೃತಜ್ಞತಾ ರೂಪವಾಗಿ ಯಾರೂ ರಾಗಿರಾಗೇಶ್ವರನ ಅಥವಾ ಜೋಳಜೋಳೇಶ್ವರನ ಮಂದಿರ ಕಟ್ಟಿ ಪೂಜೆ ಸಲ್ಲಿಸಿದ್ದಿಲ್ಲ. ಅನ್ನಪೂರ್ಣೇಶ್ವರಿ, ಅನ್ನಮ್ಮ ದೇವಸ್ಥಾನಗಳನ್ನು ಕಟ್ಟಿ, ಅನ್ನ ಉಣ್ಣುವವರು ಅಕ್ಕಿಯ ಋಣ ತೀರಿಸುತ್ತಿದ್ದಾರೆ. ಆದರೆ ಉತ್ತರ ಕರ್ನಾಟಕದ ಜನರಿಂದ ಇದು ಆಗಿಲ್ಲ. ನಮ್ಮಲ್ಲಿ ಗುಡಿ ಕಟ್ಟದೇ ಯಾವುದಕ್ಕೂ ಮಹತ್ವ ಬರುವುದಿಲ್ಲ. ಅನ್ನದ ಋಣ ಅನ್ನುವ ಮಾತಿಗೆ ಬಹಳ ಗೌರವ ಇದೆ. ಆದರೆ ಮೊದಲಿನಿಂದಲೂ ನಮ್ಮಲ್ಲಿ ಇದ್ದುದು 'ಜೋಳದ ಋಣ' ಎಂಬ ಮಾತು. ಇದಕ್ಕೆ ಸಾಕ್ಷಿ ಪಂಪ ಭಾರತ.

ಸಂಗರದೊಳ್ ಜೋಳದ ವಾಳಿಯಂ
ನೆರಪಿದಂ ಗಂಡಂ ಪೆರಂ ಗಂಡಂನೇ

ಎಂದು ಮಹಾಕವಿ ಪಂಪನೇ ಹೇಳಿದ್ದಾನೆ. ಅಂದರೆ ಯುದ್ಧದಲ್ಲಿ ಜೋಳದ(ಅನ್ನದ, ರಾಜನ) ಋಣವನ್ನು ತೀರಿಸಿದವನೇ ನಿಜವಾದ ಗಂಡು, ತೀರಿಸದವನು ಅವನೆಂತಹ ಗಂಡಸು, ಎಂತಹ ಶೂರ ಎಂದು ಕೇಳಿದ್ದಾನೆ ಪಂಪ. ಇದು ಜೋಳದ ಪ್ರಾಚೀನತೆಯನ್ನು ತೋರಿಸುತ್ತದೆ.

ಅಗ್ಗಕ್ಕೆ ದೊರಕುವ ಅಕ್ಕಿ ಎಲ್ಲೆಡೆ ತನ್ನ ನೆಲೆ ಕಂಡುಕೊಳ್ಳತೊಡಗಿದೆ. ನಂತರ ಅದರ ಪ್ರಮಾಣ ಜೋಳದಲ್ಲಿ ಹೆಚ್ಚುತ್ತಾ ಹೋಗಿ ಒಂದು ದಿನ ಜೋಳ ಮಾಯವಾಗಿ ಅಕ್ಕಿ ರೊಟ್ಟಿಗೆ ಬಂದು ನಿಲ್ಲುವ ದಿನಗಳು ದೂರವಿಲ್ಲವೆಂಬುದು ನನ್ನ ಆತಂಕ. ಯಾವುದೇ ರಸಗೊಬ್ಬರ, ನೀರು ಬೇಡದೇ ಕೇವಲ ಅಲ್ಪ ಮಳೆ, ಹವಾಮಾನದ ಮೇಲೆ ಬರುವ ಜೋಳದ ಬೆಳೆ ಎಲ್ಲಿ, ಅಪಾರ ಪ್ರಮಾಣದ ನೀರು ರಸಗೊಬ್ಬರ ಬೇಡುವ ಅಕ್ಕಿ, ಗೋಧಿಯ ಬೆಳೆಗಳೆಲ್ಲಿ. ಆರೋಗ್ಯದ ದೃಷ್ಟಿಯಿಂದಲೂ ಜೋಳ, ರಾಗಿಯಷ್ಟು ಶ್ರೇಷ್ಠ ಆಹಾರಧಾನ್ಯಗಳಿಲ್ಲ ಎಂದು ದೃಢಪಟ್ಟಿದೆ. ಹೀಗಿದ್ದೂ ನಮ್ಮನ್ನು ಸಾಕಿ ಸಲಹುತ್ತ ಬಂದ ಜೋಳ ನಮ್ಮ ಕಣ್ಮುಂದೆ ಅವಸಾನ ಹೊಂದಲು ಬಿಡಬೇಕೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ತಿನ್ನುಣ್ಣುವ ವಿಚಾರದಲ್ಲದರೂ ನಾವು ನಮ್ಮತನ ಕಾಯ್ದುಕೊಳ್ಳಬೇಡವೆ, ಅಥವಾ ಅದೂ ಜಾಗತೀಕರಣಕ್ಕೆ ಬಲಿಯಾಗಬೇಕೆ? ನಮ್ಮದಿನ್ನೂ ಗ್ರಾಮ ಭಾರತ. ನಗರ ಪ್ರದೇಶದ ಸಾಮಾಜಿಕ ಸ್ತರಕ್ಕೂ, ಗ್ರಾಮೀಣ ಪ್ರದೇಶದ ಪರಸ್ಪರ ಅವಲಂಬಿತ ಜೀವನ ಕ್ರಮಕ್ಕೂ ಮೂಲಭೂತ ವ್ಯತ್ಯಾಸ ಇದೆ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಾಗುವ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳ ದೂರಗಾಮಿ ಪರಿಣಾಮ ವ್ಯಾಪಕವಾಗಿರುತ್ತದೆ.

ಇನ್ನೂ ಜೋಳ ಬೆಳೆಯುತ್ತ ರೈತ, ರೈತ ಕಾರ್ಮಿಕರು ಹಾಗೇ ಇರಬೇಕೆ, ಆರ್ಥಿಕವಾಗಿ ಉದ್ಧಾರವಾಗಬೇಡವೇ? ಅವರು ಇನ್ನೂ ಜೋಳವನ್ನೇ ನಂಬಿ ಕೂಡ್ರಬೇಕೆ? ಜೋಳಕ್ಕೆ ವಾಣಿಜ್ಯ ಮೌಲ್ಯ ಎಲ್ಲಿದೆ ಎಂಬ ಪ್ರಶ್ನೆ ಏಳುತ್ತದೆ. ಮನುಷ್ಯನ ಆಹಾರವಾಗಿ ಜೋಳ ಮತ್ತು ರಾಗಿ, ಅಕ್ಕಿ ಮತ್ತು ಗೋಧಿಗಿಂತ ಉತ್ತಮ ಅನ್ನುವುದಾದರೆ, ಜೋಳ ಬೆಳೆಯುವಲ್ಲಿ ಮತ್ತು ಅದನ್ನು ವಾಣಿಜ್ಯ ಬೆಳೆಯನ್ನಾಗಿ ಮಾಡುವಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗುತ್ತದೆ. ನಮ್ಮ ಕೃಷಿ ಪಂಡಿತರು ಇರುವುದಾದರೂ ಏತಕ್ಕೆ? ಅಕ್ಕಿ ಗೋಧಿಯ ಸ್ಥಿತಿ ಮೊದಲು ಹೇಗಿತ್ತು, ಈಗ ಅವು ಹೇಗೆ ಪ್ರಾಬಲ್ಯ ಮೆರೆಯುತ್ತಿವೆ ಎಂಬುದು ನಮ್ಮ ಕಣ್ಮುಂದಿದೆ. ಅದೇ ನಡೆ ಜೋಳ, ರಾಗಿಯದೂ ಏಕಾಗಬಾರದು?

(ಸಾಭಾರ : ಮಯೂರ)

* * *

ಜನಪದ ವ್ಯಕ್ತಿ

ಕೆ.ನಾರಾಯಣಭಟ್ಟ

ಸದ್ವಿಚಾರ ಹರಿಯುವುದಕ್ಕೆ ಯಾವರೀತಿ ಯಾವ ಅಡೆತಡೆಗಳಿಲ್ಲವೊ ಅದೇ ರೀತಿ ಸದ್‌ಕ್ರಿಯೆಗೂ ಕೂಡ. ಜನ್ಮಭೂಮಿ ದಕ್ಷಿಣಕನ್ನಡವಾದರೂ ಕರ್ಮಭೂಮಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ. ಸದ್ವಿಚಾರ ಮತ್ತು ಸದ್‌ಕ್ರಿಯೆಯ ಈ ಅನುಪಮ ಶಕ್ತಿಗಳಿಗೆ ಸಾಕಾರ ಮೂರ್ತಿಯಾಗಿ ನಮ್ಮೆಲ್ಲರ ಮಧ್ಯೆ ಕೆ.ನಾರಾಯಣಭಟ್ಟರಿದ್ದಾರೆ. ಅವರಿಗೆ ೭೩ ವರ್ಷವೆಂದು ನಾವು ಕಷ್ಟ ಪಟ್ಟು ತಿಳಿಯಬೇಕಾಗುತ್ತದೆ. ಏಕೆಂದರೆ ಅವರ ಕುಶಾಗ್ರಮತಿ, ಅವರ ಕ್ರಿಯಾಶೀಲತೆ ಅವರ ಕಾರ್ಯೋತ್ಸಾಹ, ಅವರ ಭವ್ಯ ಕನಸುಗಳನ್ನು ತಿಳಿದವರಿಗೆ ಅವರು ೩೭ ವರ್ಷದ ಯುವಕ. ಈ ಮಾತನ್ನು ನೀವು ನಂಬುವುದಿಲ್ಲವಾದರೆ ಹೊಸಪೇಟೆಗೆ ಹೋಗಿ ಅವರನ್ನು ಭೇಟಿಮಾಡಿ. ಕರ್ನಾಟಕದ ಹಿರಿಯ ಸರ್ವೋದಯ ಕಾರ್ಯಕರ್ತರ ಪಂಕ್ತಿಯಲ್ಲಿ ನಾರಾಯಣಭಟ್ಟ ಅಗ್ರಗಣ್ಯ. ಬೇರೆಲ್ಲ ಸರ್ವೋದಯ ಕಾರ್ಯಕರ್ತರು ಗಾಂಧಿಯನ್ನು ವಿನೋಬಾರವರನ್ನು ಅಥವಾ ಜೆ.ಪಿ.ಯವರನ್ನು ಮೈಗೂಡಿಸಿಕೊಂಡಿದ್ದಾರೆ. ನಾರಾಯಣಭಟ್ಟರು ಏಕಕಾಲಕ್ಕೆ ಗಾಂಧೀ, ವಿನೋಬಾ, ಜೆ.ಪಿ.ಯವರ ವಿಚಾರ ಮೈಗೂಡಿಸಿಕೊಂಡಿದ್ದಾರೆ. ಆದ್ದರಿಂದಲೇ ಅವರಲ್ಲಿ ಗಾಂಧೀಯವರ ವೈಚಾರಿಕ ಬದ್ಧತೆ ಜೆ.ಪಿ.ಯವರ ಕ್ರಾಂತಿ ವಿಚಾರ ಹಾಗೂ ವಿನೋಬಾರ ಅಧ್ಯಯನಶೀಲತೆ ಒಂದು ಗೂಡಿ ನಾರಾಯಣಭಟ್ಟರು ೭೩ರ ವಯಸ್ಸಿನಲ್ಲೂ ಪಾದರಸದಂತೆ ಹರೆಯದ ಉತ್ಸಾಹದಿಂದ ಕರ್ಮಯೋಗಿಯಾಗಿದ್ದಾರೆ. ಶಿಕ್ಷಕರಾಗಿ ಸೇವೆ ಸಲ್ಲಿಸಿ ತಮ್ಮ ಸಾವಿರಾರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇಂದಿಗೂ ಆದರ್ಶ ವ್ಯಕ್ತಿಯಾಗಿ ಚಿರಸ್ಥಾಯಿಯಾಗಿದ್ದಾರೆ. ನಾರಾಯಣಭಟ್ಟರ ಶಿಷ್ಯವರ್ಗ ಅವರ ಅಭಿಮಾನಿಗಳ ವರ್ಗ ದೊಡ್ಡದೇ ಆಗಿದೆ. ಆದ್ದರಿಂದ ಅವರ ಬಗ್ಗೆ ಹೊರತಂದ ಅಭಿನಂದನಾ ಗ್ರಂಥದ ಹೆಸರು 'ಸೇವಾಕಾಂಕ್ಷಿ'. ಅಂದರೆ ಸೇವೆಗಾಗಿ ಎಂದೂ ದಣಿಯದ ಜೀವ. ಅತ್ಯಂತ ಸರಳ ಖಾದಿ ಬಟ್ಟೆಯನ್ನು ಧರಿಸುವ ನಾರಾಯಣಭಟ್ಟರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಸಹನೆ ಮತ್ತು ಸಹೃದಯತೆ ಬೇಕು. ಏಕೆಂದರೆ ಮೊದಲಸಲ ನೋಡುವ ಯಾರಿಗೇ ಆಗಲಿ ನಾರಾಯಣಭಟ್ಟರು ಅತ್ಯಂತ ಸಾಮಾನ್ಯನಂತೆ ಕಾಣುತ್ತಾರೆ. ಅವರ ವಿಚಾರ, ತ್ಯಾಗ, ಸಾಧನೆ, ಇತ್ಯಾದಿಗಳನ್ನು ತಿಳಿಯಬೇಕಾದರೆ ಸ್ವಲ್ಪ ಪ್ರಯಾಸಪಡಬೇಕು. ಈ ಪ್ರಯಾಸದ ನಂತರ ಅವರ ಅದ್ಭುತ ವ್ಯಕ್ತಿತ್ವ ಒಳಗಣ್ಣಿಗೆ ಕಾಣುತ್ತದೆ. ಈ ಸೇವಾಕಾಂಕ್ಷಿಗೆ ಸೋಲೆಂಬುದಿಲ್ಲ, ನಿರಾಶೆ ಎಂಬುದಿಲ್ಲ. ಗಾಂಧೀ–ವಿನೋಬಾ–ಜೆ.ಪಿ ಮುಂತಾದವರ ಕನಸುಗಳೆಲ್ಲ ಮಣ್ಣುಪಾಲಾಗುತ್ತಿವೆ ಎಂದು ಸಾಮಾನ್ಯವಾಗಿ ಅಭಿಪ್ರಾಯಪಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಆ ಮೂರು ತ್ರಿಮೂರ್ತಿಗಳ ವಿಚಾರಗಳೇ ತಾರಕವೆಂದು ಆತ್ಮವಿಶ್ವಾಸದಿಂದ ಕೆಲಸಮಾಡುತ್ತಿದ್ದಾರೆ ನಾರಾಯಣಭಟ್ಟರು. ಎಲ್ಲ ಕೆಲಸಗಳಲ್ಲಿ ಮತ್ತು ಕಷ್ಟ ಪರಂಪರೆಗಳಲ್ಲಿ ಭಾಗಿಯಾಗಿ ಭುಜಕ್ಕೆ ಭುಜಕೊಟ್ಟು ನಿಂತಿದ್ದಾರೆ ಅವರ ಪತ್ನಿ ಪದ್ಮಾಕ್ಷಮ್ಮ. ನಾರಾಯಣಭಟ್ಟರು ತಮ್ಮ ಕರುಣಾ ಪ್ರಕಾಶನದಿಂದ ಅನೇಕ ಸದ್‌ಗ್ರಂಥ ಪ್ರಕಟಿಸಿ ಸರ್ವೋದಯ ಸಾಹಿತ್ಯದ ಸಿರಿವಂತಿಕೆ ಹೆಚ್ಚಿಸಿದ್ದಾರೆ. ನಾಲ್ಕು

ಹೆಣ್ಣು ಮಕ್ಕಳ ತಂದೆಯಾಗಿದ್ದರೂ ಸಾರ್ವಜನಿಕ ಜೀವನದ ತಮ್ಮ ತನ್ಮಯತೆಯಲ್ಲಿ ಸಂಸಾರದ ಜವಾಬ್ದಾರಿಯನ್ನು ಎಂದೂ ಮರೆತವರಲ್ಲ. ಜಯಪ್ರಕಾಶ್ ನಾರಾಯಣ್ ಭವನ ಕಟ್ಟಲು ಪ್ರಯತ್ನಿಸಿದರು. ಆದರೆ ಅವರ ಕನಸು ಪೂರ್ಣಗೊಳ್ಳದೇ ಇರುವುದು ಅವರ ನೋವಿಗೆ ಕಾರಣವಾಗಿದೆ. ಅವರ ಸದ್‌ಭಾವನಾ ಗ್ರಂಥ ಸೇವಾಕಾಂಕ್ಷಿಯಲ್ಲಿ ಪ್ರಕಟವಾಗಿರುವ ಲೇಖನಗಳ ಶೀರ್ಷಿಕೆಯ ಮೇಲೆ ಕಣ್ಣು ಹಾಯಿಸಿದರೆ ಭಟ್ಟರ ವ್ಯಕ್ತಿತ್ವದ ಹಲವಾರು ರೂಪಗಳು ನಮ್ಮ ಭಾವನೆಗೆ ಒಳಪಡುತ್ತದೆ. ಉದಾಹರಣೆ ಇಲ್ಲಿವೆ:– 'ಪ್ರಚಾರ ಬಯಸದ ಗಾಂಧೀವಾದಿ', 'ಹೊಸಪೇಟೆಯ ಗಾಂಧೀ' ಜಯಪ್ರಕಾಶನಗರದ ಸಂತ', 'ಸಾಹಿತ್ಯ ಕೃಷಿಕ', 'ಕಾಯಕಯೋಗಿ', 'ಚಲಿಸುವ ವ್ಯಾಕರಣಗ್ರಂಥ', 'ಮಾನವೀಯತೆಯ ಪ್ರತೀಕ', 'ನೋವುನುಂಗಿದ ನಂಜುಂಡ', 'ಗಾಂಧೀ ಯುಗದ ಕೊನೆಯ ಕೊಂಡಿ'. ಕೊನೆಯ ಈ ಲೇಖನವೊಂದು 'ಸೇವಾಕಾಂಕ್ಷಿ'ಯಾದ ಸದ್‌ಭಾವನಾ ಗ್ರಂಥಕ್ಕೆ ಉಚಿತವೆಂದು ಅನಿಸುವುದಿಲ್ಲ. ಏಕೆಂದರೆ ನಾರಾಯಣಭಟ್ಟರ ಕರ್ಮಭೂಮಿ ಹೊಸಪೇಟೆಯಲ್ಲಿ ಗಾಂಧೀವಿಚಾರ ಒಪ್ಪಿಕೊಂಡಿರುವ ದೊಡ್ಡ ಪಡೆಯೇ ಇದೆ. ಇಂದಲ್ಲ ನಾಳೆ ಆ ಪಡೆಯಿಂದ ಇನ್ನೊಬ್ಬ ಗಾಂಧಿಯೋ, ವಿನೋಬಾನೋ ಅಥವಾ ಜೆ.ಪಿ.ಯೋ ಹುಟ್ಟುವ ಎಲ್ಲ ಸಾಧ್ಯತೆಗಳಿವೆ. ಕ್ರಾಂತಿಯ ಅಂಥ ಹರಿಕಾರ ಹುಟ್ಟುವುದಕ್ಕೆ ಸಹಾಯಕವಾಗುವ ಭೂಮಿಕೆಯನ್ನು ನಾರಾಯಣಭಟ್ಟರು ಸಿದ್ಧಪಡಿಸಿದ್ದಾರೆ. ನಿರಾಶರಾಗುವುದಕ್ಕೆ ಯಾವುದೇ ಅವಕಾಶವಿಲ್ಲ. ಶ್ರೀ ನಾರಾಯಣಭಟ್ಟರ ಸಂತತಿ ಬೆಳೆಯಲಿ ಮತ್ತು ಉಳಿಯಲಿ.

– *ಸು.ಕೌ*

* * *

ಸಂತಾಪ...

ಕರ್ನಾಟಕ ಸಾರಸ್ವತ ಲೋಕದ ಮತ್ತು ಶಿಕ್ಷಣ ಕ್ಷೇತ್ರದ ಮತ್ತು ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜರಾಗಿದ್ದ ಮತ್ತೂರು ಕೃಷ್ಣಮೂರ್ತಿಯವರು ಅಕ್ಟೋಬರ್–೬–೨೦೧೧ರಂದು ನಿಧನರಾದರು. 'ಕುರ್ವನ್ನೇವಹ ಕರ್ಮಾಣಿ ಜೀಜೀ ವಿಶೇತ್ ಶತಂ ಸಮಾಃ' ಎಂಬ ಈಶಾವಸ್ಯೋಪನಿಷತ್ತಿನ ಆಶಯದಂತೆ ಜೀವನ ನಡೆಸಿದ ಮತ್ತೂರು ಕೃಷ್ಣಮೂರ್ತಿಯವರ ನಿಧನಕ್ಕಾಗಿ 'ಜನಪದ ವಿಚಾರ' ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಚಾಮರಾಜನಗರದಲ್ಲಿ ದೀನಬಂಧು, ಮೈಸೂರು ನಗರದಲ್ಲಿ ಶಕ್ತಿಧಾಮ ಕೇಂದ್ರದ ಮೂಲಕ ಸಮಾಜಸೇವೆ ಮಾಡುತ್ತಿರುವ ಜಯದೇವ್‌ರವರು ಟ್ರಸ್ಟಿಗೆ ಭೇಟಿನೀಡಿದರು.

ಟ್ರಸ್ಟಿನ ಹಿರಿಯ ಅಭಿಮಾನಿ ದಿ॥ಜಿ.ವಿ.ನಾರಾಯಣಮೂರ್ತಿಯವರ ಮಗ, ಡಾ॥ನ. ದಯಾನಂದ ಮತ್ತು ಪತ್ನಿ ಶ್ಯಾಮಲಾರವರು ಭೇಟಿನೀಡಿದರು.

ಸ್ಥಳೀಯ ಮತ್ತು ಸಾಮಾನ್ಯರು ಅನುಭವಿಸುವ ಭ್ರಷ್ಟಾಚಾರದ ವಿರುದ್ಧ ಕೆಲಸಮಾಡಬೇಕೆಂಬ ದೃಷ್ಟಿಯಿಂದ ಚಾಮರಾಜನಗರದಲ್ಲಿ ಸ್ಥಾಪಿತವಾದ 'ಜಾಗೃತ ಭಾರತ' ಎಂಬ ಸಂಸ್ಥೆಯನ್ನು ಗಾಂಧೀ ಜಯಂತಿಯಂದು ಟ್ರಸ್ಟಿನ ಅಧ್ಯಕ್ಷರು ಉದ್ಘಾಟಿಸಿದರು ಹಾಗೂ ಪಾಂಡವಪುರದಲ್ಲಿ ಹಲಗೇಗೌಡ ಸ್ಮಾರಕ ಟ್ರಸ್ಟ್ ಮತ್ತು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಗಾಂಧೀ ಜಯಂತಿಯಲ್ಲೂ ಕೂಡ ಭಾಗವಹಿಸಿದರು.

ಟ್ರಸ್ಟಿನ ಅಭಿಮಾನಿ ಬೆಂಗಳೂರಿನಲಲಿರುವ ಪ್ರೊ.ವಿ.ಎಸ್.ಶ್ರೀಧರ್‌ರವರು ತಮ್ಮ ಮಗಳ ಮದುವೆಯನ್ನು ನೆರವೇರಿಸಿದ ಸಂದರ್ಭದಲ್ಲಿ ತಮ್ಮ ಬಂಧುಗಳು ಮತ್ತು ಮಿತ್ರರಿಗೆಲ್ಲ ಟ್ರಸ್ಟಿನ 'ನೆನೆಬನ' ಕಾರ್ಯಕ್ರಮ ಪರಿಚಯಿಸಿ ಆ ಯೋಜನೆಗೆ ಸಹಾಯ ಮಾಡುವಂತೆ ಪ್ರೋತ್ಸಾಹಿಸಿದರು. ಅಲ್ಲದೆ ಟ್ರಸ್ಟಿನಲ್ಲಿ ಉತ್ಪಾದನೆಯಾದ ಖಾದಿಬಟ್ಟೆಯನ್ನು ಮದುವೆ ಸಂದರ್ಭದಲ್ಲಿ ಖರೀದಿಸಿ ಪ್ರೋತ್ಸಾಹಿಸಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಪದವಿಯೋತ್ತರ ಸುಮಾರು ಮೂವತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಟ್ರಸ್ಟಿಗೆ ಭೇಟಿಕೊಟ್ಟು ಟ್ರಸ್ಟಿನ ಚಟುವಟಿಕೆಗಳನ್ನು ಪರಿಚಯಮಾಡಿಕೊಂಡರು.

ಅಕ್ಟೋಬರ್ ೧೧ ಜೆ.ಪಿ.ಯವರ ಜನ್ಮದಿನ. ಆ ದಿನ ಮಂಡ್ಯದಲ್ಲಿ ನಡೆದ ಸಮಾರಂಭದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದ್ದರು.

ದತ್ತು ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಸಂಧ್ಯಾ ಎಂಬ ಬಾಲಕಿಯನ್ನು ದತ್ತುಕೊಡಲಾಯಿತು.

'ನೆನೆಬನ' ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ನಡೆದಿದೆ. ಇತ್ತೀಚಿಗೆ ಮಳೆ ಬಂದದ್ದರಿಂದ ಅನುಕೂಲವಾಗಿದೆ.

ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ಮೈಸೂರಿನಲ್ಲಿರುವ ಡಾ॥ಮನೋಹರ್‌ರವರ ಮನೆಯಲ್ಲಿ ನಡೆಯಿತು. ಕಾರ್ಯದರ್ಶಿಯವರ ಕಾರ್ಯವರದಿ ಮತ್ತು ಲೆಕ್ಕಪತ್ರವನ್ನು ಪರಿಶೀಲಿಸಲಾಯಿತು. ಮೇಲುಕೋಟೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಪು.ತಿ.ನ. ರಂಗಮಂದಿರದ ಆವರಣದಲ್ಲಿ ಟ್ರಸ್ಟಿನ ಖಾದಿ ಭಂಡಾರದ ಇನ್ನೊಂದು ಮಳಿಗೆಯನ್ನು ಪ್ರಾರಂಭಿಸಲು ತೀರ್ಮಾನಿಸಲಾಯಿತು.

೨೦೧೧-ಅಕ್ಟೋಬರ್ ಮಾಹೆಯ ದಾನಿಗಳು

ಕುಮಾರಿ ಜಾಹ್ನವಿ ಮತ್ತು ಚಿ.ಅನಿಕೇತ್-ಮೇಲುಕೋಟೆ;
ರಚನಾ-ಮೈಸೂರು;
ಶ್ರೀ ಎನ್.ಮೋಹನ್‌ಪ್ರಸಾದ್, ಶ್ರೀ ಕೆ.ಬಿ.ನಾರಾಯಣ್-ಬೆಂಗಳೂರು ಇವರಿಗೆ
ಮತ್ತು
ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೬

- ಸುರೇಂದ್ರ ಕೌಲಗಿ



ಜನಪದ ನಿಲಯದ ಮುಂದಿರುವ ರಸ್ತೆ ಬದಲಾಗುತ್ತಿರುವ ಮೇಲುಕೋಟೆಯ ಜೀವನಕ್ಕೆ ಕನ್ನಡಿ ಹಿಡಿದಂತಿದೆ. ಕಳೆದು ಹೋದ ದಿನಗಳ ಸ್ಮರಣೆಯನ್ನು ತಂದು ಕೊಡುವಂಥದ್ದಾಗಿದೆ. ಅಂಥ ಸ್ಮರಣೆಯನ್ನು ತಂದುಕೊಡುವ ವ್ಯಕ್ತಿ ಕೃಷ್ಣೇಗೌಡ. ಈಗ ಆತನಿಗೆ ಅರವತ್ತು ವರ್ಷಗಳಾಗಿರಬಹುದು. ಅತನನ್ನು ಮೊದಲು ನೋಡಿದ್ದು ಆತ ೧೫-೧೬ ವರ್ಷಗಳ ಯುವಕನಾಗಿದ್ದಾಗ. ಈಗ ತನ್ನ ಜೀವಮಾನದ ಮುಸ್ಸಂಜೆಯಲ್ಲಿ ಕೂಡ ಆತ ಕಣ್ಣಿಗೆ ಬೀಳುತ್ತಾನೆ. ಹೆಚ್ಚು ಸಲ ಆತನನ್ನು ಕಾಣುವುದು ಸೂರ್ಯಾಸ್ತದ ಸಮಯದಲ್ಲಿ. ತನ್ನ ಹೊಲಗೆಲಸ ಮುಗಿಸಿ ಮನೆಗೆ ಹಿಂದಿರುಗುವಾಗ ಅಡುಗೆ ಮಾಡಲೆಂದು ಅಥವಾ ನೀರು ಕಾಯಿಸಲೆಂದು ಹೊಲದಲ್ಲಿ ಸಿಕ್ಕ ಕಾಷ್ಠವನ್ನು ಹಗ್ಗದಿಂದ ಕಟ್ಟಿ ತಲೆಯ ಮೇಲೆ ಇಟ್ಟುಕೊಂಡು ಕುಂಟುತ್ತಾ ಬರುವುದು ಸಾಮಾನ್ಯ ದೃಶ್ಯ. ಕೃಷಿಕನಾಗಿರುವುದರಿಂದ ಆತನ ಮೈಯಲ್ಲಿ ಸ್ವಲ್ಪವೂ ಬೊಜ್ಜಿಲ್ಲ. ಸಣಕಲಾಗಿಯೇ ಇದ್ದಾನೆ. ಕೆಲವೊಂದು ಸಲ ತಲೆಯ ಮೇಲೆ ಒಣ ಹುಲ್ಲಿನ ಕಂತೆ ಇರುತ್ತದೆ. ಸಾಮಾನ್ಯವಾಗಿ ಆತನು ಒಂಟಿಯಾಗಿಯೇ ಬರುತ್ತಾನೆ. ಗುಂಪಿನಲ್ಲಿ ಅಥವಾ ಬೇರೆಯವರ ಜೊತೆಯಲ್ಲಿ ಕಂಡದ್ದು ವಿರಳ. ಆದರೆ ಆತನನ್ನು ಮಾತನಾಡಿಸಿದಾಗಲೆಲ್ಲ ನಗುತ್ತಾ ಮಾತನಾಡುವುದು ಅವನ ಸ್ವಭಾವವೇ ಆಗಿದೆ. ಗಂಡು ಮಕ್ಕಳಿಬ್ಬರು ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾರೆ. ಕೃಷ್ಣೇಗೌಡನಿಗೆ ಅವರು ಮಾಡುವ ಕೆಲಸ ಯಾವುದೆಂದು ಗೊತ್ತಿಲ್ಲ. ಈ ವಿಷಯವಾಗಿ ಆತನನ್ನು ಕೇಳಿದರೆ 'ನಮಗೇಕೆ ಆ ಸುದ್ದಿ' ಎಂದು ಉತ್ತರಿಸುತ್ತಾನೆ. ಅವರು ಯಾವಾಗಲಾದರೂ ಮೇಲುಕೋಟೆಗೆ ಬಂದಾಗ ಸಾವಿರ ಅಥವಾ ಎರಡು ಸಾವಿರ ಕೊಟ್ಟು ಹೋಗುತ್ತಾರೆ. ಈತನು ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಯಾವುದೋ ಸಭೆಯಲ್ಲಿ ಭಾಗವಹಿಸಲು ಸ್ಥಳೀಯ ಕಾಂಗ್ರೆಸ್ ಮುಖಂಡರ ಒತ್ತಾಸೆ ಮೇರೆಗೆ ಬಸ್ಸಿನಲ್ಲಿ ಹೋಗಿ ಬಂದದ್ದೇ ಕೃಷ್ಣೇಗೌಡನ ಇತ್ತೀಚಿನ ಬೆಂಗಳೂರು ಭೇಟಿ. ಈ ಮಧ್ಯೆ ಒಂದೆರಡು ಬಾರಿ ಮದುವೆಯ ನಿಮಿತ್ತ ಬೆಂಗಳೂರಿಗೆ ಹೋಗಿದ್ದರೂ ಮಕ್ಕಳ ಮನೆಯ ವಿಳಾಸ ಸರಿಯಾಗಿ ಗೊತ್ತಿಲ್ಲದೆ ಇರುವುದರಿಂದ ಮತ್ತು ಆ ಮಹಾನಗರದಲ್ಲಿ ಓಡಾಡುವುದು ಕಷ್ಟವೆನಿಸಿದ್ದರಿಂದ ಮಕ್ಕಳ ಮನೆಗೆ ಹೋಗುವ ವಿಚಾರವನ್ನು ಕೈಬಿಟ್ಟಿದ್ದಾನೆ. ಒಬ್ಬ ಮಗಳು ಅತ್ತೆಯ ಮನೆಯಲ್ಲಿದ್ದಾಳೆ. ಮೊಮ್ಮಕ್ಕಳ ಕಾರಣದಿಂದ ಅವಳ ಮನೆಗೆ ಹೋಗುವ ಬಳಕೆಯನ್ನು ಇರಿಸಿಕೊಂಡಿದ್ದಾನೆ. ಕೃಷ್ಣೇಗೌಡ ಎಂದೂ ಯಾವ ಕಾರಣಕ್ಕೂ ಚಿಂತೆ ಮಾಡಿದಂತೆ

ಕಾಣಲಿಲ್ಲ. ಸರ್ಕಾರದ ಸಹಾಯ ಪಡೆದಿರುವ ಬಗ್ಗೆ ವಿಚಾರಿಸಲಾಗಿ ಆತ ಅಂಥ ಯಾವ ಸಹಾಯವನ್ನೂ, ಸಾಲವನ್ನೂ ಪಡೆದಿಲ್ಲದಿರುವುದಾಗಿ ಹೇಳಿದ. 'ಸ್ವಾಮಿ, ನನಗೇಕೆ ಆ ಸಾಲಾ ಗೀಲಾ ಎಲ್ಲಾ, ದೇವರು ಕೊಟ್ಟಿರುವಷ್ಟರಲ್ಲಿಯೇ ಜೀವನ ನಿಭಾಯಿಸಿಕೊಂಡು ಹೋಗುತ್ತೇನೆ' ಎಂಬುದಾಗಿ ಹೇಳುತ್ತಾನೆ. ಮೇಲುಕೋಟೆ ಕೆರೆಯ ಅಂಚಿನಲ್ಲಿ ಆತನ ಜಮೀನಿದೆ. ಹಲವಾರು ತೆಂಗಿನ ಮರಗಳಿವೆ. ಅವನ ಹೊಲದ ಹಿಂಭಾಗ ಮೇಲುಕೋಟೆಯ ಯದುಗಿರಿ ಇದೆ. ಮುಂಭಾಗ ವಿಶಾಲವಾದ ದಳವಾಯಿ ಕೆರೆ. ಇದರಿಂದಾಗಿ ಆತನ ಜಮೀನಿಗೆ ವಿಶಿಷ್ಟವಾದ ಸೌಂದರ್ಯವಿದೆ. ಕೆರೆಯ ಏರಿಯ ಮೇಲಿಂದ ನೋಡಿದರೆ ಒಂದು ದ್ವೀಪದಂತೆ ಕಾಣುತ್ತದೆ. ದಿನಾಲೂ ಅಷ್ಟು ದೂರದಿಂದ ನಡೆದು ಮೆಟ್ಟಿಲುಗಳನ್ನು ಹತ್ತಿ ಮೇಲುಕೋಟೆಗೆ ಬರುವುದು-ಹೋಗುವುದು ಆತನಿಗೆ ಸಹಜವಾದ ನಡಿಗೆಯಾಗಿದೆ. ಆತನ ತಂದೆ ಮತ್ತು ಅಣ್ಣ ಸಹ ಟ್ರಸ್ಟಿಗೆ ಬಲ್ಲವರಾಗಿದ್ದರು. ಓರ್ವ ಬಾಲಕನಿದ್ದಾಗಿನಿಂದ ಇಂದು ಆತ ದೊಡ್ಡವನಾಗಿರುವವರೆಗೆ ಗಮನಿಸಿದಾಗ ಎಷ್ಟೊಂದು ಕಾಲ ಕಳೆದು ಹೋಯಿತೆಂದು ಅನಿಸುತ್ತದೆ. ಆದರೆ ಮೇಲುಕೋಟೆಯಲ್ಲಿ ಎಷ್ಟೊಂದು ಆಧುನಿಕತೆ ಬಂದಿದ್ದರೂ ಸಹ ನಮ್ಮ ಕೃಷ್ಣೇಗೌಡ ಹಳೆಯ ರೀತಿಯಲ್ಲಿಯೇ ಜಗತ್ತಿನ ಯಾವುದೇ ಬದಲಾವಣೆಗಳ ಬಗ್ಗೆ ಅರಿಯದ ಮುಗ್ಧನಾಗಿಯೇ ಇರುವುದು ಸೋಜಿಗವೆನಿಸುತ್ತದೆ. ಅತಿಯಾದ ಆಸೆಯನ್ನು ಬೆಳೆಸಿಕೊಳ್ಳದೇ ಹಾಸಿಗೆ ಇದ್ದಷ್ಟು ಕಾಲುಚಾಚುವ ಮತ್ತು ಶ್ರಮವೇ ತನ್ನ ಧರ್ಮವೆಂದು ನಂಬಿರುವ ಪುರಾತನ ಭಾರತೀಯ ಸಂಸ್ಕೃತಿಯ ಉದಾಹರಣೆಯಾಗಿ ಕೃಷ್ಣೇಗೌಡ ಸೂರ್ಯಾಸ್ತದ ಸಮಯದಲ್ಲಿ ಕುಂಟುತ್ತಾ ಹೋಗುವುದನ್ನು ನೋಡುವುದೇ ಒಂದು ಸಂತೋಷ. ಕೃಷ್ಣೇಗೌಡನಿಗೆ ದೇವರು ಒಳ್ಳೆಯ ಆಯಸ್ಸು ಕೊಡಲಿ.

* * *

ಸನ್ಮಾನ್ಯರಿಂದ...

ಅಕ್ಟೋಬರ್ ೨೦೧೧ರ 'ಜನಪದ ವಿಚಾರ' ತಲುಪಿತು. ಜನಪದ ಸೇವಾ ಟ್ರಸ್ಟ್‌ನ ಹಳೆಯ ಅಭಿಮಾನಿಯಾದ ನನಗೆ ಅಲ್ಲಿಯ ಇತ್ತೀಚಿನ ವಿದ್ಯಮಾನವಾದ ಭಾಗೀರಥಿಯ ಸ್ಥಳಾಂತರ ತಿಳಿದು ಹಿಂದಿನ ಹನುಮಂತ, ಬಲರಾಮ, ಕುಮಾರ್ ಇವರೆಲ್ಲ ನೆನೆಪಿಗೆ ಬಂದು ಕರುಣಾಗೃಹದ ಹಳೆಯ ಕೊಂಡಿಗಳೆಲ್ಲ ಕಳಚಿ ಹೋಗುತ್ತ ಕರುಣಾಗೃಹ ಈಗೀಗ ಅಂಗವಿಕಲವಾಗುತ್ತಿದೆಯೇನೊ ಎಂದು ತಿಳಿದು ನೋವಾಯಿತು.

– *ಖಾದ್ರಿ ವೆಂಕಟ ಶ್ರೀನಿವಾಸನ್, ಮೈಸೂರು*

(ಕಾಲಾಯ ತಸ್ಮೈ ನಮಃ – ಸಂಪಾದಕ)

ಸರ್ವೋದಯ ಆಂದೋಲನದ ಮುನ್ನಡೆ

ಹಾಸನ ಜಿಲ್ಲಾ ಸರ್ವೋದಯ ಮಿತ್ರಮಂಡಲಿ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ೨೦-೧೦-೨೦೧೧ರಿಂದ ಹಾಸನ ಜಿಲ್ಲೆಯಲ್ಲಿ ಶಾಂತಿಯಾತ್ರೆ ಕೈಗೊಳ್ಳಲಾಗಿತ್ತು. ಈ ಯಾತ್ರೆಯು ಹಾಸನದಿಂದ ಪ್ರಾರಂಭವಾಗಿ ಧರ್ಮಸ್ಥಳದಲ್ಲಿ ಮುಕ್ತಾಯವಾಯಿತು. ಈ ಯಾತ್ರೆಗೆ ಡಾ॥ ವೀರೇಂದ್ರ ಹೆಗ್ಗಡೆಯವರು ತಮ್ಮ ಸಹಕಾರ ಕೊಟ್ಟರು. ಯಾತ್ರೆ ಹೋದೆಡೆಯಲ್ಲೆಲ್ಲಾ ಅಭೂತಪೂರ್ವ ಸ್ವಾಗತ ದೊರೆಯಿತು. ಬಹಳಷ್ಟು ಜನ ಸೇರಿ ವಿಷಯ ತಿಳಿದುಕೊಂಡರು. ಸಕಲೇಶಪುರ ಮತ್ತು ಕುಕ್ಕೆ ಸುಬ್ರಮಣ್ಯಗಳಲ್ಲಿ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಶಾಂತಿಯಾತ್ರೆಯ ಸಂಚಾಲಕರಾಗಿ ಶ್ರೀ ಎಚ್.ವಿ.ವಿಜಯಸಾರಥಿ ಕಾರ್ಯನೆರವೇರಿಸಿದರು. ಸರ್ವೋದಯ ಲೋಕಸೇವಕರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಚ್.ಎಮ್.ಶಿವಣ್ಣನವರು ಈ ಯಾತ್ರೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಕರ್ನಾಟಕ ಸರ್ವೋದಯ ಮಂಡಲಿಯ ಸಭೆ ೧೮-೧೦-೧೧ರಂದು ನಡೆಯಿತು. ಅಕ್ಟೋಬರ್ ೩೦ರಂದು ಕರ್ನಾಟಕದ ಹಿರಿಯ ಸರ್ವೋದಯ ಕಾರ್ಯಕರ್ತರಾಗಿದ್ದ ಸತ್ಯವ್ರತರ ಜನ್ಮದಿನವನ್ನು ಆಚರಿಸಲು ನಿರ್ಧರಿಸಲಾಯಿತು. ಸತ್ಯವ್ರತರ ಜನ್ಮದಿನವನ್ನು ಸರ್ವೋದಯ ಕಾರ್ಯಕರ್ತರ ದಿನವನ್ನಾಗಿ ಆಚರಿಸಬೇಕೆಂದು ಅಭಿಪ್ರಾಯ ಪಡಲಾಯಿತು. ಅಂದರೆ ಈಗಿರುವ ಸರ್ವೋದಯ ಕಾರ್ಯಕರ್ತರನ್ನು ಜ್ಞಾಪಿಸಿಕೊಳ್ಳುವುದು, ಹೊಸ ಸರ್ವೋದಯ ಕಾರ್ಯಕರ್ತರಿಗೆ ಉತ್ಸಾಹ ತುಂಬುವುದು ಮುಖ್ಯ ಉದ್ದೇಶ್ಯ. ಈ ಸಮಾರಂಭದ ಮುಖ್ಯ ಭಾಷಣಕಾರರಾಗಿ ಡಾ॥ ಸಂದೀಪ್ ಶಾಸ್ತ್ರಿಯವರು ಆಗಮಿಸುವರು. ಅವರು 'ಸರ್ವೋದಯ ದೃಷ್ಟಿಯಲ್ಲಿ ಜಾಗತೀಕರಣ' ಎಂಬ ವಿಷಯವಾಗಿ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಸಂವಿಧಾನ ತಜ್ಞರಾದ ಪ್ರೊ॥ ರವೀಂದ್ರಕುಮಾರ್, ಡಾ॥ ಪದ್ಮಾ ಮತ್ತು ಶ್ರೀಮತಿ ಕೃಷ್ಣಪ್ಪ ಭಾಗವಹಿಸುವರು. ಈ ಕಾರ್ಯಕ್ರಮದಲ್ಲಿ ಸುಮಾರು ೩೦೦ಜನ ಅಭಿಮಾನಿಗಳು ಸೇರುವ ನಿರೀಕ್ಷೆ ಇದೆ. ಸತ್ಯವ್ರತರ ಬಗ್ಗೆ ಮತ್ತು ಸರ್ವೋದಯ ಆಂದೋಲನದ ಬಗ್ಗೆ ಆಸಕ್ತಿ ಇರುವವರು ಬರಬೇಕೆಂದು ಸರ್ವೋದಯ ಮಂಡಲ ಆಹ್ವಾನಿಸಿದೆ.

ನವೆಂಬರ್ ೧೫,೧೬,೧೭ ಈ ದಿನಾಂಕಗಳಲ್ಲಿ ವಿನೋಬಾ ಭಾವೆಯವರ ಪವನಾರ್ ಆಶ್ರಮದಲ್ಲಿ ಪ್ರತಿವರ್ಷದಂತೆ 'ಮಿತ್ರಮಿಲನ' ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ವಿನೋಬಾರವರ ಅಭಿಮಾನಿಗಳು ಭಾಗವಹಿಸಲಿದ್ದಾರೆ. ಇದು ರಾಷ್ಟ್ರಮಟ್ಟದ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ಶ್ರೀ ಎಲ್.ನರಸಿಂಹಯ್ಯ, ಕಾರ್ಯದರ್ಶಿ, ಕರ್ನಾಟಕ ಸರ್ವೋದಯ ಮಂಡಲ ಇವರನ್ನು ಸಂಪರ್ಕಿಸಬಹುದು. ಅವರ ದೂರವಾಣಿ ಸಂಖ್ಯೆ – ೯೮೮೦೮೮೭೧೯೪.

ಇತ್ತೀಚೆಗೆ ಎಲ್.ನರಸಿಂಹಯ್ಯ, ತಿಮ್ಮಾರೆಡ್ಡಿ, ಅಶ್ವತ್ಥನಾರಾಯಣ, ಅರುಣ್‌ಕುಮಾರ್, ಎಂ.ಎಚ್.ಶಿವಣ್ಣ, ಸುಶೀಲಮ್ಮ ಶಿವಣ್ಣ, ಸುರೇಶ್ ಕಲಘಟಗಿ ಇವರುಗಳು ಲೋಕಸೇವಕತ್ವದ ಸದಸ್ಯತ್ವವನ್ನು ಪಡೆದರು.

ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರ ಜನ್ಮದಿನವನ್ನು

೧೧-೧೦-೧೧ರಂದು ಮಂಡ್ಯದಲ್ಲಿ ಎಸ್.ಡಿ.ಜಯರಾಮ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಏರ್ಪಡಿಸಲಾಗಿತ್ತು. ಈ ಸಭೆಯನ್ನು ಉದ್ದೇಶಿಸಿ ಮಂಡಲಿಯ ಅಧ್ಯಕ್ಷರು ಮಾತನಾಡಿದರು. ಈ ಸಭೆಯಲ್ಲಿ ೩೦೦ ಜನ ಭಾಗವಹಿಸಿದ್ದರು.

ಮಂಡ್ಯ ಜಿಲ್ಲಾ ಸರ್ವೋದಯ ಮಂಡಲಕ್ಕೆ ಕೆ.ಪ್ರಹ್ಲಾದರಾವ್, ಎಲ್.ಜಯರಾಮು, ಜಿ.ಬಿ.ಶಿವಣ್ಣ ಇವರುಗಳು ಸರ್ವೋದಯ ಮಿತ್ರರಾಗಿ ಸದಸ್ಯತ್ವ ಪಡೆದರು.

೪೪ನೇ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನ ಈ ವರ್ಷ ತಮಿಳುನಾಡು ರಾಜ್ಯದ ಮಧುರೈ ಎಂಬ ಸುಪ್ರಸಿದ್ಧ ಯಾತ್ರಾಸ್ಥಳದಲ್ಲಿ ನಡೆಯಲಿದೆ. ಈ ಸಮ್ಮೇಳನದ ವ್ಯವಸ್ಥೆಯನ್ನು ತಮಿಳುನಾಡು ಸರ್ವೋದಯ ಮಂಡಲ ಮಾಡಿದೆ.

ಡಿಸೆಂಬರ್ ೨೬ರಂದು ಅಖಿಲ ಭಾರತ ಸರ್ವೋದಯ ಮಂಡಲದ ಕಾರ್ಯಕಾರಿ ಸಮಿತಿಯ ಸಭೆ ಸಂಘದ ಅಧ್ಯಕ್ಷರಾದ ರಾಧಾಭಟ್ ಅಧ್ಯಕ್ಷತೆಯಲ್ಲಿ ನಡೆಯುವುದು. ಸೇವಾಗ್ರಾಮ್ ಮತ್ತು ಫರೂಕಾಬಾದ್‌ನಲ್ಲಿ ನಡೆದ ಸಭೆಗಳ ಠರಾವುಗಳ ಕಾರ್ಯಾನ್ವಯದ ಪರಿಶೀಲನೆ, ಪೂರಕ ಬಜೆಟ್‌ನ ಸ್ವೀಕೃತಿ, ೨೦೧೦-೨೦೧೧ರ ಆಡಿಟ್ ಆದ ಲೆಕ್ಕಗಳ ಅಂಗೀಕಾರ ಮತ್ತು ಸಂಘಟನೆಯ ಬಗ್ಗೆ ನಡೆದ ಸಂಗೋಷ್ಠಿಯ ನಿಷ್ಕರ್ಷದ ಚರ್ಚೆ ಇತ್ಯಾದಿಗಳು ಈ ಸಭೆಯಲ್ಲಿ ಚರ್ಚಿತವಾಗುವವು. ಡಿಸೆಂಬರ್ ೨೭-೨೮ರಂದು ಕಾರ್ಯಕರ್ತರ ಅಧಿವೇಶನ ನಡೆಯುವುದು. ಈ ಸಮ್ಮೇಳನಕ್ಕೆ ಈಗಾಗಲೇ ಸಂಘಟಿತವಾಗಿರುವ ರಾಮನಗರ, ಮಂಡ್ಯ, ಹಾಸನ, ದಕ್ಷಿಣ ಕನ್ನಡ ಮತ್ತು ಮಂಗಳೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕು ಮಿತ್ರ ಮಂಡಲಿಗಳು ತಮ್ಮ ಕ್ಷೇತ್ರದಿಂದ ಹೆಚ್ಚು ಜನ ಸರ್ವೋದಯ ಪ್ರೇಮಿಗಳನ್ನು ಕರೆದುಕೊಂಡು ಬರಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ -

ಅಧ್ಯಕ್ಷರು,
ಕರ್ನಾಟಕ ಸರ್ವೋದಯ ಮಂಡಲ
ದೂರವಾಣಿ : ೦೮೨೩೬ - ೩೧೬೩೪೪/ ೨೯೮೫೪
ಇವರನ್ನು ಸಂಪರ್ಕಿಸಬಹುದು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಂ.ಎಸ್.ರಂಗನಾಥ - ಬೆಂಗಳೂರು
ಶ್ರೀಮತಿ ಶಾರದಾ ಜಡೆ - ಸಾಂಗ್ಲಿ
ಶ್ರೀ ಕೆ.ಎಂ.ಲೋಕೇಶ - ನಾಗಮಂಗಲ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಪ್ರಾಂಶುಪಾಲರು, ಭಾರತೀ ಕಾಲೇಜು - ಕೆ.ಎಂ.ದೊಡ್ಡಿ
ಶ್ರೀ ಎಚ್.ಎನ್.ರಾಮಕೃಷ್ಣಯ್ಯ - ಹೊಳೆನರಸೀಪುರ
ಶ್ರೀ ಕೃಷ್ಣಮೂರ್ತಿ ಬಿಳಿಗೆರೆ - ಬಿಳಿಗೆರೆ
ಡಾ॥ ಕೆ.ಕಾಳಚನ್ನೇಗೌಡ, ಪ್ರಾಂಶುಪಾಲರು, ಮಹಾರಾಜಾ ಕಾಲೇಜು
ನಿರ್ದೇಶಕರು, ಗಾಂಧೀಭವನ
ಶ್ರೀ ಎಂ.ಜಯರಾಮು; ಪ್ರೊ॥ ಎಂ.ರಾಮಚಂದ್ರ - ಮೈಸೂರು
ಶ್ರೀಮತಿ ಕಮಲಮ್ಮಗುರು; ಶ್ರೀ ಎಚ್.ವಿ.ನಾಗರಾಜಮೂರ್ತಿ - ಬೆಂಗಳೂರು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ / ಶ್ರೀ ....

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.